ಚಿಂತನ ಬಯಲು

ತ್ರೈಮಾಸಿಕ ISSN 2278-2192

ಸಂಪುಟ : 12, ಸಂಚಿಕೆ : 2 ಅಕ್ಟೋಬರ್–ಡಿಸೆಂಬರ್ 2023
Volume : 12, Issue : 2 October - December 2023

ಚಿಂತನ ಬಯಲು

ಸಂಪಾದಕಿ
ರೇಶ್ಮಾ ಜಿ. ಭಟ್

ಸಂಪಾದಕೀಯ ಸಲಹೆ
ಡಾ. ಅಜಕ್ಕಳ ಗಿರೀಶ ಭಟ್
ಡಾ. ಶ್ರೀಧರ್ ಎಚ್.ಜಿ.
ಡಾ. ವರದರಾಜ ಚಂದ್ರಗಿರಿ
ಡಾ. ಜಿ.ಬಿ. ಹರೀಶ್
ಶ್ರೀ ಎಂ.ಎ. ಸುಬ್ರಹ್ಮಣ್ಯ

ಚಿಂತನ ಬಯಲು
ನಂ. 15–109, ಮೊಡಂಕಾಪು ಅಂಚೆ
ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574 219

CHINTHANA BAYALU
Kannada Quarterly; A Peer Reviewed Journal
Included in UGC - CARE List
Volume 12, Issue 2, October - December 2023

Edited, Published, Printed & Owned by
Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219
Karnataka
Mobile : 8217703698
Email : chinthanabayalu@gmail.com

© : Reserved

Size : Dy 1/8

Paper Used : 70 GSM

Pages : 64

Price : Rs. 50

ಮುಖಪುಟ ಛಾಯಚಿತ್ರಗ್ರಹಣ : **Atheetha Brahma**

Cover Design : **Kallur Nagesh**

Designed & Printed at :
Aakrithi Prints
Maximus Complex
Light House Hill Road
Mangaluru - 575 001
Tel. : 0824 2972002 / 7019225774

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಹಕ್ಕು ಆಯಾ ಲೇಖಕರದ್ದಾಗಿರುತ್ತದೆ. ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತವೆ. ಅವುಗಳು ಪತ್ರಿಕೆಯ ಅಭಿಪ್ರಾಯಗಳಾಗಿರಬೇಕೆಂದೇನಿಲ್ಲ.

ಪುಟನೋಟ

1. **ಕನಕದಾಸರ ಕೀರ್ತನೆಗಳಲ್ಲಿ ಸಮಾಜಮುಖಿಚಿಂತನೆ ಒಂದು ವಿವೇಚನೆ**
   ❖ ಡಾ. ಫಕೀರನಾಯ್ಕ ದುಂಡಪ್ಪ ಗಡ್ಡಿಗೌಡರ / 5

2. **ಗೊರೂರರ ಸಾಹಿತ್ಯ ಗ್ರಾಮೀಣ ಸಂಸ್ಕೃತಿಯ ಅನನ್ಯತೆಯ ಪ್ರತೀಕ**
   ❖ ಡಾ. ಗೋವಿಂದರಾಯ ಎಂ. / 10

3. **ಕುಟ್ಟಿತೆಯ್ಯಂ ಎನ್ನುವ ಆಡಿವೇಡನ್**
   ❖ ರೇಶ್ಮಾ ಭಟ್ / 17

4. **ದಾಖಲು ಸಾಹಿತ್ಯದಲ್ಲಿ ಕೃಷಿ ಮಾಹಿತಿ**
   ❖ ಡಾ. ಎಚ್.ಎಸ್. ವಿರೂಪಾಕ್ಷಪ್ಪ / 22

5. **ಜತ್ತಪ್ಪ ರೈ ಅವರ 'ಬೇಟೆಯ ನೆನಪುಗಳು' ಕೃತಿಯ ಅವಲೋಕನ**
   ❖ ಡಾ. ಮೋಹನ್‌ಕುಮಾರ ಕೆ.ಎಸ್. / 27

6. **ಸಂದರ್ಭ–ಔಚಿತ್ಯ**
   ❖ ಡಾ. ಎಸ್. ಆರ್. ಲೀಲಾ / 32

7. **ನಾ. ಮೊಗಸಾಲೆ ಅವರ 'ಇದ್ದೂ ಇಲ್ಲದ್ದು'**
   ❖ ಡಾ. ಬಿ. ಜನಾರ್ದನ ಭಟ್ / 35

8. **ಸೆಕ್ಯುಲರ್ವಾದ, ಏಕರೂಪ ನಾಗರೀಕ ಸಂಹಿತೆ ಮತ್ತು ಮುಸ್ಲಿಂ ವೈಯಕ್ತಿಕ ಕಾನೂನು**
   ❖ ಷಣ್ಮುಖ ಎ. / 46

9. **ಸಾಂಗತ್ಯ ಸಮ್ರಾಟ : ರತ್ನಾಕರವರ್ಣಿ**
   ❖ ಡಾ. ಪಾಟೀಲ ಶ್ರೀಕಾಂತ ವಿ. / 55

10. **ವಸುಧೇಂದ್ರರ ಎರಡು ಕಥೆಗಳು**
    ❖ ಡಾ. ದೇವಮ್ಮಣ್ಣಿ ಎಂ. / 60

ಸಂಪಾದಕೀಯ

ಕನ್ನಡದಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವವರ, ಪಿಎಚ್.ಡಿ. ಅಧ್ಯಯನ ಮಾಡುವವರ ಮತ್ತು ಲೇಖಕರ ಸಂಖ್ಯೆ ದಿನೇದಿನೇ ಹೆಚ್ಚುತ್ತಿದೆಯಾದರೂ ಸಾಹಿತ್ಯ, ಸಂಸ್ಕೃತಿ ಮತ್ತು ಸಮಾಜಕ್ಕೆ ಸಂಬಂಧಿಸಿದ ಉತ್ತಮ ಸಂಶೋಧನ ಲೇಖನಗಳನ್ನು ಬರೆಯುವವರ ಸಂಖ್ಯೆ ಕಡಿಮೆಯಾಗುತ್ತಿರುವುದು ಸತ್ಯ. ಅಂತಹ ಲೇಖನಗಳನ್ನು ಪ್ರಕಟಿಸಲಿಕ್ಕಾಗಿ ಇರುವ ಪತ್ರಿಕೆಗಳೂ ಕಡಿಮೆಯೇ. ಬಂದ ಲೇಖನಗಳ ಪೈಕಿ, ಇದ್ದುದರಲ್ಲಿ ಉತ್ತಮವಾದವುಗಳನ್ನು ಆಯ್ಕೆ ಮಾಡುವ ಅನಿವಾರ್ಯತೆ ಪತ್ರಿಕೆಗಳದು.

ಎಂದಿನಂತೆ ಈ ಸಂಚಿಕೆಯಲ್ಲಿಯೂ ವೈವಿಧ್ಯಮಯ ಲೇಖನಗಳಿವೆ. ಸಾಹಿತ್ಯ ವಿಮರ್ಶೆಯನ್ನು ತೆಗೆದುಕೊಂಡರೆ, ನವೋದಯ ಶೈಲಿಯ ಸಾಹಿತಿ ಗೊರೂರು ರಾಮಸ್ವಾಮಿ ಅಯ್ಯಂಗಾರರ ಸಾಹಿತ್ಯವನ್ನು ಪರಿಚಯಿಸುವ ಲೇಖನವಿರುವಂತೆಯೇ ಜತ್ತಪ್ಪ ರೈಗಳ ಕೃತಿ ಪರಿಚಯವಿದೆ. ನವ್ಯದ ಕಾಲಘಟ್ಟದಲ್ಲಿ ಬರೆಯಲಾರಂಭಿಸಿದ ಡಾ. ನಾ. ಮೊಗಸಾಲೆಯವರ ಕೃತಿಯ ಬಗ್ಗೆ ವಿಮರ್ಶೆಯಿರುವಂತೆಯೇ ಈಗಿನ ಕಾಲದ, ನವ್ಯೋತ್ತರ ಸಾಹಿತಿ ಎನ್ನಬಹುದಾದ ವಸುಧೇಂದ್ರ ಅವರ ಕಥೆಗಳ ಬಗ್ಗೆಯೂ ಒಂದು ಲೇಖನವಿದೆ. ಈ ಸಂಚಿಕೆಯಲ್ಲಿರುವ ಹೆಚ್ಚಿನ ಲೇಖನಗಳ ಗಾತ್ರ ಕಿರಿದಾದುದರಿಂದ ಹತ್ತು ಲೇಖನಗಳಿಗೆ ಅವಕಾಶವಾಗಿದೆ. ಓದುಗರು ಇಮೇಲ್ ಮೂಲಕ ಪ್ರತಿಕ್ರಿಯೆ ನೀಡಬಹುದು ಅಥವಾ ಪತ್ರಿಕೆಯ ದೂರವಾಣಿ ಸಂಖ್ಯೆ: 8217703698 ಇದಕ್ಕೆ ವಾಟ್ಸಪ್ ಸಂದೇಶವನ್ನು ಕೂಡ ಕಳುಹಿಸಬಹುದು.

–ಸಂ.

ಕನಕದಾಸರ ಕೀರ್ತನೆಗಳಲ್ಲಿ ಸಮಾಜಮುಖಿಚಿಂತನೆ ಒಂದು ವಿವೇಚನೆ

ಡಾ. ಫಕೀರನಾಯ್ಕ ದುಂಡಪ್ಪ ಗಡ್ಡಿಗೌಡರ
ಕನ್ನಡ ಸಹ ಪ್ರಾಧ್ಯಾಪಕರು
ಸ.ಪ್ರ.ದ. ಮಹಿಳಾ ಕಾಲೇಜು ಮತ್ತು ಕನ್ನಡ ಸ್ನಾತಕೋತ್ತರ ಅಧ್ಯಯನ ಕೇಂದ್ರ
ಬೈಲಹೊಂಗಲ–591102

ಪೀಠಿಕೆ

ಕನ್ನಡ ವಾಙ್ಮಯ ಪ್ರಪಂಚದಲ್ಲಿ ಶರಣ ಸಾಹಿತ್ಯದ ನಂತರ ವಿಶ್ವಮಟ್ಟದಲ್ಲಿ ಕಂಗೊಳಿಸಿದ ಶ್ರೀಮಂತ ಸಾಹಿತ್ಯವೆಂದರೆ ದಾಸ ಸಾಹಿತ್ಯ. ಶರಣಭಾವದ ಸಮಷ್ಟಿಯ ಪ್ರಜ್ಞೆ ಮತ್ತೆ ಗರಿಗೆದರಿ ರಾರಾಜಿಸಿದ ಸಂದರ್ಭವನ್ನು ನಾವು ದಾಸ ಸಾಹಿತ್ಯದ ಮುಖೇನ ಮನಗಾಣುತ್ತೇವೆ. ಶರಣರ ಸಮಾಜಮುಖಿ ಚಿಂತನೆಯ ದೃಷ್ಟಿ ದಾಸ ಸಾಹಿತ್ಯದ ಸೃಷ್ಟಿಯ ಮೂಲಕ ಮತ್ತಷ್ಟು ಪ್ರಕಾಶಿಸುವ ಹೊಂಗಿರಣವಾಯಿತು. ಶರಣ ಸಮೂಹದಂತೆ ದಾಸ ಸಮೂಹ ಸಮಾಜಮುಖಿ ಚಿಂತನೆಯಲ್ಲಿ ತಮ್ಮನ್ನು ಸಮರ್ಪಿಸಿಕೊಂಡು ಸುಂದರ ಸಮಾಜದ ರಚನೆಗೆ ಶ್ರಮಿಸಿತು. ಕೀರ್ತನ ಸಾಹಿತ್ಯದಲ್ಲಿ ಪುರಂದರದಾಸರ ಜೊತೆಯಲ್ಲಿ ನೆನಪಾಗುವ ಮತ್ತೊಂದು ಹೆಸರು ಕನಕದಾಸರದು. ಕನಕದಾಸರು ಒಬ್ಬ ಕವಿಯಾಗಿ, ಕಲಿಯಾಗಿ, ಹರಿದಾಸರಾಗಿ ಮತ್ತು ಶ್ರೇಷ್ಠ ಸಂತರಾಗಿ ಜಾತ್ಯಾತೀತ ಧೋರಣೆಯ ಆದರ್ಶವಾಗಿ ಕನ್ನಡ ಸಂಸ್ಕೃತಿಯನ್ನು ಗಡಿಯಾಚೆಗೂ ಪಸರಿಸಿ ಪ್ರಸಿದ್ಧರಾಗಿದ್ದಾರೆ.

ಹಾವೇರಿ ಜಿಲ್ಲೆಯ ಬಾಡ ಎಂಬ ಹಳ್ಳಿಯಲ್ಲಿ ಬೀರಪ್ಪ ಮತ್ತು ಬಚ್ಚಮ್ಮರ ಉದರದಲ್ಲಿ ಜನಿಸಿದ ಕನಕದಾಸರು ಕ್ರಿ.ಶ. 1508ರ ಅವಧಿಯಲ್ಲಿ ಜೀವಿಸಿದ್ದರೆಂಬುದು ವಿದ್ವಾಂಸರ ಅಭಿಪ್ರಾಯ. ಕಾಗಿನೆಲೆ ಆದಿಕೇಶವನ ಪರಮಭಕ್ತನಾದ ಕನಕದಾಸರು ಅವರ ನಾಮವನ್ನೇ ಅಂಕಿತವಾಗಿಟ್ಟುಕೊಂಡು ಕೀರ್ತನೆಗಳನ್ನು ರಚಿಸಿದ್ದು ವಿಶೇಷ. ಭೂಮಿ ಅಗೆಯುವಾಗ ದೊರೆತ ನಿಧಿಯ ಕಾರಣದಿಂದ ತಿಮ್ಮಪ್ಪ ಕನಕನಾಗಿ ಗುರುತಿಸಿಕೊಳ್ಳುತ್ತಾರೆ. ನಿಸ್ವಾರ್ಥಿಯಾದ ಕನಕದಾಸರು ತಮಗೆ ಸಿಕ್ಕ ಸಂಪತ್ತನ್ನೆಲ್ಲ ಬಡವರಿಗೆ ಮತ್ತು ದೇವಾಲಯದ ನಿರ್ಮಾಣಕ್ಕಾಗಿ ಹಂಚಲು ಮುಂದಾದ ನಿರ್ಧಾರ ಸಾಮಾಜಿಕ ಅಭಿವೃದ್ಧಿಯ ಕನಸಿಗೆ ಮುನ್ನುಡಿಯನ್ನು ಬರೆಯುತ್ತದೆ. ಯಾವುದೋ ಒಂದು ಕಾರಣದಿಂದ ಜೀವನದ ಬಗ್ಗೆ ವೈರಾಗ್ಯ ಉಂಟಾಗಿ ಹರಿದಾಸನಾಗಿ ಪುರಂದರದಾಸರೊಂದಿಗೆ ದಾಸಕೂಟದ ಉತ್ಕರ್ಷಕ್ಕಾಗಿ ಶ್ರಮಿಸಿ ಆರೋಗ್ಯಪೂರ್ಣ ಸಮಾಜ ಕಟ್ಟಲು ನಡೆಸಿದ ಪ್ರಯತ್ನ ಅದ್ವಿತೀಯ.

ಕನಕದಾಸರು ಕೀರ್ತನೆಗಳೊಂದಿಗೆ ಮೋಹಿನಿ ತರಂಗಿಣಿ, ರಾಮಧಾನ್ಯಚರಿತೆ, ಹರಿಭಕ್ತಿ ಸಾರ, ನಳ ಚರಿತೆ ಮುಂತಾದ ಕಾವ್ಯಗಳನ್ನು ರಚಿಸಿ ಸಮಾಜಮುಖಿ ಚಿಂತನೆಗಳನ್ನು ಸಾದರಪಡಿಸಿದ್ದಾರೆ. ಅವರ ಕೀರ್ತನೆಗಳು ವಿಶಿಷ್ಟ ರಚನೆಗಳಾಗಿದ್ದು ಸಾಹಿತ್ಯಿಕ ಮೌಲ್ಯಗಳನ್ನೊಳಗೊಂಡು ಸಂಭ್ರಮಿಸುತ್ತವೆ. ಅವರ ಸಮಾಜಿಕ ಕಳಕಳಿಯ

ಅಭಿವ್ಯಕ್ತಿ ಪ್ರತಿಭೆ ಮತ್ತು ಪಾಂಡಿತ್ಯಕ್ಕೆ ಸಾಕ್ಷಿಯಾಗಿದೆ. ಅವರ ಕೀರ್ತನೆಗಳಲ್ಲಿ ಭಕ್ತಿಮಾರ್ಗ ಮಾತ್ರವಲ್ಲದೆ ಜ್ಞಾನಮಾರ್ಗವು ಕಂಡುಬರುತ್ತದೆ. ಮುಖ್ಯವಾಗಿ ಸಾಮಾಜಿಕ ಕಳಕಳಿ ಹಾಗೂ ಪ್ರತಿಭಟನೆಯ ನಿಲುವುಗಳು ಎದ್ದುಕಾಣುತ್ತವೆ. ಶರಣರಂತೆ ಸಮಾಜದ ಅಂಕುಡೊಂಕುಗಳನ್ನು ತಿದ್ದಿ ಸ್ವಾಸ್ಥ್ಯಯುತವಾದ ಸಮಾಜವನ್ನು ನಿರ್ಮಿಸಲು ಹೋರಾಡುತ್ತಾರೆ. ಮಾನವಧರ್ಮದ ಸಂದೇಶವನ್ನು ಸಾರುವದರ ಮೂಲಕ ಲೋಕ ಜೀವನದ ಆದರ್ಶ ಮೌಲ್ಯಗಳ ಮಹತ್ವವನ್ನು ಜನಪ್ರೀಯಗೊಳಿಸುತ್ತಾರೆ. ಜಾತಿ ಪದ್ಧತಿ, ಮೂಢನಂಬಿಕೆ, ಅಸಮಾನತೆ, ಭಕ್ತಿ, ವೈರಾಗ್ಯ, ಮನೋವಿಕಾರ, ಒತ್ತಡದ ಬದುಕು, ಜೀವನದ ಸತ್ಯ ಮೊದಲಾದ ಮೌಲ್ಯಗಳ ಮೇಲೆ ಬೆಳಕು ಚೆಲ್ಲುತ್ತಾರೆ.

ಜಾತಿಭೇದ ವಿರೋಧ: ಕನಕದಾಸರು ಸಮಾಜದಲ್ಲಿ ಸಮಾನತೆಯನ್ನು ತರಲು ಶ್ರಮಿಸಿದವರು. ಜಾತಿ ಆಧಾರಿತ ಭೇದವನ್ನು ಖಂಡಿಸಿ ಮಾನವ ಕುಲ ಒಂದೇ ಎಂಬ ಸತ್ಯವನ್ನು ಪ್ರತಿಪಾದಿಸುತ್ತರೆ. ಜಾತಿಯ ಕಪಿಮುಷ್ಟಿಯಲ್ಲಿ ಸಿಕ್ಕಿಹಾಕಿಕೊಂಡು ಜಾತಿಯ ಜಾತ್ರೆಯಲ್ಲಿ ವಿಜ್ರಂಭಿಸುವ ಜನತೆಗೆ ಪ್ರಶ್ನೆ ಮಾಡುತ್ತಾರೆ.

ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರು ಬಲ್ಲಿರಾ?

ಜಲವೆ ಸಕಲಕುಲಕ್ಕೆ ತಾಯಲ್ಲವೆ?
ಜಲದ ಕುಲವೇನಾದರು ಬಲ್ಲಿರಾ?
ಜಲದ ಬೊಬ್ಬುಳಿಯಂತೆ ಸ್ಥಿರವಲ್ಲವೀ ದೇಹ
ನೆಲೆಯನರಿತು ನೀ ನೆನೆ ಕಂಡ್ಯ ಮನುಜ

ಕುಲದ ವಿಷಯದಲ್ಲಿ ಕನಕದಾಸರ ಮತ್ತೊಂದು ಕೀರ್ತನೆ ಸುಂದರವಾಗಿದೆ. 'ಕುಲ ಕುಲ ಕುಲವೆನ್ನುತಿಹರು' ಎಂಬ ಈ ಕೀರ್ತನೆಯು ಜಾತಿಯನ್ನು ನೆಚ್ಚಿ ಜೀವಿಸುವ ಮನಸ್ಸುಗಳಿಗೆ ನಯವಾಗಿ ಚುಚ್ಚಿ ಆತ್ಮಾವಲೋಕನಕ್ಕೆ ಗುರಿ ಮಾಡುತ್ತದೆ.

ಕುಲ ಕುಲ ಕುಲವೆನ್ನುತಿಹರು
ಕುಲವ್ಯಾವುದು ಸತ್ಯಸುಖವುಳ್ಳ ಜನರಿಗೆ

ಕೆಸರೊಳು ತಾವರೆ ಹುಟ್ಟಲುಅದತಂದು
ಬಿಸಜನಾಭಿನಿಗರ್ಪಿಸಲಿಲ್ಲವೆ
ಹಸುವಿನ ಮಾಂಸದೊಳುತ್ಪತಿ ಕ್ಷೀರವು
ವಸುಧೆಯೊಳು ಭೂಸುರರುಣ್ಣಲಿಲ್ಲವೆ

ಎಂಬ ನೀತಿಯ ಮೂಲಕ ಸಮಾಜದಲ್ಲಿಯ ಜಾತಿ ಭೇದವನ್ನು ನಾಶಮಾಡಿ ಸಾಮಾಜಿಕ ಸಮಾನತೆ ತರಲು ಯತ್ನಿಸಿದರು. ಕುಲದ ಬಗ್ಗೆ ಮಾತನಾಡುವ ನಿಮಗೆ ನಿಮ್ಮ ನಿಜವಾದ ಕುಲ ಗೊತ್ತೇನು? ಎಂದು ಪ್ರಶ್ನೆ ಮಾಡುತ್ತಾ ಭೂಮಿಯ ಮೇಲೆ ಭೇದಭಾವ, ಏಣಿ ಶ್ರೇಣಿ ವ್ಯವಸ್ಥೆ ಸೂಕ್ತವಲ್ಲ. ನೀರ ಮೇಲಿನ ಗುರುಳಿಯಂತಿರುವ ಮಾನವನ ಕಾಯ ಸ್ಥಿರವಲ್ಲ. ಇದ್ದಷ್ಟು ದಿನ ಸಾಮರಸ್ಯದಿಂದ ಜೀವಿಸಬೇಕು ಎಂಬ ಸತ್ಯವನ್ನು ತಿಳಿಸಿಕೊಡುತ್ತಾರೆ. ಅಷ್ಟೇ ಅಲ್ಲದೆ ಮಾನವನಿಗೆ ಜಾತಿ ಮುಖ್ಯವಲ್ಲ ಅವನ ಗುಣ ಶೀಲಗಳು ಮುಖ್ಯವೆನ್ನುತ್ತಾರೆ. ಆತ್ಮ, ಜೀವ, ತತ್ವೇಂದ್ರಿಗಳಿಗೆ ಕುಲವಿಲ್ಲ. ಪ್ರತಿಯೊಬ್ಬರ

ಆತ್ಮದಲ್ಲಿ ದೇವರು ನೆಲಸಿದ ಮೇಲೆ ಕುಲದ ಪ್ರಶ್ನೆಯೇ ಇಲ್ಲ ಎಂದು ಪ್ರತಿಪಾದಿಸುತ್ತಾ. ಸುಂದರ ಸಮಾಜದ ರಚನೆಗೆ ಕರೆ ನೀಡಿದ ಕ್ರಮ ಅವರ ಸಮಾಜಮುಖಿ ಚಿಂತನೆಗೆ ಸಾಕ್ಷಿಯಾಗಿದೆ. ಅಂತಹ ಸುಂದರ ಸಮಾಜವು ರಚನೆಯಾಗಬೇಕಾದುದು ಅಧ್ಯಾತ್ಮದ ಅರಿವಿನ ಮೂಲಕ ಎಂದು ಕನಕದಾಸರು ಹೇಳುತ್ತಾರೆ. ಹೀಗಾಗಿ ಅಧ್ಯಾತ್ಮದ ಸಾಧನೆಗೆ ಅಗತ್ಯವಾದ ದೇವರ ಮೇಲಿನ ಭಕ್ತಿ, ಅನನ್ಯ ವಿಶ್ವಾಸ, ವೈರಾಗ್ಯ ಇವೆಲ್ಲ ಎಲ್ಲರಿಗೂ ಸಿದ್ಧಿಸಬೇಕು. ಅದಕ್ಕೆ ಮಾನವರ ನಡುವಿನ ಅಸಮಾನತೆ, ಭೇದ ಭಾವ ಅಡ್ಡಿಯಾಗಬಾರದು ಎನ್ನುವ ನಿಟ್ಟಿನಲ್ಲಿ ಕನಕದಾಸರು ಕೀರ್ತನೆಗಳನ್ನು ಹಾಡಿದರು.

ಭಕ್ತಿ: ಕನಕದಾಸರು ಮುಕ್ತಿಗೆ ಭಕ್ತಿಯೇ ಸೋಪಾನವೆಂದು ಬಲವಾಗಿ ನಂಬಿದವರು. ಆದ್ದರಿಂದ ಅವರ ಸಮಾಜವಿಮರ್ಶೆಯೂ ಭಕ್ತಿಯನ್ನೇ ಮೂಲವಾಗಿ ಹೊಂದಿದೆ. ಸಮಾಜ ಸರಿಯಾಗಬೇಕಾದುದು, ಕುಲಕುಲವೆಂಬ ಭೇದ ತೊಲಗಬೇಕಾದುದು ಕೂಡ ಸರ್ವರಿಗೂ ಮುಕ್ತಿಯ ಅವಕಾಶಕ್ಕಾಗಿ. ಪರಮಭಕ್ತಿಯಿಂದ ಮಾತ್ರ ಪರಮ ಫಲ ಪಡೆಯಲು ಸಾಧ್ಯವೆಂಬ ಅವರ ಅಭಿಮತ ಅನೇಕ ಕೀರ್ತನೆಗಳಲ್ಲಿ ಅನಾವರಣಗೊಂಡಿದೆ. ಅಂತರಂಗದಲ್ಲಿ ಭಕ್ತಿಯೆಂಬ ಬೀಜ ಬಿತ್ತಿಕೊಂಡಾಗ ಮಾತ್ರ ಮಾನವತೆಯ ಫಲ ದೊರೆಯುತ್ತದೆ ಮತ್ತು ಸತ್ಯ, ನ್ಯಾಯ, ಧರ್ಮ, ಪ್ರಾಮಾಣಿಕತೆ, ಕರುಣೆ, ಮಮತೆ ಮತ್ತು ವಿಶ್ವ ಬಂಧುತ್ವದ ಭಾಗ್ಯ ಪ್ರಾಪ್ತವಾಗಿ ಸಮಾಜಮುಖಿ ಸೇವಕರಾಗಿ ಜೀವಿಸುವ ಶಕ್ತಿ ಬರುತ್ತದೆ ಎನ್ನುತ್ತಾರೆ. ಅದಕ್ಕಾಗಿ ಸೇವೆಯ ಭಾಗ್ಯವನ್ನು ಕರುಣಿಸುವಂತೆ 'ಬಾಗಿಲನು ತೆರೆದು ಸೇವೆಯನು ಕೊಡು ಹರಿಯೆ' ಎಂಬ ಕೀರ್ತನೆಯಲ್ಲಿ ಕೃಷ್ಣನಲ್ಲಿ ಕೋರಿಕೊಳ್ಳುವ ಪರಿ ಮನೋಜ್ಞವಾಗಿದೆ.

ಬಾಗಿಲನು ತೆರೆದು ಸೇವೆಯನು ಕೊಡು ಹರಿಯೆ
ಕೂಗಿದರು ಧ್ವನಿ ಕೇಳಲಿಲ್ಲವೇ ನರಹರಿಯೆ

ಈ ಕೀರ್ತನೆಯ ಮೂಲಕ ಭಗವಂತನ ಮೇಲಿನ ಅಚಲವಾದ ಭಕ್ತಿಯೇ ಮಾನವನ ದಿವ್ಯ ಶಕ್ತಿಯೆಂಬ ಸಂದೇಶ ಕೊಡುತ್ತಾರೆ. ನರಜನ್ಮಕ್ಕೆ ಬಂದ ಮೇಲೆ ಕಷ್ಟಗಳು ಸಹಜ. ಅವುಗಳೆಲ್ಲವನ್ನು ಮೆಟ್ಟಿ ನಿಲ್ಲಬೇಕೆಂದರೆ ದೇವರ ಅನುಗ್ರಹ ಬೇಕು ಎನ್ನುತ್ತಾರೆ. ಶ್ರೇಷ್ಠ ಭಕ್ತಿಯಿಂದ ಸರ್ವವನ್ನು ಗೆಲ್ಲಬಹುದು ಎಂಬ ಮಾತು ಕನಕದಾಸರಿಂದ ನಿಜವೆನಿಸುತ್ತದೆ. ಗಜೇಂದ್ರ, ಪ್ರಹ್ಲಾದ, ಅಜಮಿಳ, ದ್ರೌಪದಿ ಮೊದಲಾದವರು ಕಷ್ಟಕಾಲದಲ್ಲಿ ಧ್ಯಾನ ಮಾಡಿದೊಡನೆ ಅಭಯಹಸ್ತವ ನೀಡಿ ದರ್ಶನವ ನೀಡಿದಂತೆ ತನಗೂ ಆ ಭಾಗ್ಯವನ್ನು ಕರುಣಿಸು ಎಂಬ ಭಕ್ತನ ಮನವಿ ಸಂಸಾರದ ಸಂಕಟಗಳ ಪರಿಹಾರಕ್ಕೆ ಮತ್ತು ಆತ್ಮವಿಶ್ವಾಸದ ಬದುಕಿಗೆ ನಾಂದಿಯಾಗಿದೆ ಎಂಬ ಮಾತನ್ನು ಸಮರ್ಥಿಸುತ್ತದೆ.

ಭಗವಂತನ ಮೇಲೆ ಭಾರ: ಕನಕದಾಸರ ಆತ್ಮವಿಶ್ವಾಸಕ್ಕೆ ಭಗವಂತನ ಮೇಲಿರುವ ವಿಶ್ವಾಸವೇ ಆಧಾರ. ಕನಕದಾಸರು 'ತಲ್ಲಣಿಸದಿರು ಕಂಡ್ಯ ತಾಳು ಮನವೆ' ಕೀರ್ತನೆಯಲ್ಲಿ ಮಾನವನು ಸದಾ ಆತ್ಮವಿಶ್ವಾಸದಿಂದ ಬದುಕುವ ಭರವಸೆ ಮೂಡಿಸಿಕೊಳ್ಳಲು ಕರೆ ನೀಡುತ್ತಾರೆ. ದೃಢಸಂಕಲ್ಪದಿಂದ ಜೀವಿಸಿದಾಗ ಮಾತ್ರ ಎಲ್ಲವನ್ನು ಗೆಲ್ಲಲು ಸಾಧ್ಯವೆನ್ನುವ ಅವರು ಮೊದಲು ಮಾನವನು ಅನುಮಾನದಿಂದ ಮುಕ್ತವಾಗಬೇಕೆನ್ನುತ್ತಾರೆ. ಅದರಲ್ಲೂ ತಾಳ್ಮೆಯಿಂದ ಇದ್ದಾಗ ಮಾತ್ರ ಸರ್ವರೀತಿಯ ಸಮಸ್ಯಗಳಿಗೆ ಪರಿಹಾರವಿದೆ ಎಂಬ ಸೂತ್ರವನ್ನು ತಿಳಿಸಿದ್ದಾರೆ.

ತಲ್ಲಣಿಸದಿರುಕಂಡ್ಯ ತಾಳು ಮನವೆ
ಎಲ್ಲರನು ಸಲುಹುವನು ಇದಕೆ ಸಂಶಯವಿಲ್ಲ

ಬೆಟ್ಟದಾ ತುದಿಯಲ್ಲಿ ಹುಟ್ಟಿದ ವೃಕ್ಷಕ್ಕೆ
ಕಟ್ಟೆಯನು ಕಟ್ಟಿ ನೀರೆರೆದವರು ಯಾರೊ
ಹುಟ್ಟಿಸಿದ ದೇವತಾ ಹೊಣೆಗಾರನಾಗಿರಲು
ಗಟ್ಯಾಗಿ ರಕ್ಷಿಪನು ಇದಕೆ ಸಂಶಯವಿಲ್ಲ

ಕನಕದಾಸರ ಈ ಕೀರ್ತನೆ ವರ್ತಮಾನದ ಬದುಕಿಗೆ ಹಿಡಿದ ಕೈಗನ್ನಡಿಯಾಗಿದೆ. ಆಧುನಿಕ ತಂತ್ರಜ್ಞಾನ ಮತ್ತು ಸಂಸ್ಕೃತಿ ಹಾಗೂ ಸ್ವಾರ್ಥಬದುಕಿನ ಭರಾಟೆಯಲ್ಲಿ ಸಾಗಿದ ನಮಗೆ ಶಾಂತಿ ಸಮಾಧಾನಗಳೇ ಇಲ್ಲದಂತಾಗಿದೆ. ಸದಾ ಒತ್ತಡದ ಬದುಕಿನಲ್ಲಿ ಸಿಕ್ಕು ಒದ್ದಾಡುತಿದ್ದೇವೆ. ಸಂಪಾದನೆಯ ಬೆನ್ನು ಹತ್ತಿ ನೆಮ್ಮದಿಯನ್ನು ಕಳೆದುಕೊಳ್ಳುತಿದ್ದೇವೆ. ಇಂಥಹ ಸಂದರ್ಭದಲ್ಲಿ ಎಲ್ಲರನು ರಕ್ಷಿಸಲು ಭಗವಂತನಿರುವಾಗ ಚಿಂತೆಯೇಕೆ ಹೆತ್ತ ತಾಯಿ ತನ್ನ ಮಕ್ಕಳನ್ನು ರಕ್ಷಿಸುವಂತೆ ದೇವರು ಎಲ್ಲರನ್ನು ಕಾಪಾಡುವನು ಎಂಬ ಕನಕದಾಸರ ಭರವಸೆಯ ಮಾತು ಬದುಕಿಗೆ ಭದ್ರತೆಯನ್ನು ತಂದುಕೊಡುತ್ತದೆ.

ಹಿತೋಪದೇಶ: ಕನಕದಾಸರ ಪ್ರತಿ ನುಡಿಯು ಹಿತೋಪದೇಶದ ಹೊಂಗಿರಣವಾಗಿದೆ. ಪ್ರತಿಯೊಂದು ಕೀರ್ತನೆಗಳಲ್ಲಿ ಒಂದೊಂದು ಸುಂದರ ಹಿತೋಪದೇಶ ಕಂಡು ಬರುತ್ತದೆ. ಮಾನವ ಸದಾ ಸ್ವಾಭಿಮಾನದಿಂದ ಮತ್ತು ಉತ್ತಮ ಜ್ಞಾನದಿಂದ ಬದುಕಿದರೆ ಮಾತ್ರ ಜೀವನ ಸಾರ್ಥಕವಾಗುತ್ತದೆ ಎನ್ನುತ್ತಾರೆ. 'ಅಜ್ಞಾನಿಗಳ ಕೂಡೆ ಅಧಿಕ ಸ್ನೇಹ' ಎಂಬ ಕೀರ್ತನೆಯ ಮೂಲಕ ಈ ವಿಚಾರವನ್ನು ಸ್ಪಷ್ಟಪಡಿಸುತ್ತಾರೆ.

ಅಜ್ಞಾನಿಗಳ ಕೂಡೆ ಅಧಿಕ ಸ್ನೇಹಕ್ಕಿಂತ
ಸುಜ್ಞಾನಿಗಳ ಕೂಡೆ ಜಗಳವೇ ಲೇಸು

ಉಂಬುಡುವುದಕ್ಕಿಲ್ಲದರಸಿನೋಲಗಕಿಂತ
ತುಂಬಿದೂರೊಳಗೆ ತಿರಿದುಂಬುವದೇ ಲೇಸು
ಹಂಬಲಿಸಿ ಹಾಳ್ಹರಟೆ ಹೊಡೆಯುವದಕಿಂತ ಹರಿ
ಯೆಂಬ ದಾಸರ ಕೂಡೆ ಸಂಭಾಷಣೆಯೆ ಲೇಸು

ಈ ಸಾಲುಗಳು ವ್ಯಕ್ತಿತ್ವ ವಿಕಸನಕ್ಕೆ ದಾರಿದೀಪವಾಗಿದ್ದು, ಮಾನವನ ಉನ್ನತಿಗೆ ಉತ್ತಮ ಮಾರ್ಗದರ್ಶನ ಮಾಡುತ್ತವೆ. ಆತ್ಮಾಭಿಮಾನ ಮತ್ತು ಅಂತರಾವಲೋಕನದ ಪ್ರೇರಕ ಶಕ್ತಿಗಳಾಗಿ ಮಾನವನ ಮನಸಿನ ನೆಮ್ಮದಿಯ ಜೊತೆಗೆ ಆರೋಗ್ಯಪೂರ್ಣ ಸಮಾಜದ ರಚನೆಗೆ ಸಹಕಾರಿಯಾಗಿವೆ.

ವೈರಾಗ್ಯ ಭಾವ : ಕನಕದಾಸರದು ಅತ್ಯಂತ ಹರಿತವಾದ ಚಿಂತನೆ. ಮಾನವನು ಸಕಲ ಜೀವಿಗಳಿಗಿಂತ ತಾನೇ ಶ್ರೇಷ್ಟನೆಂದು ಜಂಭ ಕೊಚ್ಚಿಕೊಳ್ಳುವಾಗ ಸ್ಥಿರವಿಲ್ಲದ ಡಿಂಭದ ಸಂರಚನೆ ಮತ್ತು ಮಲೀನತೆಯನ್ನು ಕಂಡು ವೈರಾಗ್ಯ ಭಾವದಿಂದ 'ಯಾತರವನೆಂದುಸುರಲಿ' ಎಂಬ ಕೀರ್ತನದ ಮೂಲಕ ಕಾಯ ಮೆಚ್ಚಿ ಬದುಕುವ ಮನಸುಗಳಿಗೆ ಮನವರಿಕೆ ಮಾಡಿಕೊಡುತ್ತಾರೆ.

ಇಂದ್ರೀಯ ಸೂತಕ ದುರ್ಗಂಧ ಮಲಮೂತ್ರ
ಬಂದ ಠಾವಿನ ನಿಜಗುರುತನರಿಯೆ
ಬಂದದ್ದು ಬಚ್ಚಲಗುಣೆ ತಿಂದದ್ದು ಮೊಲೆ ಮಾಂಸ
ಅಂಧಕತನಗಿನ್ಯಾತರ ಕುಲವಯ್ಯ

ಹೀಗೆ ಕನಕದಾಸರು ನಶ್ವರ ಶರೀರದ ಮರ್ಮವನ್ನು ಎಳೆ ಎಳೆಯಾಗಿ ಚಿತ್ರಿಸುತ್ತಾ ಸಾಗುತ್ತಾರೆ. ಮಣ್ಣಿಂದ ಬಂದ ಕಾಯ ಮಣ್ಣಾಗಿ ಹೋಗುವದು ನಿಶ್ಚಯ. ಮೂರು ದಿನದ ಸಂತೆಯಲ್ಲಿ ನಾಲ್ಕು ಜನರ ನಡುವೆ ಚೆಂದಾಗಿ ಬದುಕಬೇಕೆನ್ನುವ ಪರಿ ರಮ್ಯವಾಗಿದೆ.

ಕನಕದಾಸರು ದಾಸಕೂಟದಲ್ಲಿ ಪ್ರತ್ಯೇಕವಾಗಿ ಎದ್ದುಕಾಣುವ ಪ್ರಮುಖ ಸಾಮಾಜಿಕ ಕ್ರಾಂತಿಕಾರಿ ಸಂತ ಕವಿ. ಇವರು ಭಾರತದ ಬುದ್ಧ, ಮಹಾವೀರ, ಬಸವ, ಅಲ್ಲಮಪ್ರಭು ಪ್ರತಿನಿಧಿಸಿದ ಜಾತಿಭೇದರಹಿತ, ಸರ್ವೋದಯ, ಸರ್ವಜನಕಲ್ಯಾಣ, ಸಮಾನತೆ ಮತ್ತು ಮೌಲ್ಯಾಧಾರಿತ ಜೀವನಾದರ್ಶವನ್ನು ಪ್ರತಿಪಾದಿಸಿದ್ದಾರೆ. ಈ ದಿಸೆಯಲ್ಲಿ ಕನಕದಾಸರ ಕೊಡುಗೆ ಅಮೂಲ್ಯವಾಗಿದೆ. ತಮ್ಮ ವೈಚಾರಿಕ ನಿಲುವಿನಿಂದ ಮನಸುಗಳನ್ನು ಬದಲಾಯಿಸಿ ಸುಂದರ ಸಮಾಜದ ನಿರ್ಮಾಣಕ್ಕಾಗಿ ಕೀರ್ತನ ಸಾಹಿತ್ಯ ಪ್ರಕಾರವೊಂದನ್ನು ಅಸ್ತ್ರವಾಗಿ ಬಳಸಿಕೊಂಡು ಸಮಾಜಮುಖಿ ವ್ಯಕ್ತಿತ್ವವಾಗಿ ಗುರುತಿಸಿಕೊಂಡರು. ಅವರು ರಚಿಸಿದ 'ರಾಮಧಾನ್ಯಚರಿತೆ'ಯ ಅವರ ವೈಚಾರಿಕತೆಯನ್ನು ಮತ್ತಷ್ಟು ಬೆಳಗುತ್ತದೆ.

ಪರಾಮರ್ಶನ ಸಾಹಿತ್ಯ

1) ಎಚ್.ಎಸ್. ವೆಂಕಟೇಶ ಮೂರ್ತಿ, ಕೀರ್ತನಕಾರರು. ಸ್ವಪ್ನ ಬುಕ್ ಹೌಸ್, ಬೆಂಗಳೂರು. 1975
2) ಪ್ರೊ. ಎ.ವಿ. ನಾವಡ ಮತ್ತು ಡಾ. ಗಾಯತ್ರೀ ನಾವಡ, ಸಾವಿರಾರು ಕೀರ್ತನೆಗಳು, ಅಂಕಿತ ಪ್ರಕಾಶನ, ಬೆಂಗಳೂರು, 2002
3) ಎಲ್ಲೆಸ್ಕೆ, ದಾಸ ಶ್ರೇಷ್ಠ ಕನಕದಾಸರ ಮೋಹಿಣಿ ತರಂಗಿಣಿ, ವಿದ್ಯಾರ್ಥಿ ಪ್ರಕಾಶನ ಗದಗ, 1994
4) ಡಾ. ಸಿ.ಎಂ. ವೀರಭದ್ರಯ್ಯ ಮತ್ತು ಡಾ. ಅನೀತಾ ಕೆ. ಗುಡಿ, ಗುಣಗ್ರಾಹಿ ಡಾ. ಜೆ.ಎಂ. ನಾಗಯ್ಯ ಅಭಿನಂದನ ಗ್ರಂಥ, ಡಾ. ಜೆ.ಎಂ. ನಾಗಯ್ಯ ಅಭಿನಂದನ ಸಮಿತಿ ಧಾರವಾಡ, 2019
5) ಡಾ. ಚಿ.ಸಿ. ನಿಂಗಣ್ಣ, ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ, ಸಿದ್ಧಲಿಂಗ ಪ್ರಕಾಶನ ಕಲಬುರ್ಗಿ, 2008
6) ಬಸವ ಪಥ ಮಾಸ ಪತ್ರಿಕೆಗಳು, ಬಸವ ಸಮಿತಿ, ಬೆಂಗಳೂರು

❖❖❖

ಗೊರೂರರ ಸಾಹಿತ್ಯ
ಗ್ರಾಮೀಣ ಸಂಸ್ಕೃತಿಯ ಅನನ್ಯತೆಯ ಪ್ರತೀಕ

ಡಾ. ಗೋವಿಂದರಾಯ ಎಂ.
ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್ – 527130

ಹೇಮಾವತಿ ತೀರದ ಗಾಂಧಿವಾದಿ, ಗೊರೂರಿನ ಗೊಮ್ಮಟ, ಸ್ವಾತಂತ್ರ್ಯ ಹೋರಾಟಗಾರ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಕನ್ನಡ ನವೋದಯ ಸಾಹಿತ್ಯ ಕಾಲಘಟ್ಟದ ವಿಶಿಷ್ಟ ಬರಹಗಾರರು. ತಮ್ಮ ಬದುಕು ಹಾಗೂ ಬರವಣಿಗೆಯ ಮೂಲಕ ಕನ್ನಡ ಜನಮನಕ್ಕೆ ಮುದವನ್ನು ನೀಡಿದ ನಲ್ಮೆಯ ಸಾಹಿತಿಗಳು. ಕನ್ನಡದ ಸಾಂಸ್ಕೃತಿಕ ಹಿರಿಮೆಯನ್ನು, ದೇಶ ಪ್ರೇಮವನ್ನು ಗ್ರಾಮೀಣ ಪ್ರದೇಶದಲ್ಲಿ ಕಂಡ ಅಪೂರ್ವ ಜೀವನಾನುಭವಗಳನ್ನು, ಹೇಮಾವತಿ ನದಿ ತೀರದ ಸುತ್ತಲಿನ ಜನಸಮುದಾಯದ ಬದುಕನ್ನು, ಹಳ್ಳಿಗರ ಮನೋಧರ್ಮದಿಂದ ಬರೆದ ಅಪ್ಪಟ ಜಾನಪದ ಸತ್ವದ ಸಾಹಿತಿಯಾಗಿದ್ದಾರೆ. ಮನೆಯ ಸಂಸ್ಕಾರ ಮತ್ತು ಗಾಂಧೀಜಿಯವರ ಪ್ರಭಾವದಿಂದ, ಅವರ ಒಡನಾಟದಿಂದ ಬಂದ ಸಂಸ್ಕಾರದ ಮೂಲಕ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡವರು. ಸ್ವಧರ್ಮ ಮತ್ತು ಗಾಂಧೀ ಧರ್ಮದ ಮೂಲಕ ಬದುಕು ಮತ್ತು ಬರಹವನ್ನು ರೂಪಿಸಿಕೊಂಡರೆಂದರೆ ತಪ್ಪಾಗಲಾರದು. ಗೊರೂರರ ಬರಹವನ್ನು ಅವರ ಬದುಕಿನಿಂದ ಬೇರ್ಪಡಿಸಲು ಸಾಧ್ಯವಿಲ್ಲ. ಹೇಮಾವತಿ ನದಿ ತೀರದ, ಗೊರೂರು ಗ್ರಾಮದ ಮಡಿಲಲ್ಲಿ ಹುಟ್ಟಿ ಗಾಂಧೀಜಿಯ ಆದರ್ಶಗಳನ್ನ ಅಂತರ್ಗತ ಮಾಡಿಕೊಂಡು, ಆ ಆದರ್ಶಗಳ ಮಡಿಲಲ್ಲಿ ಬೆಳೆದು ಬದುಕಿನ ಕೊನೆಯವರೆಗೂ ಸರಳತೆ ಸಜ್ಜನಿಕೆಯನ್ನೇ ತಮ್ಮ ಕ್ರಿಯಾ ಕೇಂದ್ರವನ್ನಾಗಿಸಿಕೊಂಡು ಬರೆದವರು. ಇವರು ಜೀವನದ ಬಹಳ ಸಣ್ಣ ಸಣ್ಣ ವಿಷಯಗಳನ್ನು, ಸ್ವಭಾವಗಳನ್ನು, ಸನ್ನಿವೇಶಗಳನ್ನು ತಮ್ಮ ಸಂವೇದನೆಗೆ ತಂದುಕೊಳ್ಳುವ ಮೂಲಕ ತಮ್ಮ ಸಾಹಿತ್ಯದಲ್ಲಿ ಅಚ್ಚಳಿಯದಂತೆ ಪಡಿಮೂಡಿಸಿದ್ದಾರೆ. ಕಥೆ, ಕಾದಂಬರಿ, ಪ್ರಬಂಧ, ಜೀವನ ಚರಿತ್ರೆ, ವಿಚಾರ ಸಾಹಿತ್ಯ, ಆತ್ಮಚರಿತ್ರೆ, ಸಾಹಿತ್ಯ, ಅನುವಾದ – ಹೀಗೆ ಸಾಹಿತ್ಯಕ್ಕೆ ವೈವಿಧ್ಯಮಯವಾದ ಕೊಡುಗೆಯನ್ನು ನೀಡುವ ಮೂಲಕ ಪ್ರಬಂಧ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

ಗೊರೂರರು ಹಾಸನದ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ಸಮಯದಲ್ಲಿ ರಾಷ್ಟ್ರೀಯ ಚಳುವಳಿಯ ಸ್ವರೂಪ ತೀವ್ರವಾಗಿದ್ದಾಗ, ಗಾಂಧೀಜಿಯವರು ಕೊಟ್ಟ ಚಳುವಳಿಯ ಕರೆಗೆ ಮಾರುಹೋಗಿ ಅದರಲ್ಲಿ ಭಾಗವಹಿಸುವುದರೊಂದಿಗೆ ಶಾಲಾ ಶಿಕ್ಷಣಕ್ಕೆ ಇತಿಶ್ರೀ ಹಾಡಿದರು. ಮುಂದೆ ಗಾಂಧೀಜಿಯವರ ಆಶ್ರಮವನ್ನು ಸೇರಿ ಗುಜರಾತ್ ವಿದ್ಯಾಪೀಠದ ವಿದ್ಯಾರ್ಥಿಯಾದರು. ಗಾಂಧೀಜಿಯವರ ನಿಕಟ ಸಂಪರ್ಕದಿಂದ ದೇಶ ಸೇವೆಯನ್ನು, ಗ್ರಾಮೀಣ ಪರಿಸರದ ಅಭಿವೃದ್ಧಿಯನ್ನು ತಮ್ಮ ಬದುಕಿನ ದಿನನಿತ್ಯದ ಮಂತ್ರವಾಗಿಸಿಕೊಂಡರು. ಗಾಂಧಿಯವರ ತತ್ವಗಳನ್ನು, ರಚನಾತ್ಮಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕೆಂಗೇರಿಯ

ಗುರುಕುಲಾಶ್ರಮ ಸೇರಿ ಹರಿಜನೋದ್ಧಾರ ಕಾರ್ಯದಲ್ಲಿ ಭಾಗವಹಿಸಿದರು. ತಾವು ಹುಟ್ಟಿದ ಹಳ್ಳಿ ಗೊರೂರಿಗೆ ಹಿಂತಿರುಗಿ 'ಮೈಸೂರು ಗ್ರಾಮ ಸೇವಾ ಸಂಘ'ವನ್ನು ಸ್ಥಾಪಿಸಿ, ನಿಜವಾದ ಗಾಂಧಿ ಅನುಯಾಯಿಯಾಗಿ ಗಾಂಧಿ ಗ್ರಾಮಸ್ವರಾಜ್ಯದ ಕಲ್ಪನೆಯನ್ನು ಅನುಷ್ಠಾನಗೊಳಿಸಲು ಪ್ರಯತ್ನಿಸಿದ್ದು ಗೊರೂರರ ಹೆಗ್ಗಳಿಕೆಯೇ ಸರಿ. ಕ್ವಿಟ್ ಇಂಡಿಯಾ' ಚಳುವಳಿಯಲ್ಲಿ ಭಾಗವಹಿಸಿ, ಜೈಲುವಾಸವನ್ನು ಅನುಭವಿಸಿದರು. ವಿದ್ಯಾರ್ಥಿ ದಿಸೆಯ ಅವಧಿಯಲ್ಲಿ ಗಾಂಧೀಜಿ ಅವರ ಮನಸ್ಸನ್ನು, ಬದುಕನ್ನು ತುಂಬಿಬಿಟ್ಟಿದ್ದರು. ಅವರು ಯಾವ ಕೆಲಸ ಮಾಡುವಾಗಲೂ 'ಗಾಂಧೀಜಿ ಇದಕ್ಕೆ ಏನು ಹೇಳಬಹುದು?' ಎಂದು ಯೋಚನೆ ಮಾಡುತ್ತಿದ್ದುದಾಗಿ ಅವರೇ ಬರೆದಿದ್ದಾರೆ.

"ಜೀವನದಲ್ಲಿ ಒಳ್ಳೆಯದ್ದೇನಿದೆ, ವಿಚಿತ್ರವಾದದ್ದೇನಿದೆ, ಸ್ವಾರಸ್ಯವಾದದ್ದೇನಿದೆ ಅದನ್ನು ಬರೆದೆ. ಆಮೇಲೆ ಸಣ್ಣ ಕಿರುಕುಳಗಳನ್ನು ನಾನು ಯೋಚಿಸುತ್ತಿರಲಿಲ್ಲ. ಯಾವ ತತ್ವವನ್ನೂ ಹಿಡಿದು ಬರೀಲಿಲ್ಲ. ಜೀವನದ ಅನುಭವಗಳನ್ನು ಹಾಗೆ ಬರೆದೆ. ಲವಲವಿಕೆ, ಮಾನವೀಯತೆಯ ಉತ್ತಮ ಅಂಶಗಳನ್ನು ಕಂಡು ಬರೆದಿದ್ದೇನೆ" ಎನ್ನುವ ಗೊರೂರರು ತಮ್ಮ ಸಾಹಿತ್ಯ ರಚನೆಯ ಬಗೆಗೆ ಸ್ಪಷ್ಟವಾದ ವಿವರಣೆಯನ್ನೇ ನೀಡಿದ್ದಾರೆ. ಆರ್. ಕೆ. ನಾರಾಯಣ್ ಅವರು ಓದುಗರಿಗೆ ಮಾಲ್ಗುಡಿಯನ್ನು ಪರಿಚಯಿಸುವುದಕ್ಕೆ ಮುನ್ನವೇ ತಮ್ಮ ಕೃತಿಗಳ ಮೂಲಕ ಗೊರೂರು ಅವರು ಗ್ರಾಮವನ್ನು ಪರಿಚಯಿಸಿದ್ದರು.

ಗೊರೂರ ದೃಷ್ಟಿಯಲ್ಲಿ ಹಳ್ಳಿಯ ಜೀವನ ಅತ್ಯಂತ ವೈವಿಧ್ಯಮಯವಾದದ್ದು ಅಷ್ಟೇ ಅಲ್ಲ; ಎಷ್ಟು ಮೊಗೆದರೂ ಕಡಿಮೆಯಾಗದ ಅಕ್ಷಯ ನಿಧಿಯಾಗಿದೆ. ಅವರ ಸಾಹಿತ್ಯಕ್ಕೆ ಪ್ರೇರಣೆ ಸ್ಫೂರ್ತಿ ಸತ್ವವನ್ನು ಒದಗಿಸಿದ್ದು ಹಳ್ಳಿಯ ಜೀವನ ಮತ್ತು ಅಲ್ಲಿಯ ಜನ. ಅಸಂಖ್ಯಾತ ವ್ಯಕ್ತಿತ್ವದ ವಿದ್ವಾಂಸರು ಮತ್ತು ವಿದ್ಯಾವಂತರನ್ನು ಹಳ್ಳಿಯಲ್ಲಿ ಕಂಡಿದ್ದಾರೆ. ಹಳ್ಳಿಯಲ್ಲಿ ಬಾಳಿದ್ದಾರೆ. ಆದರೆ ಹಳ್ಳಿಯ ಬಾಳನ್ನು ಗೊರೂರರಂತೆ ಅರ್ಥ ಮಾಡಿಕೊಂಡವರು, ಅರ್ಥಮಾಡಿಕೊಂಡು ಭಾವನೆಗಳಿಗೆ ರೂಪು ಕೊಟ್ಟವರು ತೀರ ಕಡಿಮೆ ಎನ್ನುವ ಮಾತನ್ನು 'ನಮ್ಮ ಊರಿನ ರಸಿಕರು' ಕೃತಿ ಎತ್ತಿ ಹಿಡಿಯುತ್ತದೆ. ಹಳ್ಳಿಯ ಜೀವನದ ಬಗೆಗೆ ಗೊರೂರಗಿರುವ ಶ್ರದ್ಧೆ, ನಿಜಕ್ಕೂ ಅದ್ವಿತೀಯವಾದದ್ದು. ಹಳ್ಳಿಯ ಜನಜೀವನ ಶ್ರದ್ಧೆಯುಳ್ಳವರು, ಸರಸಿಗಳು, ಸ್ನೇಹಪರರು, ಮುಗ್ಧರು, ನಿಷ್ಕಪಟಿಗಳು ಎನ್ನುವುದನ್ನು ಅವರು 'ನಮ್ಮ ಊರಿನ ರಸಿಕರು' ಕೃತಿಯಲ್ಲಿ ಚಿತ್ರಿಸಿದ್ದಾರೆ. ಮಲ್ಲಿಗೆ ಹಳ್ಳಿಯನ್ನು ಕುರಿತ ಗೊರೂರರ ಎಲ್ಲ ಪ್ರಬಂಧಗಳನ್ನು, ಕಥೆಗಳನ್ನು ಅವರದೇ ಒಂದು ಗ್ರಾಮಾಯಣದ ಭಾಗಗಳನ್ನಾಗಿ ಓದಬೇಕಾಗುತ್ತದೆ. 'ನಮ್ಮ ಊರಿನ ರಸಿಕರು' ಕೃತಿಯಲ್ಲಿ ವರ್ಣನೆಗೊಂಡಿರುವ ವ್ಯಕ್ತಿಗಳಲ್ಲಿ ರಂಗೇಗೌಡ ಮತ್ತು ಸೀನಪ್ಪ ಬಹು ಮುಖ್ಯರಾಗಿ ಕಂಡುಬರುತ್ತಾರೆ. ರಂಗೇಗೌಡನ ಬಾಳು, ಅವನ ಕಷ್ಟ ಸಹಿಷ್ಣುತೆ, ಅವನ ಹೆಂಡತಿಯ ಪ್ರೇಮ, ಅವನ ಕರ್ತವ್ಯ ಶ್ರದ್ಧೆ ಪಟ್ಟಣಿಗರನ್ನೂ ಕರಗುವಂತೆ ಮಾಡುತ್ತವೆ. ಈ ಕೃತಿಯಲ್ಲಿ ಬರುವ ವ್ಯಕ್ತಿಗಳು ಬಿಡಿಬಿಡಿಯಾಗಿ ಕಂಡರೂ, ಅವರೆಲ್ಲರೂ ವಿಶಿಷ್ಟ ಜೀವನದ ಪರಸ್ಪರ ಸಂಬಂಧವಿರುವ ಗ್ರಾಮ ಸಮಾಜದ ಅವಯವಗಳಾಗಿ, ಆ ಎಲ್ಲಾ ಅವಯವಗಳನ್ನು ಸೂತ್ರೀಕರಿಸುವ ಚೇತನಗಳಾಗಿ ಕಂಡುಬರುವುದನ್ನು ಗಮನಿಸಬಹುದಾಗಿದೆ. ಇಲ್ಲಿ ಹಿಂದೂ ಮುಸ್ಲಿಂ ಭಾವೈಕ್ಯಕ್ಕೆ ಸಾಕ್ಷಿಯಾಗಿರುವ ಶಾಲು ಸಾಬಿ, ಓದುಗರಿಗೆ ಹೆಚ್ಚು ಹತ್ತಿರನಾಗುತ್ತಾನೆ. ಹಳ್ಳಿಯ ಕಂದಾಚಾರದ ಪದ್ಧತಿಗಳು, ಓಬಿರಾಯನ ಕಾಲದ ಭಾವನೆಗಳು, ಹಬ್ಬ

ಹರಿದಿನಗಳಲ್ಲಿ ಆಚರಿಸುವ ರೂಢಿಗಳು, ಬ್ರಾಹ್ಮಣರ ಮತ್ತು ಬ್ರಾಹ್ಮಣೇತರರ ಮನೆಯಲ್ಲಿ ನಡೆಯುವ ಮದುವೆಯ ಸಂಪ್ರದಾಯಗಳು, ಜಾತ್ರೆಯಲ್ಲಿ ನಡೆಯುವ ಹರಿಸೇವೆ ಹಾಗೂ ಮಣೇವು ಹಾಕುವುದು, ಬಯಲಾಟದ ವಿವರಗಳು, ಕಾಫಿ ಕುಡಿಯುವುದರ ದೊಡ್ಡಸ್ತಿಕೆ, ರೈತನ ಮನೆಯ ಉಪ್ಪಿಟ್ಟಿನ ಅಂದ ಚಂದಗಳು ಹಾಗೂ ರೈತನ ಬಾಳು ಬದುಕು – ಈ ರೀತಿಯ ಗ್ರಾಮೀಣ ಪರಿಸರದ ಎಲ್ಲ ಸಂಗತಿಗಳು ಯಥಾವತ್ತಾಗಿ ಅಥವಾ ಸಂಕ್ಷೇಪವಾಗಿಯಾದರೂ ಚಿತ್ರಣಗೊಂಡಿರುವುದನ್ನು ಗಮನಿಸಬಹುದಾಗಿದೆ. ವಿವಿಧ ಜಾತಿಯ ಜನರನ್ನು ವರ್ಣಿಸುವಾಗ ಅದರಲ್ಲಿ ಅಂಧಾಭಿಮಾನಕ್ಕಾಗಲಿ, ಪೂರ್ವಗ್ರಹಕ್ಕಾಗಲಿ, ಜಿಗುಪ್ಸೆ ಆಗಲಿ ಎಳ್ಳಿನಷ್ಟು ಅವಕಾಶವಿಲ್ಲ. ಎಲ್ಲರಲ್ಲಿಯೂ ಒಳ್ಳೆಯದನ್ನೇ ಕಾಣುವ ಹಿರಿತನ ಮತ್ತು ಸಜ್ಜನಿಕೆ ಅವರ ಸ್ವಭಾವದ್ದಾಗಿದೆ. ಗೊರೂರರು ಜಾತಿ ನಿವಾರಣೆ ಅಥವಾ ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಕೇವಲ ಹೇಳಿದವರಲ್ಲ. ದಲಿತ ಮಗುವೊಂದನ್ನು ಸಾಕಿ ಸಲಹಿ ಉತ್ತಮ ಕುಟುಂಬವನ್ನು ನೋಡಿ ಮದುವೆ ಮಾಡಿದ ಹಿರಿತನ ಅವರಲ್ಲಿ ಕಾಣಬಹುದಾಗಿದೆ.

ಚಲನಚಿತ್ರವಾಗಿ ಬಹು ಯಶಸ್ಸನ್ನು ಪಡೆದ 'ಭೂತಯ್ಯನ ಮಗ ಅಯ್ಯು' ಇವರ 'ವೈಯಾರಿ' ಕಥಾ ಸಂಗ್ರಹದಲ್ಲಿರುವ ಒಂದು ಕಥೆ. ನೀಳ್ಗತೆ ಎಂದು ಕರೆಯಬಹುದಾಗಿದ್ದು, ಬೃಹತ್ ಕಾದಂಬರಿಗಾಗುವಷ್ಟು ಸಾಮಗ್ರಿಯನ್ನು ತನ್ನಲ್ಲಿ ಅಂತರ್ಗತಗೊಳಿಸಿಕೊಂಡಿದೆ. ಒಳಿತು ಕೆಡುಕುಗಳ ಪರಿಣಾಮವನ್ನು ಕುರಿತ ಗ್ರಾಮೀಣ ಪ್ರದೇಶದ ಒಂದು ಮನೆತನಕ್ಕೆ ಸೇರಿದ ಕಥೆ ಇದರ ವಸ್ತು. ಭೂತಯ್ಯ ಜಿಪುಣನಾಗಿದ್ದು, ಶೋಷಕನಾಗಿದ್ದು ನಿಷ್ಕರುಣೆಯಿಂದ ಕೂಡಿರುತ್ತಾನೆ. ಅವನ ಮಗ ಅಯ್ಯು ಕೂಡ ತಂದೆಯ ಕೆಲವು ಸ್ವಭಾವಗಳನ್ನು ಮೈಗೂಡಿಸಿಕೊಂಡಿರುತ್ತಾನೆ. ಇವರಿಬ್ಬರ ಪ್ರತಿಪಕ್ಷದವನಂತೆ ಇದ್ದ ಗುಳ್ಳ ಹಠ ದ್ವೇಷಗಳ ಸಾಕಾರ ಮೂರ್ತಿ. ಆದರೆ ಪ್ರವಾಹದಲ್ಲಿ ಬಿದ್ದ ಗುಳ್ಳನ ಹೆಂಡತಿಯನ್ನು ಪ್ರಾಣದ ಹಂಗು ತೊರೆದು ಅಯ್ಯು ರಕ್ಷಿಸುತ್ತಾನೆ. ಸೆರೆಮನೆಗೆ ಹೋಗಬೇಕಾಗಿದ್ದ ಗುಳ್ಳನನ್ನು ಅಯ್ಯು ಬಿಡಿಸುತ್ತಾನೆ. ಅಯ್ಯುವಿನ ಸಾಲ ತೀರಿಸಲು ಗುಳ್ಳ ಅವನ ಮನೆಯ ಆಳಾಗಿ ದುಡಿಯುತ್ತಾನೆ. ಇದು ಅವನ ಕರ್ತವ್ಯ ನಿಷ್ಠೆ. ಆದರೆ ಅವನು ತನ್ನ ದ್ವೇಷವನ್ನು ಮಾತ್ರ ಬಿಟ್ಟವನಲ್ಲ. ಮನುಷ್ಯ ಅವನು ರೂಢಿಸಿಕೊಂಡಿರುವ ಒಳ್ಳೆಯ ಸ್ವಭಾವವೇ ಕೊನೆಯಲ್ಲಿ ಜಯ ತಂದುಕೊಡುತ್ತದೆ ಎಂಬ ಅರ್ಥವಂತಿಕೆಯನ್ನು ಈ ಕಥೆ ತಿಳಿಸುತ್ತದೆ. ಮನುಷ್ಯ ಸ್ವಭಾವದ ಚಿತ್ರಣದಲ್ಲಿ ವಾಸ್ತವಿಕತೆಯನ್ನು ಕಟ್ಟಿ ಕೊಡುವ ಈ ಕಥೆ ಚಲನಚಿತ್ರವಾಗಿ ಕನ್ನಡಿಗರ ಜನಮನ ಗೆದ್ದಿರುವುದು ಮತ್ತು ಇಂದಿಗೂ ಅಂತಹ ವ್ಯಕ್ತಿಗಳು ಗ್ರಾಮೀಣ ಪ್ರದೇಶದಲ್ಲಿ ಇರುವುದನ್ನು ಗಮನಿಸಬಹುದಾಗಿದೆ. ಇಲ್ಲಿ ಬರುವ ಭೂತಯ್ಯನಂಥವರು ದೇವಯ್ಯನಂಥವರು ಅಯ್ಯುವಿನಂತವರು, ಗುಳ್ಳನಂಥವರು ಯಾವ ಕಾಲಕ್ಕೂ ಶಾಶ್ವತ ವ್ಯಕ್ತಿತ್ವಗಳಾಗಿ ಕಂಡು ಬರುತ್ತಾರೆ. ಹೆಂಗಸರ ಪಾತ್ರದಲ್ಲಿ ಬರುವ ಅಯ್ಯುವಿನ ಹೆಂಡತಿಯ ಪಾತ್ರವಂತೂ ಅತ್ಯಂತ ಕ್ರಾಂತಿಕಾರಿ ಹಾಗೂ ಗಟ್ಟಿ ವ್ಯಕ್ತಿತ್ವದಂತೆ ಕಂಡು ಬಂದಿದೆ. ಇಲ್ಲಿ ಬರುವ ಒಂದೊಂದು ಪಾತ್ರಕ್ಕೂ ಅದರದೇ ಆದ ಒಂದೊಂದು ಜೀವಂತಿಕೆ ಇದೆ. ಅವು ಅಂದು ಎಷ್ಟು ಪ್ರಸ್ತುತವಾಗಿದ್ದವೋ ಇಂದಿಗೂ ಅಷ್ಟೇ ಪ್ರಸ್ತುತತೆಯನ್ನು ಉಳಿಸಿಕೊಂಡು ಬಂದಿದೆ. ಈ ಕಥೆಯಲ್ಲಿ ಬರುವ ಒಂದು ನಿದರ್ಶನವನ್ನು ತಿಳಿಸುವುದಾದರೆ ಬಲಿಕೊಡುವ ಪ್ರಸಂಗವನ್ನು ಕಥೆಯಲ್ಲಿ ಹೇಳಿರುವುದು ಅಯ್ಯುವಿನ ಮಾನಸಿಕ ಪರಿಪಕ್ವತೆಯನ್ನು, ಬಸವಣ್ಣರಂಥ ಧೀಮಂತ

ವ್ಯಕ್ತಿತ್ವಗಳಿಗೆ ಹೋಲಿಸುವಂತಹದ್ದಾಗಿದೆ. ಕೋಣವನ್ನು ಕಡಿಯುವುದು, ಮೂಢನಂಬಿಕೆ ದಯವಿಟ್ಟು ನಿಲ್ಲಿಸಿ ಎಂದು ಬೇಡಿಕೊಂಡ ಇವನು ತಪ್ಪು ತಿಳಿಯುವಂತೆ ಮಾಡಿ ಜನರನ್ನು ಎತ್ತಿ ಕಟ್ಟಿ ಅವನ ಮನೆಗೆ ಮುತ್ತಿಗೆ ಹಾಕಿಸಲಾಗುತ್ತದೆ. ಎಲ್ಲರೂ ಅಯ್ಯುವಿನ ಮನೆಗೆ ನುಗ್ಗಿ ತಮಗೆ ಬೇಕಾದ ಕಾಗದ, ಪತ್ರ, ಒಡವೆ, ವಸ್ತು ಎಲ್ಲವನ್ನು ದೋಚಿ ಮನೆಗೆ ಬಿದ್ದಾಗ ಅಯ್ಯು ಕೊಂಚವೂ ಧೃತಿಗೆಡದೆ ಬೀದಿಗೆ ನಿಂತು ಎಲ್ಲವನ್ನೂ ನೋಡುತ್ತಾನೆ. ಇಂತಹ ಸಂದರ್ಭದಲ್ಲಿ ಊರಿನ ಜನಕ್ಕೆಲ್ಲ ಅಯ್ಯು ದೇವರಂತೆ ಕಂಡುಬರುವ ಸನ್ನಿವೇಶಗಳು ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಕಂಡುಬರುವುದನ್ನು ಗಮನಿಸಬಹುದಾಗಿದೆ. ಮನುಷ್ಯನ ಉತ್ತಮ ಸ್ವಭಾವದೊಂದಿಗೆ ಘರ್ಷಣೆ ನಡೆಯುವ, ದ್ವೇಷ, ಛಲ ಮುಯ್ಯಿ ತೀರಿಸಿಕೊಳ್ಳುವ, ಅಭಿಮಾನ, ದುರಹಂಕಾರ, ಸ್ವಾರ್ಥ – ಈ ರೀತಿಯ ಎಲ್ಲ ಭಾವನೆಗಳು, ಸಹಜೀವನ, ಸಹಬಾಳ್ವೆ, ಸಹೋದರತ್ವ ಇದರ ಮುಂದೆ ಕ್ಷುಲ್ಲಕವಾಗಿ ಕಾಣುವುದನ್ನು ಅಯ್ಯು ಮತ್ತು ಗುಳ್ಳರ ಪಾತ್ರಗಳ ಬೆಳವಣಿಗೆಯಾದಂತೆಲ್ಲ ಮನಸ್ಸು ಮಾಗುವುದನ್ನು ಇಲ್ಲಿನ ಪಾತ್ರಗಳು ಕಟ್ಟಿಕೊಡುತ್ತವೆ. ಜಾತಿ, ಧರ್ಮ, ರೋಷ, ದ್ವೇಷ, ಅಸೂಯೆ ಎಲ್ಲವನ್ನೂ ಮೀರಿದಾಗ ಮಾತ್ರ ಮನುಷ್ಯ ಮನುಷ್ಯನಾಗಿ ಸೌಹಾರ್ದಯುತವಾಗಿ, ಶಾಂತಿಯಿಂದ ಬಾಳಬಲ್ಲನೆಂದೂ, ಅಷ್ಟೇ ಅಲ್ಲ ಬಡತನವನ್ನು ಗೊರೂರರು ನೋಡುವಂತಹ ರೀತಿ ಕರುಣೆಯಿಂದಲ್ಲ. ಅದರಲ್ಲೂ ಕಿಚ್ಚು ಇದೆ ಸ್ವಾಭಿಮಾನವಿದೆ ಎಂಬುದನ್ನು ಮನೆಗಳನ್ನು ಕಟ್ಟಿಕೊಡುವುದರ ಮೂಲಕ ಒಂದು ಸಮುದಾಯವನ್ನು ಕಟ್ಟಿಕೊಡುವಂತಹ ಚಿತ್ರಣವನ್ನು ಈ ಕಥೆ ಒಳಗೊಂಡಿದೆ.

ಗೊರೂರರು ಹಳ್ಳಿಯ ಜೀವನವನ್ನು ಪ್ರೀತಿಯಿಂದ ಚಿತ್ರಿಸಿದರೂ ಅಲ್ಲಿನ ಮುಗ್ಧತೆ, ಸರಳ ಬಾಂಧವ್ಯ, ಸಹಕಾರ–ಸಹಬಾಳ್ವೆಗಳನ್ನು ಎತ್ತಿ ಹಿಡಿದರೂ ಆ ಬದುಕಿನ ಅಹಿತಕರ ಅಡ್ಡ ಹರಿವುಗಳ ಅರಿವು ಅವರಿಗಿದೆ ಎಂಬುದು ಅವರ ಸಾಹಿತ್ಯವನ್ನು ಓದಿದ ಯಾರಿಗಾದರೂ ಅನ್ನಿಸುತ್ತದೆ. ಈ ಬದುಕಿನ ಭಾಗವಾದ ಮೂಢನಂಬಿಕೆಗಳು, ಜಿದ್ದು, ದ್ವೇಷ, ಈರ್ಷ್ಯೆ ಇವುಗಳನ್ನು ಅರಿತಿದ್ದರು. ಹಾಗಾಗಿಯೇ ಡಾ. ಎಲ್.ಎಸ್. ಶೇಷಗಿರಿರಾಯರ ದೃಷ್ಟಿಯಲ್ಲಿ "ಗೊರೂರರ ಹಳ್ಳಿಯ ಜೀವನದ ಚಿತ್ರಗಳ ಶಿಖರ ಬೂತಯ್ಯನ ಮಗ ಅಯ್ಯು" ಎಂಬ ಮಾತನ್ನು ಒಪ್ಪಿಕೊಳ್ಳಬಹುದಾಗಿದೆ. ಈ ದೀರ್ಘ ಕತೆಯಲ್ಲಿ ಛಲ, ಕೆಟ್ಟತನಗಳ ಮೂರ್ತಿ ಸ್ವರೂಪದ ಬೂತಯ್ಯನ ವರ್ಣನೆಗೆ ಸುಮಾರು ಒಂದೂವರೆ ಸಾವಿರ ಪದಗಳನ್ನು ಮೀಸಲಿಟ್ಟಿದ್ದಾರೆ. ಸಾಯುವಾಗ ಮಗ ಅಯ್ಯುವಿಗೆ 'ರೈತರಿಗೆ ಅಯ್ಯೋ ಎಂದರೆ ಸಾಕು, ಆರು ತಿಂಗಳು ಪಾಪ ಸುತ್ತಿಕೊಳ್ಳುತ್ತೆ' ಎಂದು ಹೇಳಿ ಪ್ರಾಣಬಿಟ್ಟ ಬೂತಯ್ಯ ಕಥೆಯಲ್ಲಿ ಅಯ್ಯು, ಗುಳ್ಳರ ದ್ವೇಷ ಬಲಿಯುತ್ತ ಹೋಗಿ ಭಯಂಕರ ಸ್ವರೂಪವನ್ನು ಪಡೆಯುತ್ತದೆ. ಈ ಭಯಂಕರ ಬೆಂಕಿಯನ್ನು ಆರಿಸಲು ನದಿಯ ಉಗ್ರ ಪ್ರವಾಹದ ನೀರಿನಿಂದಲೇ ಸಾಧ್ಯವಾಗುತ್ತದೆ ಮತ್ತು ಅವನು ಸತ್ತಾಗ ಜನಸಾಮಾನ್ಯರು ನೀಡುವ ಪ್ರತಿಕ್ರಿಯೆ ಇಲ್ಲಿ ಮುಖ್ಯವಾಗುತ್ತದೆ.

ಗೊರೂರರು ಹಳ್ಳಿಯ ಬದುಕನ್ನು ಆಧರಿಸಿ, ಸುಮಾರು 140ಕ್ಕೂ ಹೆಚ್ಚಿನ ಕಥೆಗಳನ್ನು ಬರೆದಿದ್ದಾರೆ, ಅವುಗಳಲ್ಲಿ ಒಂದು ಹೊಸ ಜಗತ್ತನ್ನೇ ಸೃಷ್ಟಿಸಿಬಿಟ್ಟಿದ್ದಾರೆ ಎಂಬ ಅರಿವಾಗುತ್ತದೆ. ಜೋಡಿದಾರರಿಂದ ಪ್ರಾರಂಭವಾಗಿ ಕಾಲಾತೀತನಾದ, ನಿರ್ಲಿಪ್ತನಾದ, ಮೂರನೆಯ ಹೆಂಡತಿಯನ್ನು ಮದುವೆಯಾದ ಹದಿನಾಲ್ಕು ಮಕ್ಕಳ ತಂದೆ ಕರಿಯನವರೆಗೆ, ಎಲ್ಲ ವಯಸ್ಸಿನ, ಅಂತಸ್ತಿನ ಸ್ವಭಾವದ, ಬಹುದೊಡ್ಡ

ಸಂಖ್ಯೆಯ ಸ್ತ್ರೀ–ಪುರುಷರ ವೈವಿಧ್ಯಮಯ ಜಗತ್ತನ್ನೇ ಅವರ ವೈಯಾರಿ, ಶಿವರಾತ್ರಿ, ಉಸುಬು, ಗೋಪುರದ ಬಾಗಿಲು, ಕಮ್ಮಾರ ವೀರಭದ್ರಾಚಾರಿ ಮತ್ತು ಕನ್ಯಾಕುಮಾರಿ ಹಾಗೂ ಇತರ ಕಥೆಗಳು ಇಂತಹ ಸಂಕಲನದಲ್ಲಿ ಅವರು ಅಭಿವ್ಯಕ್ತಿಸಿದ್ದಾರೆ. ಹಳ್ಳಿಯ ಬದುಕನ್ನು ಭಾಷೆಯಲ್ಲಿ ಪುನರ್ ಸೃಷ್ಟಿ ಮಾಡಿದ ಗೊರೂರರು ಕೇವಲ ಹಳ್ಳಿ ಹಳ್ಳಿಯ ಬದುಕಿನ ಕಥೆಗಾರರು ಅಲ್ಲ. ಪಟ್ಟಣದ ಬದುಕಿನ ಹಲವು ಸೊಗಸಾದ ಕಥೆಗಳನ್ನು ಕೂಡ ಅವರು ಸೃಷ್ಟಿಸಿದ್ದಾರೆ.

ಗ್ರಾಮಗಳಲ್ಲಿ ನಡೆಯುವ ಸಾಮಾನ್ಯ ಘಟನೆಗಳಿಗೂ ಜೀವ ತುಂಬಿ ಮಹತ್ತಾದ ರೂಪಕ ಚಿತ್ರದಲ್ಲಿ ಹಿಡಿದು ಕೊಡುವ ಲೀಲಾಜಾಲ ಕಲೆ ಅವರಿಗೆ ಸಿದ್ದಿಸಿದೆ. 'ಬೈಲಹಳ್ಳಿ ಸರ್ವೆ' ಪ್ರಬಂಧ ಕೃತಿ ಇದಕ್ಕೆ ಒಂದು ಉತ್ತಮ ಉದಾಹರಣೆಯಾಗಿದೆ. ಇವರ ಪ್ರಮುಖ ಕಾದಂಬರಿಗಳಾದ ಊರ್ವಶಿ, ಮೆರವಣಿಗೆ, ಪುನರ್ಜನ್ಮ ಮತ್ತು ಹೇಮಾವತಿ – ಇವುಗಳಲ್ಲಿ ಗೊರೂರಿನ ಸುತ್ತಮುತ್ತಲಿನ ಸಮಾಜವನ್ನು ಸೂಕ್ಷ್ಮ ನೋಟದಿಂದ ನೋಡಿ ಅಲ್ಲಿನ ಸಮಸ್ಯೆಗಳನ್ನು ಸೃಜನಾತ್ಮಕವಾಗಿ ಗ್ರಹಿಸಿದ್ದಾರೆ. ತಮ್ಮ ಕಾದಂಬರಿಗಳಲ್ಲಿ ಸ್ವಾತಂತ್ರ್ಯದ ಹಂಬಲವನ್ನು ವ್ಯಕ್ತಪಡಿಸುವ ಜೊತೆಗೆ ಬಡವರ ಸಮಸ್ಯೆ, ದುಡಿಯುವ ಶ್ರಮಜೀವಿಗಳ ಬದುಕಿನ ಬವಣೆಯ ಸಮಸ್ಯೆ, ಜಾತಿ ಸಮಸ್ಯೆ ಮುಂತಾದ ಸಾಮಾಜಿಕ ಪಿಡುಗುಗಳನ್ನು ತೊಡೆದು ಹಾಕಲು ಪ್ರಯತ್ನಿಸಿದ್ದಾರೆ.

ಅವುಗಳಲ್ಲಿ ಪ್ರಮುಖವಾದ 'ಹೇಮಾವತಿ' ಕಾದಂಬರಿ ಸ್ವಾತಂತ್ರ್ಯಪೂರ್ವ ಕಾಲದ್ದಾಗಿದ್ದು, ಗಾಂಧೀಜಿಯವರ ಆದರ್ಶ, ಅವರ ತಾತ್ವಿಕ ಚಿಂತನೆ, ನೀತಿಪರ ವಿಚಾರಗಳೇ ಮನೆ ಮಾಡಿರುವುದನ್ನು ಕಾಣಬಹುದಾಗಿದೆ. ಸ್ವತಃ ಗಾಂಧಿವಾದಿಗಳಾದ ಗೊರೂರರು ಗಾಂಧೀಮೌಲ್ಯಗಳನ್ನು ಅತ್ಯಂತ ಸಹಜವಾಗಿ ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಇದೊಂದು ಸುಧಾರಣಾವಾದದ ನೆಲೆಯ ನೀತಿ ಪರವಾಗಿದ್ದು, ದಲಿತೋದ್ಧಾರದ ಕಥೆಯನ್ನು ಒಳಗೊಂಡ ಅಪರೂಪದ ಅದ್ಭುತ ಕಾದಂಬರಿಯಾಗಿದೆ. ಗೊರೂರರು ತಮ್ಮ ಸ್ವಂತ ಊರಾದ ಗೊರೂರಿನಲ್ಲಿ ಅನೇಕ ಪ್ರಗತಿಪರ ಕಾರ್ಯಗಳನ್ನು ಕೈಗೆತ್ತಿಕೊಂಡು ಬೇರೆ ಬೇರೆ ಜಾತಿಯ ಜನರ ಜೊತೆ ಜಾತಿ ಭೇದ–ಭಾವ ಮರೆತು ಜನಮುಖಿ ಕೆಲಸಗಳನ್ನು ಮಾಡಿದ್ದು, ಇದರ ಜೊತೆಗೆ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಕೈಂಕರ್ಯಗಳಲ್ಲಿ ತೊಡಗಿದ್ದು ಅವರ ನಿತ್ಯ ಜೀವನದ ಬದುಕಿನ ಕಥೆಯಾದರೆ, ಇವುಗಳನ್ನೆಲ್ಲ ಅತ್ಯಂತ ಪ್ರಜ್ಞಾಪೂರ್ವಕವಾಗಿ ತಮ್ಮ ಕಾದಂಬರಿಯಲ್ಲಿ ಹಿಡಿದಿಡುವ ಪ್ರಯತ್ನಗಳಿಗೆ ಅನೇಕ ಪಾತ್ರಗಳು ಸಾಕ್ಷಿಯಾಗಿವೆ.

ಗೊರೂರರು ಗ್ರಾಮ ಸಂಸ್ಕೃತಿಗೆ ಮತ್ತೊಂದು ಹೆಸರಾಗಿದ್ದು, ಜನಪದ ಸಾಹಿತ್ಯದ ಬಗ್ಗೆ ಬಲ್ಲವರಾಗಿದ್ದರು. ಗ್ರಾಮ ಸಂಸ್ಕೃತಿಯ ಪ್ರಭಾವದಿಂದಾಗಿ ಹಳ್ಳಿಗಳ ಬಗ್ಗೆ, ಅಲ್ಲಿಯವರ ಜನಜೀವನದ ಬಗ್ಗೆ, ಸಂಸ್ಕೃತಿ, ಭಾಷೆ, ಆಚಾರ – ವಿಚಾರ, ನಂಬಿಕೆ – ನಡವಳಿಕೆಗಳ ಬಗ್ಗೆ ತೆರೆದ ಮನಸ್ಸಿನಿಂದ ನೋಡುತ್ತಿದ್ದ ಫಲವಾಗಿ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ 'ಹಳ್ಳಿಯ ಹಾಡುಗಳು', 'ಹಳ್ಳಿಯ ಬಾಳು', ಮತ್ತು 'ಜನಪದ ಜೀವನ ದರ್ಶನ' ಎಂಬ ಕೃತಿಗಳನ್ನು ಹೊರತಂದಿದ್ದಾರೆ. ಜನಪದ ಸಾಹಿತ್ಯವನ್ನು ಇನ್ನೂ ಗಂಭೀರವಾದ ಶಿಸ್ತಾಗಿ ಪರಿಗಣಿಸದಿದ್ದ ಕಾಲದಲ್ಲಿ ಅವರು ಹಳ್ಳಿಯ ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದು ವಿಶೇಷವೇ ಸರಿ. ಜನಪದ ಗೀತೆಗಳಲ್ಲಿ ದೇವರು, ವರ್ಣನೆ, ಸಂಸಾರ ಎಂಬ ಪ್ರಧಾನ ಶೀರ್ಷಿಕೆಗಳಲ್ಲಿ ಅವರು ಗಳಿಸಿಕೊಟ್ಟ

ಸಾಹಿತ್ಯ ನಿಜಕ್ಕೂ ಗೌರವ ತರಿಸುವಂಥದ್ದು. ದೇವರೊಂದಿಗೆ ಗೆಳೆತನ, ಬೆವರಿನ ಆಳು, ಲೋಕದ ಬಂಧು, ಗಂಡ – ಹೆಂಡತಿ, ಪ್ರೇಮ – ಸಂಸಾರ, ಈ ಸಾಹಿತ್ಯದ ಸೊಗಸು ಮುಂತಾದ ಅಧ್ಯಾಯಗಳಲ್ಲಿ ಅವರು ಜನಪದ ಸಾಹಿತ್ಯದ ಮೂಲಕ ರೈತರ ಬದುಕನ್ನು ಕಟ್ಟಿಕೊಡುವ ಪ್ರಾಮಾಣಿಕವಾದ ಪ್ರಯತ್ನ ಮಾಡಿದ್ದಾರೆ. ಹಳ್ಳಿಯ ರೈತರಿಗೆ ಆನಂದದಲ್ಲಿ ಮೈಮರೆಯುವುದಕ್ಕೆ ಅವರಿಗೆ ಹೆಚ್ಚಾಗಿ ಬಾಹ್ಯ ಸೌಕರ್ಯಗಳು ಬೇಕಾಗುವುದಿಲ್ಲ. ಮದ್ದಲೆ ಇಲ್ಲದಿದ್ದರೆ ಮಡಿಕೆಯ ತಳವನ್ನೇ ಮದ್ದಲಿಯಾಗಿ ಉಪಯೋಗಿಸಿಕೊಂಡು ಅವರು ಸಂಭ್ರಮಿಸುವ ಹಾಡುಗಳು ಕುಣಿತಗಳನ್ನು ಅವರು 'ಹಳ್ಳಿಯ ಬಾಳು' ಕೃತಿಯಲ್ಲಿ ಸಂಗ್ರಹಿಸಿ ಕೊಟ್ಟಿದ್ದಾರೆ.

'ಜನಪದ ಜೀವನ ಮತ್ತು ದರ್ಶನ' ಕೃತಿಯಲ್ಲಿ ಜನಪದ ಸಾಹಿತ್ಯದಲ್ಲಿ ಪೌರಾಣಿಕ ಪ್ರಜ್ಞೆ ಮತ್ತು ಮೌಲ್ಯ, ಜನಪದ ಕಥೆಗಳು ಮತ್ತು ಜನಪದ ಜೀವನದ ದರ್ಶನ ಎಂಬ ಮೂರು ವಿಶೇಷ ಉಪನ್ಯಾಸಗಳು ಸೇರಿದ್ದು, ಮೊದಲ ಲೇಖನದಲ್ಲಿ ಜನಪದ ಸಾಹಿತ್ಯದಲ್ಲಿ ಪೌರಾಣಿಕ ಪ್ರಸಂಗಗಳಿದ್ದರೆ, ಎರಡನೇ ಲೇಖನದಲ್ಲಿ ಜನಪದ ಕಥೆಗಳ ಸ್ವಾರಸ್ಯಕರ ವಿಚಾರಗಳಿದ್ದು, ಶಿಷ್ಟ – ಜನಪದ ಸಾಹಿತ್ಯದ ಪರಸ್ಪರ ಕೊಳು ಕೊಡುಗೆಯನ್ನು ಗುರುತಿಸಿದ್ದಾರೆ. ಜನಪದ ಜೀವನವನ್ನು ಜನಪದ ಸಾಹಿತ್ಯ, ಕಲೆ, ಸಂಸ್ಕೃತಿಗಳಿಂದ ಹೊರತಾಗಿ ನೋಡುವುದು ಸಾಧ್ಯವಾಗುವುದಿಲ್ಲ ಎಂಬುದನ್ನು ಈ ಕೃತಿ ನಮಗೆ ಮನದಟ್ಟು ಮಾಡಿಕೊಡುತ್ತದೆ. "ನನ್ನ ಬಾಳನ್ನು ನಾನು ಈಗ ಹಿಂದಿರುಗಿ ನೋಡುವಾಗ ನಾನು ಸಾಹಿತಿಗಿಂತ ಹೆಚ್ಚಾಗಿ ಜನಸಾಮಾನ್ಯರ ಮನುಷ್ಯ. ರಾಜಕೀಯದಲ್ಲಿ ಗಾಂಧಿಯವರ ಅದಮ್ಯ ಚೇತನ ಶಕ್ತಿ, ತ್ಯಾಗ, ಆದರ್ಶಗಳಿಂದ ಪ್ರೇರಿತನಾಗಿ ಆ ಕ್ಷೇತ್ರದಲ್ಲಿ ನನ್ನಿಂದಾದ ಸೇವೆ ಸಲ್ಲಿಸಲು ಹೊರಟವ. ನಮ್ಮ ದೇಶದ ಜನಸಾಮಾನ್ಯರ ಜಾನಪದವೆಂದರೆ ನನಗೆ ಅವರಲ್ಲಿ ಅತ್ಯಂತ ಪ್ರೇಮ ಮತ್ತು ಅತೀವ ನಂಬಿಕೆ. ಇತರರಲ್ಲಿ ಇಲ್ಲವೆಂದಲ್ಲ. ಜಾನಪದ ಗುಣಗಳನ್ನು ಶಕ್ತಿಯನ್ನು ಹೆಚ್ಚು ಹೆಚ್ಚಾಗಿ ನೋಡಿದಂತೆ, ಭಾರತವನ್ನು ಆಧುನಿಕತೆಯ ಸರ್ವನಾಶದಿಂದ ತಪ್ಪಿಸಬಲ್ಲದು; ಅದೊಂದೇ ಎಂಬ ನಂಬಿಕೆ ದೃಢವಾಗುತ್ತಿದೆ" ಎಂದು ಗೊರೂರರು ತಮ್ಮ 'ಹಿನ್ನೋಟ'ದಲ್ಲಿ ಹೇಳಿದ್ದಾರೆ.

ಒಟ್ಟಾರೆಯಾಗಿ ಗೊರೂರರ ಕೃತಿಗಳು ಗ್ರಾಮೀಣ ಜನರ ಬದುಕಿನ ಮಾನವ ಸಂಬಂಧಗಳ ಪ್ರಾಮುಖ್ಯತೆಯನ್ನು ಮತ್ತು ಆ ಜನಜೀವನದ ಎಲ್ಲ ಮುಖಗಳನ್ನು ಪರಿಚಯಿಸುತ್ತವೆ. ಇಂದಿನ ಜನಜೀವನಕ್ಕೂ ಸೂಕ್ಷ್ಮದರ್ಶಿನಿಯಾಗಬಲ್ಲ ಅಂಶಗಳನ್ನು ಹೊಂದಿವೆ. ಸ್ಥಿತ್ಯಂತರ ಹೊಂದುತ್ತಿರುವ ಜನಜೀವನದ ರೂಪರೇಷೆಗಳು ಇವರ ಕೃತಿಗಳಲ್ಲಿ ಪ್ರತಿಬಿಂಬಿತವಾಗಿವೆ. ದೇವರುಗಳು ಮತ್ತು ಪೂಜಾರಿಗಳು, ಪಟೇಲ–ಶಾನುಭೋಗರು, ಜೋಡಿದಾರರು–ಸರ್ಕಾರಿ ಅಧಿಕಾರಿಗಳು, ಬ್ರಾಹ್ಮಣ–ಶೂದ್ರ ಸಂಬಂಧಗಳು, ಬ್ರಾಹ್ಮಣ–ದಲಿತರ ಸಂಬಂಧಗಳು, ಬ್ರಾಹ್ಮಣ ಮತ್ತು ಇತರ ವರ್ಗದ ಜನಗಳ ಸಂಬಂಧಗಳನ್ನು ಸೊಗಸಾಗಿ ಚಿತ್ರಿಸಿರುವ ಮತ್ತು ಗ್ರಾಮೀಣ ಬದುಕಿನ ವೈವಿಧ್ಯಮಯವಾದ ಜನಜೀವನವನ್ನು ಚಿತ್ರಿಸಿರುವ ಬಹುಮುಖ್ಯ ಬರಹಗಾರರಲ್ಲಿ ಗೊರೂರರು ಅಗ್ರಗಣ್ಯರು. ಗ್ರಾಮಗಳ ಉದ್ಧಾರ ನಮ್ಮ ಉದ್ದೇಶ, ಗ್ರಾಮಗಳು ಬೆಳೆಯೇ ಬೆಳೆಯುವುದು ದೇಶ, ದ್ವೇಷ ಅಸೂಯೆ, ಮನದಿಂದ ಕಳೆದು ನಾವೆಲ್ಲರೂ ಪ್ರೀತಿಯಿಂದ ಬದುಕಬೇಕಾದ ಅಗತ್ಯವನ್ನು ಅವರ ಎಲ್ಲಾ ಕೃತಿಗಳು ಕೂಡ ಸಾರಿ ಹೇಳುತ್ತವೆ. ಜಾತೀಯತೆ, ಅಜ್ಞಾನ, ಅಂಧಕಾರ, ಅಸ್ಪೃಶ್ಯತೆ, ಅಸಮಾನತೆಯನ್ನು

ನಿವಾರಿಸುವ ನಿಟ್ಟಿನಲ್ಲಿ ಭೂಮಿಯ ಮೇಲೆ ಬದುಕುವ ನಾವೆಲ್ಲರೂ 'ವಸುಧೈವ ಕುಟುಂಬಕಂ' ಎಂಬ ಹಿನ್ನೆಲೆಯಲ್ಲಿ ಬದುಕಬೇಕಾದ ಅಗತ್ಯತೆಯನ್ನು ಹೇಳುವ ಜೊತೆಗೆ ಎಲ್ಲರೊಳಗೊಂದಾಗಿ ಬದುಕುವ ಅಗತ್ಯತೆಯನ್ನು ತಮ್ಮ ಕೃತಿಗಳಲ್ಲಿ ಅಭಿವ್ಯಕ್ತಿಸಿದ್ದಾರೆ.

ಪರಾಮರ್ಶನ ಗ್ರಂಥಗಳು

1. ಹೇಮಾವತಿಯ ಚೇತನ., ಸಂ. ಕಮಲಾ ನರಸಿಂಹ., ಸುಮುಖ ಪ್ರಕಾಶನ, ಬೆಂಗಳೂರು.
2. ಹಳ್ಳಿಯ ಬಾಳು., ಗೊರೂರು ರಾಮಸ್ವಾಮಿ ಅಯ್ಯಂಗಾರ್., ಕಾವ್ಯಾಲಯ ಪ್ರಕಾಶನ, ಮೈಸೂರು.
3. ಸಾಹಿತ್ಯ ವಿಮರ್ಶೆ., ಸಂ. ಡಾ. ಜಿ ಪ್ರಶಾಂತ ನಾಯಕ್., ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

❖❖❖

ಕೋಟಿ ತಾರೆಗಳಿದ್ದರೂ
ಚಂದ್ರನೆಷ್ಟು ಒಂಟಿ
ಇರುವನೆಷ್ಟು ಕಾಲ ಅವನೀ
ಕತ್ತಲೆಗೆ ಅಂಟಿ?

ಕುಟ್ಟಿತೆಯ್ಯಂ ಎನ್ನುವ ಆಡಿವೇಡನ್

ರೇಶ್ಮಾ ಭಟ್
ಉಪನ್ಯಾಸಕಿ, ಸರಕಾರಿ ಪ್ರಥಮ ದರ್ಜೆ ಕಾಲೇಜು, ವಾಮದಪದವು, ದ.ಕ.

ಒಂದು ಕಥಾ ಸಂಕಲನವನ್ನು ಓದಿ ಮುಗಿಸಿದ ಮೇಲೆ (ಕಥೆಯಿರಬಹುದು, ಕವನ ಇರಬಹುದು, ಪ್ರಬಂಧ ಇರಬಹುದು) ನೆನಪಿನಲ್ಲಿ ಉಳಿಯುವ ಕಥೆಯೇ ಆ ಕಥಾ ಸಂಕಲನದ ನಮ್ಮ ಪಾಲಿನ ಅತ್ಯುತ್ತಮ ಕಥೆ ಎನ್ನಬಹುದು. ಯಾವುದೋ ಒಂದು ಹೇಳಲಾಗದ ಕಾರಣದಿಂದ ಅದು ನಮ್ಮ ಚಿತ್ತದಲ್ಲಿ ಒತ್ತಿ ಕುಳಿತಿರುತ್ತದೆ. ಬೇರೆಲ್ಲ ಅಷ್ಟರಲ್ಲಾಗಲೇ ಆವಿಯಂತೆ ಕರಗಿಹೋಗಿರುತ್ತವೆ, ಕೆಲವು ಅಲ್ಪ ಸ್ವಲ್ಪ ನೆನಪಿನೊಂದಿಗೆ ಇದ್ದು ಬಹಳ ಬೇಗನೆ ಅವುಗಳೂ ಕರಗಿಹೋಗುತ್ತವೆ. ನಿಮ್ಮ ಚಿತ್ತದಲ್ಲಿ ಉಳಿದುಕೊಂಡ ಆ ಕಥೆ ಶ್ರೇಷ್ಠ ಕಥೆಯೋ ಅಥವಾ ಎಲ್ಲರಿಗೂ ಇಷ್ಟವಾದ ಕಥೆಯೋ ಆಗಿರಬೇಕಾಗಿಲ್ಲ. ಇಷ್ಟೆಲ್ಲ ಯಾಕೆ ಹೇಳಬೇಕಾಗಿ ಬಂತು ಎಂದರೆ ಇತ್ತೀಚೆಗೆ ನಾನು ಓದಿದ ಒಂದು ಮಲಯಾಳಂ ಸಂಕಲನದ ಒಂದು ಸಣ್ಣ ಕಥೆ ನನ್ನ ಮನೋಭಿತ್ತಿಯಲ್ಲಿ ಇನ್ನೂ ಉಳಿದುಕೊಂಡಿದೆ. ನಮ್ಮ ಕಲಾವ್ಯಾಪಾರಗಳನ್ನೆಲ್ಲ ಮರುಪ್ರಶ್ನೆ ಮಾಡಬೇಕಾದ ಸಂದರ್ಭವೊಂದನ್ನು ಅದು ಸೃಷ್ಟಿಸುತ್ತದೆ. ಕಥೆಯ ಹೆಸರು 'ಆಟ'. ಕಥೆ ಓದುವ ಮೊದಲು ಈ ಶೀರ್ಷಿಕೆ ಯಾವ ಮೋಡಿಯನ್ನೂ ಮಾಡಲಾರದು. ನಂತರದಲ್ಲಿ ಅದಕ್ಕಿರುವ ಅನೇಕ ಅರ್ಥಗಳು ಬಿಚ್ಚಿಕೊಳ್ಳುತ್ತವೆ. ಇಲ್ಲಿ ಆಟ ಎಂದರೆ ಮಲಯಾಳಂನ 'ಕಳಿ' ಎಂಬರ್ಥದಲ್ಲಿ ಬಳಕೆಯಾದರೂ ಅದು ಕಥಕ್ಕಳಿ ಇತ್ಯಾದಿಗಳಲ್ಲಿ ಇರುವ 'ಕಳಿ', ನಮ್ಮ ದಕ್ಷಿಣ ಕನ್ನಡದಲ್ಲಿ ಯಕ್ಷಗಾನಕ್ಕೂ 'ಆಟ' ಎಂಬ ಆಡುಮಾತಿದೆ. ಈಗ ಕಥೆಯನ್ನು ನೋಡೋಣ.

ಬಾಲನ್ ಪಣಿಕ್ಕರ್ ಎಂಬ ಎಪ್ಪತ್ತು ಮೀರಿದ, ವಾರ್ಧಕ್ಯದಿಂದ ಜರ್ಝರಿತವಾದ ದೇಹದ ಒಡೆಯ ಈ ಕಥೆಯ ನಾಯಕನಾಗಿ ಕಾಣಿಸಿಕೊಳ್ಳುತ್ತಾನೆ. ಆತ 'ಕುಟ್ಟಿತೆಯ್ಯಂ' ಅಂದರೆ ಹದಿಮೂರು ವರ್ಷಕ್ಕಿಂತಲೂ ಕಡಿಮೆ ವಯಸ್ಸಿನ ಮಕ್ಕಳಿಗೆ ಕಟ್ಟುವ 'ತೆಯ್ಯಂ' (ನಮ್ಮ ಕರಾವಳಿಯ ಭೂತ) ಅನ್ನು ತನ್ನ ಬಾಲ್ಯದಲ್ಲಿ ಕಟ್ಟಿ ಆಡುತ್ತಿದ್ದವನು. ಇವರನ್ನು ಕಲಾವಿದರು ಎನ್ನುವುದಕ್ಕಿಂತ ದೈವಾರಾಧಕರು ಎಂದರೆ ಹೆಚ್ಚು ಸಮಂಜಸ. ಏಕೆಂದರೆ ಇವರು ಕಟ್ಟುವುದು ವೇಷವಲ್ಲ ದೈವದ ವೇಷ. ಕುಳಂಗಾಟ್ಟಂನ ಕೋರನ್ ಪಣಿಕ್ಕರ್ ತೀರಿಕೊಂಡ ಮೇಲೆ ಕುಟ್ಟಿತೆಯ್ಯಂ ಕಟ್ಟಿದವರಲ್ಲಿ ಈಗ ಈತನೇ ಹಿರಿಯ. ಹಾಗಾಗಿ ಡಾಕ್ಯುಮೆಂಟರಿ ಮಾಡುವವರು, ಸಂದರ್ಶನ ಮಾಡುವವರೆಲ್ಲ ಇವನ ಮನೆಗೆ ಎಡತಾಕುತ್ತಿರುತ್ತಾರೆ. ಹೀಗೆ ಬಂದವರಿಗೆ ಅತ್ಯುತ್ಸಾಹದಿಂದ ಆ ಕಾಲದ ಬನ್ನ ಬವಣೆಗಳೊಂದಿಗೆ ಎಲ್ಲವನ್ನೂ ಬಿಡದೆ ವಿವರಿಸುತ್ತಾನೆ ಬಾಲನ್ ಪಣಿಕ್ಕರ್. ಅಲನ್‌ಸಿಯರ್ ಹಾಗೂ ತಂಡ ಇದೇ ರೀತಿ ಕುಟ್ಟಿತೆಯ್ಯಂಗಳ ಬಗ್ಗೆ ಡಾಕ್ಯುಮೆಂಟರಿ ಮಾಡಲೆಂದು ಬರುವ ದೃಶ್ಯದೊಂದಿಗೆ ಕಥೆ ತೆರೆದುಕೊಳ್ಳುತ್ತದೆ.

'ಇವರಿಗೆ ಆಡಿವೇಡನ್ ತೆಯ್ಯವನ್ನು ಕಟ್ಟಿಯಾಡಿದ ಕಾಲದ ಎಲ್ಲಾ ವಿಷಯಗಳೂ ನೆನಪಿದೆ' ಎನ್ನುವ ಪಣಿಕ್ಕರ್ ಹೆಂಡತಿಯ ಮಾತು ಇಲ್ಲಿ ಗಮನಾರ್ಹ. (ಮನಸ್ಸಿಗೆ

ಆದಂತಹ ಗಾಯಗಳು ಬೇಗ ಮಾಯುವುದಿಲ್ಲವಲ್ಲ). ಹಾಗಾದರೆ ಈ 'ಆಡಿವೇಡನ್' ಯಾರು? 'ಕರ್ಕಾಟಕ (ಕಕ್ಕಡ ಯಾ ಆಟಿ) ಮಾಸದಲ್ಲಿ ಮನೆಮನೆ ಸಂದರ್ಶಿಸುವ ಕುಟ್ಟಿತೆಯ್ಯಂ ಅನ್ನು ಆಡಿವೇಡನ್ ಎನ್ನುತ್ತಾರೆ. ('ಕುಟ್ಟಿ' ಅಂದರೆ ಮಗು ಎಂದರ್ಥ ಮಲಯಾಳಂ ಬಾಷೆಯಲ್ಲಿ). 'ಆಡಿ' ಎಂದರೆ ಆಟಿ ತಿಂಗಳು 'ವೇಡನ್' ಎಂದರೆ ಬೇಡ (ವ್ಯಾಧ) ಎಂಬರ್ಥ ಇರಬಹುದು. ಒಟ್ಟರ್ಥದಲ್ಲಿ 'ಆಟಿಯ ಬೇಡ' (ಕೆಟ್ಟದ್ದನ್ನೆಲ್ಲ ಸಂಹರಿಸುವವನು) ಎಂದು ಹೇಳಬಹುದು. ಈ ಕುಟ್ಟಿತೆಯ್ಯಂನ ವೇಷವೆಲ್ಲ ದೊಡ್ಡ ತೆಯ್ಯಂನಂತೆಯೇ ಇರುತ್ತದೆ. ಮುಖದ ಪ್ರಸಾದನ, ಉಡುವ ಕಾಣಿ ಮುಂಡು, ಅಡಿಕೆ ಹಾಳೆಯ ತಲೆಕಾಪು ಇತ್ಯಾದಿ. ತುಂಬಾ ದೂರ ನಡೆಯಬೇಕಾಗಿರುವುದರಿಂದ ಕಾಲಿಗೆ ಗಗ್ಗರದ ಬದಲಿಗೆ ಗೆಜ್ಜೆಗಳಿರುತ್ತವೆ. (ಗಗ್ಗರದ ಭಾರ ಹೊರುವುದು ಕಷ್ಟವೆಂದೂ, ಗಗ್ಗರಕ್ಕೆ ಅದರದ್ದೇ ಆದ ಒಂದು ದೈವಿಕತೆ ಇರುವುದರಿಂದ, ಇಲ್ಲಿ ಆವೇಶ ಇತ್ಯಾದಿ ಇಲ್ಲದೆ ಇರುವುದರಿಂದಲೂ ಇರಬಹುದು). ಸೊಂಟದಲ್ಲಿನ ಉಡಿಗಂಟೆ, ಕೈಯಲ್ಲಿನ ಕಂಚಿನ ಗಂಟೆ ನಾದ ಹೊಮ್ಮಿಸಿ ಆಡಿವೇಡನ ಆಗಮನವನ್ನು ಸಾರುತ್ತವೆ. ಎತ್ತರದ ಸ್ಥಳದಲ್ಲಿ ನಿಂತು ಹಿರಿಯ ಮಲಯ (ತೆಯ್ಯ ಕಟ್ಟುವ ಜಾತಿಯವನು) ಚೆಂಡೆಯನ್ನು ಗಟ್ಟಿಯಾಗಿ ಬಡಿದು ತಮ್ಮ ಆಗಮನವನ್ನು ಊರಿನ ಭಕ್ತರಿಗೆ ತಿಳಿಸುತ್ತಾನೆ. ಹಿಂದೆ ಆಟಿ ತಿಂಗಳಲ್ಲಿ ಮನೆಮನೆಗೆ ಬರುತ್ತಿದ್ದ ನಮ್ಮ ಆಟಿ ಕಳೆಂಜವನ್ನು ಜ್ಞಾಪಿಸಿಕೊಳ್ಳಬಹುದು. ಆಟಿ ಕಳೆಂಜಕ್ಕೂ ಕಾಲಿಗೆ ಗೆಜ್ಜೆಯಿರುತ್ತದೆ, ಚೆಂಡೆಯ ಬದಲಿಗೆ ತೆಂಬೆರೆ ಎನ್ನುವ ಚರ್ಮವಾದ್ಯ ಇರುತ್ತದೆ. ಖಾಯಿಲೆ ಕಸಾಲೆಗಳನ್ನು ಕಳೆಯಲು ಬರುವವನು ಎಂದೇ ಪ್ರತೀತಿ. ಕಳೆಂಜ ಎಂದರೆ ಸಣ್ಣ ಬಾಲಕ ಎನ್ನುವ ಅರ್ಥವೂ ಇದೆ. ಆಡಿವೇಡನ ತಲೆಯಲ್ಲಿರುವಂತೆ ಕಳೆಂಜನ ತಲೆಯಲ್ಲೂ ಕೇಪಳ ಹೂವನ್ನು ಕಾಣಬಹುದು.

ಮನೆಯ ಅಂಗಳಕ್ಕೆ ಬಂದ ಈ ಕುಟ್ಟಿತೆಯ್ಯಂ ಮಲಯ ಹಾಡುವ ಪಾಡ್ದನದಂತಹ ಹಾಡಿಗೆ, ಅವನು ಬಡಿಯುವ ಚೆಂಡೆಯ ನಾದಕ್ಕೆ ತಕ್ಕಂತೆ ಕುಣಿಯುತ್ತಾನೆ. ಮನೆಯ ಯಜಮಾನಿ ಸುಣ್ಣ ಅರಸಿನ ಬೆರೆಸಿದ ಕುರುತಿ ನೀರಿನ ತಾಂಬಟ್ಟನ್ನೂ ಅದರಲ್ಲಿರಿಸಿದ ದೀಪವನ್ನೂ ತಂದು ಕುಟ್ಟಿತೆಯ್ಯಂನನ್ನು ಅದರಲ್ಲಿ ನಿವಾಳಿಸಿ ತೆಗೆದು ನೆಲದ ಮೇಲೆ ಬೋರಲಾಗಿಸುತ್ತಾಳೆ. ಆ ಮೇಲೆ ಅಕ್ಕಿ ತೆಂಗಿನಕಾಯಿ ಇತ್ಯಾದಿ ಕಾಣಿಕೆಗಳನ್ನು ಮಲಯನ ಜೋಳಿಗೆಗೆ ತುಂಬುತ್ತಾರೆ. ಮಲಯ ಚೆಂಡೆಯ ಕೋಲನ್ನು ಹಿಡಿದ ಕೈಯಿಂದಲೇ ಎಲ್ಲರಿಗೂ ಕೃತಜ್ಞತೆಯಿಂದ ನಮಿಸಿ ಇನ್ನೊಂದು ಮನೆಗೆ ಹೊರಡುತ್ತಾನೆ. ಈ ವಿವರಗಳನ್ನೆಲ್ಲ ಪಣಿಕ್ಕರ್ ಅಲನ್‌ಸಿಯರನ ಎದುರಿಡುತ್ತಾನೆ. 'ನಾವು ಅನುಭವಿಸಿದ ಬಡತನವನ್ನೆಲ್ಲ ಅವರಿಗೆ ಹೇಳಬೇಡ ಅಂತ ಮಗ ಹೇಳ್ತಾನೆ. ಅದು ಹೇಗೆ ಸಾಧ್ಯ? ಉಪವಾಸ ಇಲ್ಲದೆ ಮತ್ತೇನು ಆಡಿವೇಡನ್?' ಎನ್ನುವ ಪಣಿಕ್ಕರನ ಮಾತುಗಳ ಮೇಲೆಯೇ ಈ ಇಡೀ ಕಥೆ ನಿಲ್ಲುತ್ತದೆ. ಪಣಿಕ್ಕರನ ಮಗ ಮುರಳೀಧರ ಮುನ್ನೂರು ಮಂದಿ ಕೆಲಸಗಾರರಿರುವ ಪ್ರಸಿದ್ಧ 'ಅಜ್ಮೀರ್ ಕನ್‌ಸ್ಟ್ರಂಕ್ಷನ್' ಕಂಪೆನಿಯ ಒಡೆಯ. ಕೇರಳದ ಮಾಪಿಳ್ಳೆಗಳಿಗೆ ಮನೆ ಕಟ್ಟಿಕೊಡುವ ಈತ ಪಣಿಕ್ಕರರು ಸೂಚಿಸಿದ 'ಭಗವತಿ' ಎಂಬ ಹೆಸರನ್ನು ನಿರಾಕರಿಸಿ ಮಾಪಿಳ್ಳೆಗಳನ್ನು ಮೆಚ್ಚಿಸಲು 'ಅಜ್ಮೀರ್' ಎಂಬ ಹೆಸರನ್ನು ತನ್ನ ವ್ಯವಹಾರಕ್ಕೆ ಇಟ್ಟುಕೊಂಡವನು.

'ಈ ಆಡಿವೇಡನ್ ಮಿಥ್ ಕೊಡುವ ಸೋಷಿಯಲ್ ಮೆಸೇಜು ಏನು?' ಅಲನ್‌ಸಿಯರನ ಎರಡನೆ ಪ್ರಶ್ನೆಯನ್ನು ಪಣಿಕ್ಕರ್ ಮೊದಲೇ ಊಹಿಸಿರುತ್ತಾನೆ.

'ಕರ್ಕಾಟಕ ಮಾಸ ಎಂದರೆ ಪ್ರೇತ ಪಿಶಾಚಿಗಳು ಓಡಾಡುವ ಕಾಲವಾದ್ದರಿಂದ ಅವುಗಳು ರಾತ್ರಿ ಕಾಲದಲ್ಲಿ ಮನುಷ್ಯರನ್ನು ಹೆದರಿಸಿ ಬೆದರಿಸಿ ನಾಲಗೆ ಚಾಚಿ ನೆತ್ತರು ಹೀರಿ, ಜಲಚರಗಳನ್ನು ದೂರ ಅಟ್ಟಿ, ಹೀಚುಕಾಯಿಗಳನ್ನು ಕಿತ್ತು ನಾಶಪಡಿಸಿ, ದನಗಳ ಚರ್ಮವನ್ನು ಉಣ್ಣಿಯ ರೂಪದಲ್ಲಿ ಬಂದು ಕಚ್ಚಿ ರಕ್ತ ಹೀರಿ, ಬಿರುಗಾಳಿಯಾಗಿ ಬಂದು ಬಡವರ ಮನೆಯನ್ನು ಕೆಡವಿ, ಅವರ ಜಠರದೊಳಕ್ಕೆ ಹಸಿವಿನ ರೂಪದಲ್ಲಿ ಬಂದು ಅವರನ್ನೆಲ್ಲ ಹೈರಾಣಾಗಿಸುವ ದುಷ್ಟಾತ್ಮಗಳನ್ನು ಹೋಗಲಾಡಿಸಲು ಆಡಿವೇಡ ಬರುತ್ತಾನೆ. ಈ ಆಡಿವೇಡ ಪರಮಶಿವನ ಪ್ರತಿರೂಪ. ದೂರದಿಂದ ಘಂಟೆಯ ಶಬ್ದ ಕೇಳಿದೊಡನೆ ಪ್ರೇತ ಪಿಶಾಚಿಗಳೆಲ್ಲ ಆ ಜಾಗದಿಂದಲೇ ಓಡಿಹೋಗುತ್ತವೆ. ಜಗತ್ತಿಗೆ ಶಾಂತಿ ಸಮಾಧಾನಗಳು ಬಂದವೆಂದು ಖಚಿತವಾದ ಕೂಡಲೇ ಆಡಿವೇಡನ್ ವೇಷ ಕಳಚುತ್ತಾನೆ' ಎಂದು ಪಣಿಕ್ಕರ್ ಆಡಿವೇಡನ ಉದ್ದೇಶವನ್ನು ಅವರಿಗೆ ವಿವರಿಸುತ್ತಾನೆ.

ಈ ಆಡಿವೇಡನ ಕಥೆಯ ಮಧ್ಯದಲ್ಲಿ ಆ ಊರಿನ ಇತ್ತೀಚಿಗಿನ ಮೂರು ಕೋಮು ಕೊಲೆಗಳ ಬಗೆಗಿನ ಚರ್ಚೆಗಳೂ ನಡೆಯುತ್ತವೆ. 'ಮನುಷ್ಯರು ಯಾರು? ಪಿಶಾಚಿಗಳು ಯಾರು? ಎಂದು ಗುರುತು ಹಿಡಿಯುವುದೇ ಕಷ್ಟದ ಕೆಲಸ' ಎನ್ನುವ ಪಣಿಕ್ಕರನ ಹೆಂಡತಿಯ ಮಾತಿನಲ್ಲಿ ಈಗ ಆಡಿವೇಡ ಬಂದರೂ ಹೆಚ್ಚಿನ ಉಪಯೋಗವಾಗಲಾರದು ಎನ್ನುವ ಸೂಚನೆಯಿದೆ. 'ಅಸಲಿಗೆ ಈ ಪ್ರೇತ ಪಿಶಾಚಿಗಳನ್ನು ಓಡಿಸುವುದಕ್ಕೋಸ್ಕರವಲ್ಲ ಈ ಕುಟ್ಟಿತೆಯ್ಯಂ ಅನ್ನು ಕಟ್ಟಿ ಆಡುವುದು' ಎನ್ನುತ್ತಾ ತೆಯ್ಯಂ ಕಟ್ಟುವವರ ಆ ಕಾಲದ ಹಸಿವು ಬವಣೆಗಳನ್ನೂ, ಅದರಲ್ಲೂ ಮಳೆಗಾಲದ ಕೆಲಸವಿಲ್ಲದ ದಿನಗಳ ಕಷ್ಟಗಳನ್ನೂ ಪಣಿಕ್ಕರ ನೆನಪಿಸಿಕೊಳ್ಳುತ್ತಾನೆ. 'ನಡೆದೂ ನಡೆದೂ ಕಾಲಿನ ಚರ್ಮ ಕಿತ್ತುಹೋದಾಗ... ಮಳೆಯ ನೀರು ಅದಕ್ಕೆ ತಾಗಿ ಆಗುತ್ತಿದ್ದ ಉರಿಯಿಂದ ನಡೆಯಲಾಗದೆ ಕುಳಿತುಕೊಂಡಾಗ... 'ಏಳೋ ನಾಯಿಯ ಮಗನೇ' ಎಂದು ಅಪ್ಪ ಚೆಂಡೆ ಕೋಲಿನಿಂದ ಸೊಂಟಕ್ಕೆ ಬಾರಿಸುತ್ತಿದ್ದ ಏಟಿನ ಉರಿಗೆ ಕಣ್ಣಿನಿಂದ ನೀರು ಹರಿದಾಗ... ಆ ನೀರು ಜನರಿಗೆ ಕಾಣಬಾರದೆಂದು ತನ್ನನ್ನು ಹಿಂದೆ ಬಿಟ್ಟು ಮುಂದೆ ನಡೆಯುತಿದ್ದ ಅಪ್ಪನೂ ಕುಂಟುತ್ತಿದ್ದುದನ್ನು ಕಂಡಾಗ...' ಈ ಎಲ್ಲ ವಿವರಗಳನ್ನು ಪಣಿಕ್ಕರ ಕ್ಯಾಮರಾದ ಮುಂದಿಡುತ್ತಾ ಹೋಗುತ್ತಾನೆ. 'ಈಗ ಆಡಿವೇಡನನ್ನು ಆಡಿಸಲು ಸಾಧ್ಯವೇ?' ಅಲನ್‌ಸಿಯರನ ಪ್ರಶ್ನೆ. 'ಈಗ ಆಡಿವೇಡನನ್ನು ಕಟ್ಟಿ ಆಡಲು ಹುಡುಗರೇ ಸಿಗುತ್ತಿಲ್ಲ ಕಾರಣವೇನೆಂದರೆ ಎಲ್ಲರ ಕೈಯಲ್ಲೂ ಈಗ ಕಾಸಿದೆ... ಹಸಿದವನಿಗೆ ಮಾತ್ರ ಆಡಲು ಸಾಧ್ಯ.. ನೊಂದವನಿಗಷ್ಟೇ ಈ ಜಗತ್ತು ಚೆನ್ನಾಗಿ ಕಾಣಿಸಬೇಕೆಂದು ಅನಿಸುವುದು.. ತೆಯ್ಯಂ ಇಲ್ಲಾಂದ್ರೂ ಅದರ ವೇಷಭೂಷಣಗಳೆಲ್ಲ ಇಲ್ಲಿ ಭದ್ರವಾಗಿದೆ ನಿಮಗೆ ಅದನ್ನು ನೋಡಬೇಕೇನು?' ಕೆಂಪು ರೇಷ್ಮೆ ಬಟ್ಟೆಯಲ್ಲಿ ಕ್ಷೇತ್ರಪಾಲಕನ ಆಯುಧ, ಪೂಮಾರನ್‌ನ ತಲೆ, ಭಗವತಿಯ ಕಿರೀಟ.. ಜತನದಿಂದ ಸುತ್ತಿಡಲಾದ ಎಲ್ಲವನ್ನೂ ಅವರೆಲ್ಲ ಕುತೂಹಲದಿಂದ ನೋಡುತ್ತಾರೆ.

ತೆಯ್ಯಂನ ವಿಶುವಲ್ ಇರದೇ ಇದ್ದರೆ ಈ ಡಾಕ್ಯುಮೆಂಟರಿ ಯಶಸ್ವಿಯಾಗುವುದಿಲ್ಲ ಎಂಬುದು ಮುರಳೀಧರನಿಗೂ ಗೊತ್ತಿತ್ತು. ಹಾಗಾಗಿ ಈ ಆಡಿವೇಡನನ್ನು ಕಟ್ಟಿ ಆಡಲು ಸಾಧ್ಯವೇ? ಎಂಬ ಅಲನ್‌ಸಿಯರನ ಆಸೆಯನ್ನು ತಣಿಸಲು ಮುರಳೀಧರ ಹೊರಡುತ್ತಾನೆ. ಉತ್ತರದ ಭಾರತದ ಕಡೆಯ ಕಟ್ಟಡ ಕಾರ್ಮಿಕ ಹನ್ನೆರಡರ ಹರೆಯದ ಬಬ್ಲು ಎಂಬ ಮುಗ್ಧ ಹುಡುಗನನ್ನು (ಆತನಿಗೆ ಏನನ್ನೂ ತಿಳಿಸದೆ)

ಕರೆತರಲಾಗುತ್ತದೆ. ಸಿಮೆಂಟಿನ ಖಾರವನ್ನು ತಾಳಲಾರದೆ ಈತನ ಪಾದ ಈಗಾಗಲೇ ಸೀಳು ಹೊಡೆದಿರುತ್ತದೆ(ತೆಯ್ಯಂ ಕಟ್ಟುವ ಮೊದಲೇ). ಪಣಿಕ್ಕರ್ ಆತನನ್ನು ಚಾಪೆಯಲ್ಲಿ ಮಲಗಿಸಿ, ಪ್ರಸಾಧನವನ್ನು ಬಳಿದು, ತೆಂಗಿನ ಗರಿಗಳನ್ನು ಸೀಳಿ ಆತನ ಸೊಂಟದ ಸುತ್ತ ಕಟ್ಟಿ, ಭೂಷಣಗಳನ್ನೆಲ್ಲ ತೊಡಿಸಿ, ಕೈಯಲ್ಲಿ ಗಂಟೆಯನ್ನು ಹಿಡಿಸಿ, 'ಶಂಭೋ ಮಹಾದೇವ.. ಅಡೆತಡೆ ಬಾರದಂತೆ ರಕ್ಷಿಸು ತಂದೆಯೇ' ಎಂದು ಚೆಂಡೆಯ ಧ್ವನಿ ಮೊಳಗಿಸಿ ದೈವವನ್ನು ಸ್ತುತಿಸುತ್ತಾನೆ. ಬಬ್ಲು ಒಬ್ಬ ಅನುಭವಿ ನರ್ತಕನಂತೆ ಘಂಟೆಯನ್ನು ಆಡಿಸುತ್ತಾ ನರ್ತಿಸತೊಡಗುತ್ತಾನೆ. ಪಣಿಕ್ಕರನೂ ಆವೇಶ ಬಂದವನಂತೆ ಚೆಂಡೆಯನ್ನು ತೀವ್ರಗೊಳಿಸುತ್ತಾನೆ. ಇನ್ನು ಆಡಿವೇಡ ಬರುವುದಿಲ್ಲವೆಂದು ಬೇಕಾಬಿಟ್ಟಿ ತಿರುಗಾಡುತ್ತಿದ್ದ ಪಿಶಾಚಿಗಳೆಲ್ಲ ದಿಕ್ಕಾಪಾಲಾಗಿ ಓಡುವಷ್ಟು ಆಟ ಕಳೆಗಟ್ಟುತ್ತದೆ. ಎಲ್ಲವನ್ನೂ ಕ್ಯಾಮರಾ ಸೆರೆಹಿಡಿದಿಟ್ಟುಕೊಳ್ಳುತ್ತದೆ. 'ಹೇಗೂ ವೇಷ ಕಟ್ಟಿಸಿದ್ದೀರಲ್ಲ, ಕೊನೆಯ ಆಟವನ್ನು ಮುಗಿಸಿಬಿಡ್ತೀವಿ' ಎಂದು ಪಣಿಕ್ಕರನು ಬಬ್ಲುವನ್ನು ಕರೆದುಕೊಂಡು ಹತ್ತಿರದ ಬಯಲಿಗೆ ಇಳಿಯುತ್ತಾನೆ. ಅವನು ಈ ಆಟಕ್ಕಾಗಿ ಎಷ್ಟೋ ಸಮಯದಿಂದ ಹಸಿದು ಕಾದಿದ್ದವನಂತೆ ಇಡೀ ದಿನ ಆಡಿವೇಡನನ್ನು ಕರೆದುಕೊಂಡು ಮನೆಮನೆ ತಿರುಗುತ್ತಾನೆ. ಸಂಜೆ ಅವನನ್ನು ಶೆಡ್ಡಿನ ಹತ್ತಿರ ಕರೆದು ತಂದು, ಅಂದು ಆಡಿ ಸಿಕ್ಕಿದ ಎಲ್ಲವನ್ನೂ ಆತನ ತಾಯಿಯ ಕೈಯಲ್ಲಿಡುತ್ತಾನೆ. ಏನೋ ಒಂದು ತೃಪ್ತಿಯಿಂದ ಬಬ್ಲುವಿನ ತಲೆಯ ಮೇಲೆ ಕೈಯನ್ನಿಟ್ಟು ಬಾಗಿ 'ನೀನೇ ನನ್ನ ದೇವರು..' ಎನ್ನುತ್ತಾ ಆಡಿವೇಡನಿಗೆ ಭಕ್ತಿಯಿಂದ ನಮಿಸಿ, ಈ ದಿನದ ಆಟವನ್ನು ಇನ್ನು ಆಡಲು ಸಾಧ್ಯವಿಲ್ಲ ಎಂದುಕೊಂಡು ಮನೆಯ ಕಡೆ ಹೆಜ್ಜೆ ಹಾಕುತ್ತಾನೆ. ಕೂಡಲೇ ಹಿಂದಿನಿಂದ ಬಂದ 'ಸಾಬ್, ಮೇರಾ ಕಪಡಾ' ಎಂಬ ಬಬ್ಲುವಿನ ದನಿ ಕೇಳಿ ಬೆಚ್ಚುತ್ತಾನೆ. ಆದರೆ ಅದಕ್ಕೆ ಉತ್ತರ ಕೊಡಲು ಮಾತ್ರ ಪಣಿಕ್ಕರನಿಗೆ ಸಾಧ್ಯವಾಗುವುದಿಲ್ಲ.

'ಸರ್, ಲುಕ್ ದಿಸ್ ಈಸ್ ದ ಡ್ಯಾನ್ಸ್ ಆಫ್ ಪಾವರ್ಟಿ' ಬಬ್ಲುವಿನ ನರ್ತನ ನೋಡಿ ಅಲನ್‌ಸಿಯರನ ಜತೆಗಾರ ಜಾನ್‌ಪೋಲ್ ಹೇಳುವ ಮಾತು; ಹಸಿದವನಿಗೆ ಮಾತ್ರ ಆಡಲು ಸಾಧ್ಯ.. ಎನ್ನುವುದು ಪಣಿಕ್ಕರನ ಮಾತು; 'ಸಾಬ್, ಮೇರಾ ಕಪಡಾ' ಎಂದು ಬಬ್ಲು ಆಡುವ ಒಂದು ಮಾತು ಕಥೆಯ ಉದ್ದಕ್ಕೂ ಬರುವ ಈ ಎಲ್ಲಾ ಅಭಿಪ್ರಾಯಗಳಿಗೊಂದು ಉಪಸಂಹಾರದಂತಿದೆ. ಆಡಿವೇಡನ ವೇಷ ಹಾಕುವ ಮುನ್ನ ಆತ ಜಮೈಕನ್ ಹಾಡುಗಾರ (ಬಫೆಲೊ ಸೋಲ್ಜರ್ ಖ್ಯಾತಿಯ) ಬಾಬ್ ಮಾರ್ಲಿಯ ಮುಖದ ಚಿತ್ರವಿರುವ, ಹರಿದ ಟೀ ಷರ್ಟೊಂದನ್ನು ಧರಿಸಿರುತ್ತಾನೆ. ಮಂಡಿಯನ್ನು ಮೀರಿ ಕೆಳಗಿಳಿಯುತ್ತಿದ್ದ ಅದು ಬೇರೆ ಯಾರದ್ದೋ ಅಂಗಿ ಎನ್ನುವುದು ನೋಡಿದ ಎಲ್ಲರಿಗೂ ತಿಳಿಯುವಂತಿತ್ತು. ಪರಮ ಶಿವನ ಪ್ರತಿರೂಪವನ್ನು ಕಳಚಿದ ನಂತರ ಮಾನ ಮುಚ್ಚಲು ಆ ಅಂಗಿ ಅವನಿಗೆ ಅನಿವಾರ್ಯವಾಗಿರುತ್ತದೆ. ಅದು ತನಗೆ ಸಿಗದಿದ್ದರೆ ಏನು ಮಾಡುವುದು? ಎನ್ನುವ ಒಂದು ಆತಂಕ ವೇಗವಾಗಿ ಬಂದ ಆತನ ಪ್ರಶ್ನೆಯಲ್ಲಿ ಗೋಚರಿಸುತ್ತದೆ. ಬೇರೆ ಅಂಗಿ ಇದ್ದಿದ್ದರೆ ಆ ಮಟ್ಟಿನ ವೇಗ ಆ ಧ್ವನಿಗೆ ಇರುತ್ತಿರಲಿಲ್ಲವೇನೋ. ಹನ್ನೆರಡು ವರ್ಷ ಪ್ರಾಯದ, ಆಗ ತಾನೇ ಹರೆಯಕ್ಕೆ ಕಾಲಿಡುತ್ತಿದ್ದ ಆ ಬಾಲಕನ ಧ್ವನಿ, ಸಂವೇದನೆ ಇರುವ ಎಲ್ಲರ ಮನವನ್ನೂ ತಟ್ಟುತ್ತದೆ ಎಂಬುವುದನ್ನು, ಮರದ ಹಲಗೆಯೊಳಕ್ಕೆ ಮೊಳೆ ಹೊಡೆದರೆ ನುಗ್ಗುವಂತೆ ಆ ಪ್ರಶ್ನೆ ಪಣಿಕ್ಕರನ ದೇಹವನ್ನು ಇರಿಯಿತು ಎಂದು ಲೇಖಕರು ಹೇಳುತ್ತಾರೆ. ಪಣಿಕ್ಕರನ

ವಿಷಯಕ್ಕೆ ಬಂದರೆ, ಇನ್ನು ಆಡಿವೇಡನ ವೇಷಭೂಷಣಗಳ ಅಗತ್ಯ ಆತನಿಗೆ ಇರುವುದಿಲ್ಲ. ಏಕೆಂದರೆ ಆ ದಿನದ್ದು ಆತನ ಕೊನೆಯ ಆಟ. ಆದರೆ ಬಬ್ಲುವಿಗೆ? ಸಾಯುವ ತನಕ ಆಡಬೇಕಲ್ಲವೇ ಈ ಭೂಮಿಯ ಮೇಲಿನ ಆಟವನ್ನು. (ಹಾಗೆ ನೋಡಿದರೆ ಅಲನ್‌ಸಿಯರನದು, ಮುರಳೀಧರನದು, ಕೋಮು ಕೊಲೆಗಳದು... ಎಲ್ಲವೂ ಒಂದೊಂದು ಬಗೆಯ ಹಸಿವಿನ ಆಟಗಳೇ!) ಬಡತನ ಬಬ್ಲುವನ್ನು ಚೆಂದವಾಗಿ ಚೆಂಡೆಯ ಪೆಟ್ಟಿನ ತಾಳಕ್ಕೆ ಆಡುವಂತೆ ತಯಾರುಮಾಡಿರುತ್ತದೆ. ಬಾಬ್ ಮಾರ್ಲಿಯ 'ಬಫೆಲೊ ಸೋಲ್ಜರ್' ಹಾಡಿನಲ್ಲೂ ಆಫ್ರಿಕಾದಿಂದ ಕದ್ದು ತಂದ ಕಪ್ಪು ಜನರನ್ನು ಗುಲಾಮರನ್ನಾಗಿಸಿ ಅಮೇರಿಕಾಕ್ಕಾಗಿ ಯುದ್ಧಮಾಡುವ ಬಫೆಲೋ ಯೋಧರನ್ನಾಗಿಸಿದ ವಿಷಯವೇ ಇರುವುದು. ಬಬ್ಲುವಿನಂತೆ ಅವರೂ ಆ ಯುದ್ಧದ ಆಟವನ್ನು ಚೆನ್ನಾಗಿಯೇ ಆಡಿರುತ್ತಾರೆ!

ಇಂಗ್ಲಿಶ್ ವಸಾಹತುಶಾಹಿಯು ಸ್ಥಳೀಯ ಕಲೆ, ಸಂಸ್ಕೃತಿಗಳನ್ನು ಅರ್ಥಮಾಡಿಕೊಳ್ಳದೆ, ಅವೆಲ್ಲವೂ ಹಸಿವು ಬಡತನಗಳನ್ನು ನೀಗಿಕೊಳ್ಳಲು ಮಾಡಿಕೊಂಡ ಪರ್ಯಾಯ ದಾರಿಗಳು ಎಂಬ ಲಘುವಾದ ಅಭಿಪ್ರಾಯದ ವ್ಯಂಗ್ಯವನ್ನು ಈ ಬಾಬ್ ಮಾರ್ಲಿಯ ಉಲ್ಲೇಖದೊಂದಿಗೆ ಸಮೀಕರಿಸಿ ನೋಡಬಹುದು. 'ಡ್ಯಾನ್ಸ್ ಆಫ್ ಪಾವರ್ಟಿ' ಎನ್ನುವ ಜಾನ್‌ಪೋಲನ ಮಾತು ಇದನ್ನು ಪುಷ್ಟೀಕರಿಸುತ್ತದೆ. ರೊಟ್ಟಿ ಬಟ್ಟೆ ಮಾನವನ ಎಲ್ಲಾ ಅಗತ್ಯಗಳಿಗಿಂತಲೂ ಹಿರಿದಾದುದೆಂದು ಹೇಳುತ್ತಾ, ನಮ್ಮ ಆಚರಣೆಗಳನ್ನು ಈ ರೊಟ್ಟಿ ಬಟ್ಟೆಯ ನೆಲೆಯಿಂದ ಮಾತ್ರ ನೋಡಿದರೆ? ಹಾಗೊಮ್ಮೆ ನೋಡಿದರೂ ಅದಕ್ಕಿರುವ ದೈವಿಕ ಆಯಾಮಕ್ಕೇನೂ ಕೊರತೆಯಾಗುವುದಿಲ್ಲ. ಪಣಿಕ್ಕರನಿಗೆ ಈ ಎಲ್ಲಾ ಆಯಾಮಗಳ ಅರಿವಿದ್ದರೂ ಕುಟ್ಟಿತೆಯ್ಯಂ ಎಂಬುದು ಈಗಲೂ ಅವನಿಗೆ ದೈವಿಕವೇ! ಇದು ನಮ್ಮ ಸಂಸ್ಕೃತಿಯ ಒಂದು ವಿಶೇಷ ಎನ್ನೋಣವೇ? ನಮ್ಮ ಆಟಿ ಕಳೆಂಜನ ಹಿಂದೆಯೂ ಮಳೆಗಾಲದ ಅಗಾಧ ಹಸಿವು ಇದ್ದೇ ಇತ್ತಲ್ಲ!

ಇದು ಸಂತೋಷ್ ಏಚ್ಚಿಕಾನಂ ಎನ್ನುವ ಮಲಯಾಳೀ ಲೇಖಕರ 'ಬಿರಿಯಾನಿ ಮತ್ತು ಇತರ ಕಥೆಗಳು' ಎಂಬ ಸಂಕಲನದಲ್ಲಿರುವ ಒಂದು ಕಥೆ. ಇದನ್ನು ಕೆ.ಕೆ ಗಂಗಾಧರನ್ ಕನ್ನಡಕ್ಕೆ ತಂದಿದ್ದಾರೆ.

❖❖❖

ದಾಖಲು ಸಾಹಿತ್ಯದಲ್ಲಿ ಕೃಷಿ ಮಾಹಿತಿ

ಡಾ. ಎಚ್.ಎಸ್. ವಿರೂಪಾಕ್ಷಪ್ಪ
ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಿಪ್ಪನ್‌ಪೇಟೆ

ಪ್ರಾಚೀನ ಜನತೆಯ ಜೀವನಾನುಭವಗಳನ್ನು ಶಾಸನಗಳು ದಾಖಲಿಸಿವೆ. ಈ ಕಾರಣದಿಂದ ಶಾಸನಗಳು ದಾಖಲು ಸಾಹಿತ್ಯದ ಗುಂಪಿಗೆ ಸೇರುತ್ತವೆ. ಶಾಸನಗಳಲ್ಲಿ ಕೃಷಿ ಕುರಿತಾದ ಮಾಹಿತಿ ಬಿಡಿ ಬಿಡಿಯಾಗಿಯೂ, ಹೇರಳವಾಗಿಯೂ ಸಿಗುತ್ತವೆ. ಧಾರ್ಮಿಕ ಕಾರ್ಯಗಳಿಗೆ ನೀಡಿದ ದತ್ತಿ–ದಾನ, ಭೂದಾನ, ಬೆಳೆ, ಭೂಮಿ, ಬೆಳೆಯ ಸುಂಕ ಮುಂತಾದವುಗಳನ್ನು ದಾನರೂಪದಲ್ಲಿ ನೀಡಿದ ಉಲ್ಲೇಖಗಳು ಕಂಡುಬರುತ್ತವೆ. "ಶಾಸನಗಳು ಎಲ್ಲಾ ವಿಷಯವನ್ನು ಒಂದೇ ಕಡೆಗೆ ಒದಗಿಸಿಕೊಡುವ ಗ್ರಂಥಗಳಲ್ಲ. ಒಂದು ವಿಷಯಕ್ಕೆ ಸಂಬಂಧಿಸಿದ ವಿಷಯ ತುಂಡು ತುಂಡಾಗಿ ನೂರಾರು ಶಾಸನಗಳಲ್ಲಿ ಚದುರಿ ಹೋಗಿರುತ್ತದೆ" ಎಂದು 'ಶಾಸನಗಳಲ್ಲಿ ಕರ್ನಾಟಕದ ವರ್ತಕರು'ಎಂಬ ಕೃತಿಯಲ್ಲಿ ಬಿ.ಆರ್ ಹೀರೆಮಠ ಅಭಿಪ್ರಾಯ ಪಡುತ್ತಾರೆ. ಹೀಗಾಗಿ ಲಭ್ಯ ಶಾಸನಗಳಾಧಾರದಿಂದ ಕೃಷಿ ಸಂಬಂಧಿ ಮಾಹಿತಿ ಸಂಗ್ರಹಿಸಿ ಚರ್ಚಿಸಲಾಗಿದೆ.

ಭೂಮಿಗೆ ಸಂಬಂಧಿಸಿದ ಮಾಹಿತಿ: ಭೂಮಿಗೆ ಸಂಬಂಧಿಸಿದ ಅಂಶಗಳು ಶಾಸನಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಕರಿಯ ನೆಲ, ಮಸಂಬು, ಕೆಮ್ಮರಡಿ, ಬೆಂಚೆ ಬೆಣ್ಣೆದಂಡೆ, ಸಿಡಿಲಾಹರಿ, ಕಲ್ಲುಗುತ್ತಿ, ಅರಣಿ, ಕಲ್ಸಂದಿ, ಸೌಳ, ಕೆಂಗಣಿಗೆ, ದೊಡ್ಡಗುತ್ತಿ ಎರೆಯಹೊಲ ಇನ್ನು ಮುಂತಾದ ಹೆಸರುಗಳಿಂದ ಕರೆಯಲಾಗಿದೆ. ಒಣ ಬೇಸಾಯ ಅಥವಾ ಖುಷ್ಕಿ ಭೂಮಿಯನ್ನು ಹೊಲ ಮತ್ತು ಕೆಯೆ ಎಂದು ಕರೆಯಲಾಗುತ್ತದೆ. ನೀರಾವರಿ ಆಶ್ರಿತ ಭೂಮಿಯನ್ನು ನೀರಾರಂಭವೆಂದು, ತೋಟ, ಗದ್ದೆ ಎಂದೂ, ಕೃಷಿಗೆ ಮಳೆ ಆಶ್ರಿತ ಬಳಸಿದ ಭೂಮಿಯನ್ನು ಕಾಡಾರಂಭ ಎಂದು ಅನೇಕ ಶಾಸನಗಳಲ್ಲಿ, ಕಂಡುಬರುತ್ತದೆ.

ನಾಗಾಯಿ ಶಾಸನ 3, ನಾಗಾಯಿ ಶಾಸನ 3 ಬಿ ಮತ್ತು ಇತರ ಶಾಸನಗಳಲ್ಲಿ ಬೆಣ್ಣೆಯ ದಂಡಿ, ದೇವರ ಪೂಜೆಗೆ ಹೂದೋಟ, ನಿವೇಶನ, ನೀರಿನ ನೆಲ, ಗದ್ದೆ, ಕಂಗಣಿಯ ಗುಡ್ಡೆ ಮುಂತಾದ ಭೂಮಿಯನ್ನು ಅಳತೆ ಮಾಡಿಬಿಟ್ಟಿರುವ ಅಂಶ ಮತ್ತು ಹೊಲಗಳನ್ನು ಮಲೆಗಳ ಹೊಲ, ಸೌಳ ಹಳ್ಳದ ಹೊಲ, ಹಂಡಿಗಲು ಹೊಲ, ಕಮ್ಮದಲ ಕಾಲ ಎಂದು ನಾಗಾಯಿ ಶಾಸನದಲ್ಲಿ ಕರೆಯಲಾಗಿದೆ. [ನಾಗಾಯಿ–21 ಕ್ರಿ.ಶ 1093, ಪು–46] ಕುಕ್ಕನೂರು ಶಾಸನವೊಂದಲ್ಲಿ ನೀರಾರಂಭ ಬಿತ್ತಿದ ಗದ್ದೆ ವಕ್ಕಳಕ್ಕೆ ಸಲ್ಲುವರು ವಕ್ಕಳು ನೆಲ್ಲು ತೋಟ ವಂದಕ್ಕೆ ಕಂದಾಯಕ್ಕೆ ಹಣ... ವಂದುವುಪ್ಪಾರಲ್ಲಿ ಅಡವುಪ್ಪು ಖಂಡುಗಕ್ಕೆ ಸಲ್ಲುವುದು. ಗೌಡಕಿಯ ಮಾನ್ಯ ಹಳ್ಳಿಗಳಲ್ಲು ಸಹ ಯರೆ ಜೋಳದ ಬೀಜಾವರಿ ಮೂಂಘಂಡಗ ಮಸಬು ಖಂಡಗದ ಗದ್ದೆ... ನೀರಾರಂಭ, ಎರೆ, ಮಸಾರಿ ಮುಂತಾದ ಹೆಸರುಗಳಿಂದ ಭೂಮಿಯನ್ನು ಕರೆಯುತ್ತಿದ್ದ ಅಂಶ ಕಂಡು ಬರುತ್ತದೆ. ಅಲ್ಲದೇ ಭೂಮಿಯನ್ನು ಗುತ್ತಿಗೆ ನೀಡುವ, ಧಾರ್ಮಿಕ ಕಾರ್ಯಗಳಿಗೆ, ಅತಿಥಿಪಾಲನೆಗೆ ಮತ್ತು ದೇವರ ಕಾರ್ಯಗಳಿಗೆ ನೀಡಿರುವ ಅಂಶಗಳು ಕಾಣಸಿಗುತ್ತವೆ.

ಕೆಳದಿ ಸಂಪುಟದಲ್ಲಿ ತ್ಯಾಗರ್ತಿ ಅಗ್ರಹಾರದ ಶಾಸನದ ಪುಟ 9ರಲ್ಲಿ ಭೂಮಿಯನ್ನು ಉಳುಮೆ ಮಾಡಿಕೊಡಲು, ಒಂದೊಂದು ಬಗೆಯ ಬೆಳೆಯನ್ನು ಹಾಕಿರುವ ಭೂಮಿಗೆ ವರ್ಷವೊಂದಕ್ಕೆ ಬೇರೆ ಬೇರೆ ಬೆಲೆಯ ಗುತ್ತಿಗೆ ಹಣವನ್ನು ನೀಡುವ ಮಾಹಿತಿ ದೊರೆಯುತ್ತದೆ. ಅಲ್ಲದೇ ಕೋರಗಲ್ಲು ಶಾಸನದಲ್ಲಿ "...ಹುವಿನ ತೋಟದ ವ್ಯವಸಾಯಕೆ ವರಿಸ ಹುವ ನಡಿಸುವದಕೆ ಜೀವಿತಕು ಸಲವಾಗಿ ಕೊಟಗ 182 ತೋಟದ ಬೆವಸಾಯಕ ಜೀವಿತ 1 102..." (EC,VIX– ಪು.523), ಇಲ್ಲಿ ಗಮನಿಸುವ ಅಂಶವೆಂದರೆ ಭೂಮಿಯ ಬೆಸಾಯವನ್ನು ಮಾಡಿಕೊಡಲು ಹಣ ಗುತ್ತಿಗೆ ಕೊಡುವುದು, ಹೂವಿನ ತೋಟಕ್ಕೆ ಬೇರೆ ತೋಟಗಳಿಗಿಂತ ಹೆಚ್ಚಿನ ಹಣವನ್ನು ನೀಡಿ ಬೇಸಾಯ ಮಾಡಿಸುತ್ತಿರುವ ಅಂಶ ಕಂಡುಬರುತ್ತದೆ. ಅಂದರೆ ತೋಟದ ಬೇಸಾಯಕ್ಕೆ ಗ–102 ನೀಡಿದರೆ, ಹೂವಿನ ತೋಟದ ಬೇಸಾಯಕ್ಕೆ ಗ–182 ನೀಡುತ್ತಿರುವ ಅಂಶ ತಿಳಿಯುತ್ತದೆ.

ಬೆಳೆಗಳಿಗೆ ಸಂಬಂಧಿಸಿದ ಮಾಹಿತಿ: ಬೆಳೆಗಳಲ್ಲಿ ಜೀವನಾವಶ್ಯಕ ಬೆಳೆಗಳು ಎಂದರೆ ಆಹಾರ ಧಾನ್ಯಗಳು. ಇನ್ನು ಉಳಿದವುಗಳು ವಾಣಿಜ್ಯ ಬೆಳೆಗಳೆಂದು ಗುರುತಿಸಲಾಗುತ್ತದೆ, ಬೆಳೆ ಬೆಳೆಯುವ ವಿಧಾನವನ್ನು ಪೂರ್ಣವಾಗಿ ಶಾಸನಗಳಲ್ಲಿ ಕಾಣಲು ಸಾಧ್ಯವಿಲ್ಲವಾದರೂ ಬೆಳೆಗಳ ಹೆಸರು, ದೇವರಿಗೆ ದಾನ ನೀಡಿರುವ ಬಗೆ ಮತ್ತು ಬೆಳೆಗೆ ವಿಧಿಸುವ ಸುಂಕಗಳನ್ನು ಸಾಂದರ್ಭಿಕವಾಗಿ ಅಲ್ಲಲ್ಲಿ ಹೇಳಲಾಗಿದೆ. ನಿಂಬರ್ಗಿ ಶಾಸನವೊಂದರಲ್ಲಿ ಬೆಳೆಗಳನ್ನು ಕುರಿತಾದ ವರ್ಗೀಕರಣ ಕಂಡು ಬರುತ್ತದೆ. ಅದರಲ್ಲಿ ಎರಡು ವಿಧಗಳನ್ನು ಗುರುತಿಸಬಹುದು. "ಆಲಂದ ಸಾಸಿರ ನಾಡಿನ ವಿವಿಧ ಬೆಳೆಗಳನ್ನು ನಿಂಬರಗಿ ಶಾಸನದಲ್ಲಿ ಬಣ್ಣಿಸಲಾಗಿದೆ. ಜೋಳ ಗೋದುಮೆಯಂತಹ ಅನ್ನಾಹಾರ(Food Crops) ಬೆಳೆಗಳು ಮಾತ್ರವಲ್ಲದೇ ಜೀರಿಗೆ, ಕರ್ಬು, ಎಲೆವಳ್ಳಿ, ಕೌಂಗು, ತೆಂಗು, ಅಲ್ಲ, ಅರಿಷಿಣ, ಬಾಳೆ, ಈಳೆ, ಖಿಜೂರ, ಪಂಕೇರುಹ, ಪಾದರಿ, ಮಲ್ಲಿಗೆಗಳಂತಹ ಹಣದ ಬೆಳೆಗಳನ್ನು(Cash Crops) ಸಹ ಅಂದು ಕೃಷಿಕರು ಬೆಳೆಯುತ್ತಿದ್ದುದ್ದಾಗಿ ಆ ಶಾಸನದಲ್ಲಿ ಹೇಳಿದೆ..." ಹೈದ್ರಾಬಾದ್ ಕರ್ನಾಟಕದ ಕನ್ನಡ ಶಿಲಾ ಶಾಸನಗಳು ಕೃತಿಯ ಪೀಠಿಕೆಯಲ್ಲಿ ಡಾ. ಶಿವಾನಂದ ಅವರು ಈ ಮೇಲಿನಂತೆ ವಿವರಿಸುತ್ತಾರೆ.

ಇನ್ನೊಂದು ಶಾಸನದಲ್ಲಿ "ಮರವಳಿಯ ಅಡಿಕೆಯ ಮರವೊಂದಕ್ಕೆ ಅಡಿಕೆ ಪಯರಡಲೆ ಕದಲು ವಿಜಯಾಪುರದಲಿ ಅಡಿಕೆಯೆಂಬತ್ತುಸಾವಿರ। ವೂತನೂರಿಲಿ ಅಡಿಕೆ ನಾಲುವತ್ತು ಸಾವಿರ..." ಎನ್ನಲಾಗಿದೆ. ಅಡಿಕೆಯ ಬೆಲೆಯಲ್ಲಿ ಪ್ರಾದೇಶಿಕವಾಗಿ ವ್ಯತ್ಯಾಸವಿರುವುದನ್ನು ಕಾಣುತ್ತೇವೆ. ವಿಜಯಾಪುರದಲ್ಲಿ ಹಳೆಯ ಮರದ ಅಡಿಕೆಯ ಪೈರಿಗೆ ಎಂಬತ್ತು ಸಾವಿರವಿದ್ದರೆ ಪೂತನೂರಿನಲಿ ಕೇವಲ ನಲವತ್ತು ಸಾವಿರ ಎಂದು ಹೇಳುವ ಅಂಶದ ಹಿನ್ನೆಲೆಯಲ್ಲಿ ಅಡಿಕೆ ಬೆಳೆಯಲ್ಲಿ ಉತ್ತಮ ಮತ್ತು ಕನಿಷ್ಠ ಎಂಬ ವಿಂಗಡಣೆ ಕಂಡುಬರುತ್ತದೆ.

ಆಹಾರ ಧಾನ್ಯದಲ್ಲಿ ಬಡವರ ಬಂಗಾರದ ಧಾನ್ಯವಾದ ರಾಗಿಯ ಪೂಜೆಯನ್ನು ಮಾಡುವ ಪದ್ಧತಿರಾಗಿ ಮರೂರು ಶಾಸನದಲ್ಲಿ ಕಾಣಸಿಗುತ್ತದೆ. "...ರಾಗಿಮರೂರ ಗ್ರಾಮದ ರಘುನಾಥರಾಯರಿಗೆ ರಾಗಿಯ ಪೂಜೆ ಗಂಧ, ಪುಷ್ಪ..." ಕೊಯ್ಲಿಗೆ ಬಂದ ರಾಗಿಯ ಬೆಳೆಯನ್ನು ಪೂಜಿಸುವ ಪದ್ಧತಿ ಕಂಡು ಬರುತ್ತದೆ. ಇಂದು ಕೊಡ

ಕೊಯ್ಲಿನ ವೇಳೆಯಲ್ಲಿ ಮುಂಬೆಳಗು ಎಂದು ಹಬ್ಬದ ಊಟವ ಮಾಡಿ ಕೊಯುವ ಕ್ರಮಗಳು ಕೆಲವು ಕಡೆ ಕಂಡು ಬರುತ್ತವೆ. ಇನ್ನೊಂದು ಶಾಸನದಲ್ಲಿ ಗೋಧಿ, ಆಹಾರ ಧಾನ್ಯವಾದರೆ, ಹೆಸರು, ಉದ್ದು, ಕಡಲೆ, ದ್ವಿದಳ ಧಾನ್ಯಗಳ ಮತ್ತು ತೆಂಗು, ಬಾಳೆ, ನಿಂಬೆ, ಅಡಿಕೆ, ಎಲೆಬಳ್ಳಿ ತೋಟದ ಬೆಳೆಗಳು ಹಾಗೂ ಮೆಣಸು, ಏಲಕ್ಕಿ, ಜೀರಗೆ, ಮೆಂತ್ತೆ, ಸಾಸಿವೆ ಮುಂತಾದ ಸಾಂಬರಪದಾರ್ಥಗಳ ಮಾಹಿತಿ ಕಂಡು ಬರುತ್ತದೆ.

ಭೂಮಿಯ ಆರೈಕೆ ಮಾಡಿ ಅಡಕೆ, ತೆಂಗು, ಬಾಳೆ, ನಾಟಿ ಮಾಡುವ ವಿಧಾನವನ್ನು ಕುರಿತು ಕೌಲೇದುರ್ಗ, ರತ್ನಾಪುರ ಶಾಸನಗಳಲ್ಲಿ ಮಾಹಿತಿ ದೊರೆಯುತ್ತದೆ. "...ನಷ್ಟಕೆ ಕಳದ ಭೂಮಿಯನು ರೂಪ ಮಾಡಿ ಸಸಿ, ಬಾಳೆ, ತೆಂಗ ಹಾಕಿ ವ್ಯವಸಾಯಕ್ಕೆ ಯೋಗ್ಯವಲ್ಲದ, ನಷ್ಟಕ್ಕೆ ಕಳೆದ ಭೂಮಿ ಯನ್ನು ಹಸನು ಮಾಡಿ ತೋಟದ ಸಸಿಗಳು, ಬಾಳೆ, ತೆಂಗು ನಾಟುವ ಅಂಶ ತಿಳಿದು ಬರುತ್ತದೆ. ಮತ್ತೊಂದು ಶಾಸನದಲ್ಲಿ ಅಡಿಕೆಯ ತೋಟವನ್ನು ಗುತ್ತಿಗೆ ನೀಡಿರುವ ಅಂಶ ಕಂಡು ಬರುತ್ತದೆ. "...ಅಗಾಮಿ ವತ್ತಿನೆಟ್ಟ ಅಡಕೆಯ ಮರ 1500 ಸಾವಿರದೈನೂಱು ಅಡಕೆಯ ಮರಕ್ಕೆ ಸಲುವ ಗುತ್ತಿಗೆ ಲಕ್ಕ 2 ಸಾ 10 ಯಾರಡು ಲಕ್ಕುಲು ಹತ್ತು ಸಾವಿರಕ್ಕೆ ಸಲುವದು 28, 21 ಮೇಲುವಣ ಮೇಣಸು ಯೆಲೆ ಯಲಕ್ಕಿ ಮುಂತಾದವಕ್ಕೆ ಸಲು ಉದುಗ 15 ಉಭಯಂ ತೋಟದಿಂದ ಸಲುಉದು ಗ–31 ಅಗಾಮಿಯ ಭೂಮಿಯೊಳಗೆ ನೆಟ್ಟ ತೋಟ್ಟಕ್ಕೆ ಕೂಡಿದ ಭೂಮಿ..." ಅಡಕೆ ಮರ ನೆಟ್ಟ ತೋಟವನು ಸಾವಿರದ ಐದುನೂರು ಅಡಕೆಯ ಮರಕ್ಕೆ ಎರಡು ಲಕ್ಷ ಹತ್ತು ಸಾವಿರ ಗುತ್ತಿಗೆ ಹಣ ನೀಡುವ ಅಂಶ ಕಂಡುಬರುತ್ತದೆ.

ಅನೇಕ ಕಸುಬುದಾರರಿಗೆ ಜೀವನಾಂಶಕ್ಕೆ ಹಣ ನೀಡದೆ ತೋಟದ ಅಡಿಕೆಮರ, ಭತ್ತವನ್ನು ನೀಡುವ ಮಾಹಿತಿ ಶೃಂಗೇರಿಯ ಶಾಸನವೊಂದರಲ್ಲಿ ಕಂಡುಬರುತ್ತದೆ.

ವೃತ್ತಿ ಮಾಡುವ ಕಸುಬು ದಾರರನ್ನು ಮಹಾಜನಗಳೆಂದು ಕರೆದು ಒಂದು ವೃತ್ತಿಗೆ – ಐದುವರೆ ಸಾವಿರ ಅಡಕೆಯ ಮರದ ಕ್ಷೇತ್ರದ ವಿಸ್ತೀರ್ಣಕ್ಕೆ ಕೆಲಸ ಮಾಡುವವರಿಗೆ ಭತ್ತ 24 ಖಂಡುಗ ಮತ್ತು ಅಡಕೆಯ ಮರ 300 ನೀಡಿರುವಂತೆ ಕಂಡು ಬರುತ್ತದೆ. ಇನ್ನೂ ಅನೇಕ ಶಾಸನಗಳಲ್ಲಿ ಆಹಾರದ ಬೆಳೆಗಳು, ತೋಟದ ಬೆಳೆಗಳು, ದ್ವಿದಳ ಬೆಳೆಗಳು ಮತ್ತು ಸಾಂಬಾರ ಪದಾರ್ಥದ ಬೆಳೆಗಳ ಕುರಿತಾದ ಮಾಹಿತಿ ದೊರೆಯುತ್ತದೆ.

ಭೂಮಾಪನ ವಿಧಾನದ ಮಾಹಿತಿ : ಭೂಮಿ ಅಳೆಯುವ ಪದ್ಧತಿಯು ಶಾಸನಗಳಲ್ಲಿ ಅನೇಕ ಕಡೆ ಕಂಡುಬರುತ್ತದೆ. ಅದು ಪ್ರಾದೇಶಿಕವಾಗಿ ಅನೇಕ ಭಿನ್ನತೆಯನ್ನು ಹೊಂದಿರುವಂತಿದೆ. ಭೂ ಮಾಪನ ಮಾಡಲು ಸ್ಥಾನಿಕ ದೈವ, ಅರಸ, ಆಡಳಿತಗಾರರ ಹೆಸರಿನ ಕೋಲುಗಳಿಂದ ಅಳೆಯಲಾಗುತ್ತಿತ್ತು. ಇಂದಿನ ದಿನಗಳಲ್ಲಿ ಭೂಮಿಯ ಅಳತೆಯನ್ನು ಮೋಜಿಣಿದಾರರು, ಭೂಮಿಯ ಟಿಪ್ಪಣಿ ಕಾಫಿಯ ಮಾದರಿಯನ್ನು ತೆಗೆದುಕೊಂಡು ಚೈನು ಮತ್ತು ಶಂಕುಗಳನ್ನು ಉಪಯೋಗಿಸಿ ಅಳೆಯುತ್ತಾರೆ. ಒಂದು ಚೈನಿಗೆ 33ಅಡಿ 20ಲಿಂಕುಗಳಿರುತ್ತವೆ. ಆದರೆ ಶಾಸನಗಳಲ್ಲಿ ಅನೇಕ ಬಗೆಯ ಹೆಸರಿನ ಕೋಲುಗಳಿಂದ ಅಳೆಯುವ ಅಂಶಗಳು ಕಾಣಸಿಗುತ್ತವೆ. ಇಂದೂ ಕೆಲವು ಹಳ್ಳಿಗಳಲ್ಲಿ ಬಿದಿರಿನ ಕೋಲಿನಿಂದ ಭೂಮಿಯನ್ನು ಅಳತೆಮಾಡುವುದು ಕಂಡುಬರುತ್ತದೆ.

'ಕಲಬುರ್ಗಿ ಜಿಲ್ಲೆಯ ಶಾಸನಗಳು' ಎಂಬ ಕೃತಿಯ ರುದ್ರವಾಡಿ ಶಾಸನದಲ್ಲಿ "...ಖಜ್ಜರಿಗೆಯ ಸೀಮೆಯ ಮೂಡಲ್ ಜವಳಿಗೆರೆಯ ಸೀಮೆಯ ತೆಂಕಲ್ ಜವಳಿ ಗೆಯ ಬಟ್ಟೆಯಂ ಪಡುವಲ ಮಾಣಿಕೇಶ್ವರನ ಕೋಲು ಮೂನೊರು ಮತ್ತರು..."(ಪು.2).

ಇಜೇರಿ ಶಾಸನವೊಂದರಲ್ಲಿ "ಬಾವಿಯಿಂ ಬಡಗಣ ವ(ಏ)ಳಗೆಯ ಸೀಮೆಯಿಂ ಮೂಡ ಮಾಲಿಗದಣ್ಣ ನಾಯಕಯ್ಯನ ಮೊಲದಿಂ ತೆಂಕ ಮಾನಿಕೇಶ್ವರರ ಕೋಲು ಬಿಟ್ಟ ಮತ್ತರು 300 ಹಳ್ಳದಿಂ ಪಡುವ ತೊಂಟ ಮತ್ತರು..."(ಪು–282), ಈ ಎರಡು ಶಾಸನಗಳಲ್ಲಿ ಮಾಣಿಕೇಶ್ವರ ಕೋಲು ಬಳಸಿ ಭೂಮಿಯನ್ನು ಅಳತೆ ಮಾಡುವ ಮಾಹಿತಿ ತಿಳಿದು ಬರುತ್ತದೆ. ರಾಮನಾಥಪುರ ಶಾಸನವೊಂದರಲ್ಲಿ ಪೂರ್ವದ ದಿಕ್ಕಿನ ಮೂವತ್ನಾಲ್ಕು ಗಳೆ, ಉತ್ತರದ ನಾಲ್ವತ್ತೈದು ಗಳೆ, ಪಶ್ಚಿಮಕ್ಕೆ ಮೂವತ್ನಾಲ್ಕು ಗಳೆ, ದಕ್ಷಿಣಕ್ಕೆ ನಾಲ್ವತ್ತೈದು ಗಳೆ, ಆಯುತಾಕಾರದ ನೂರಾ ಐವತ್ತೆಂಟ್ಟು ಮತ್ತು ಗಳೆಕಂಬ ತೊಂಬತ್ತೈದು ಎಂದು ವಿವರವಾದ ಅಳತೆಯೊಂದಿಗೆ ಭೂಮಿಯನ್ನು ಅಳತೆ ಮಾಡುವ ವಿಧಾನ ಕಂಡುಬರುತ್ತದೆ.

ಸೀಮೆಗಲ್ಲು, ಬಾಂದು ಮತ್ತು ಮೇರೆಗಳು ಭೂಮಿ ಸಂಬಂಧವಾಗಿ ಅನೇಕ ವ್ಯಾಜ್ಯ ಜಗಳಗಳು ಉಂಟಾಗುವುದು ಸಹಜ, ಇಂತವುಗಳನ್ನು ತಡೆಯಲು ಪ್ರಾಚೀನ ಕಾಲದಿಂದಲೂ ಅನೇಕ ಕ್ರಮಗಳನ್ನು ಕೈಗೊಳ್ಳುವ ಪದ್ಧತಿ ಕಂಡು ಬರುತ್ತದೆ. ಹೊಲಗದ್ದೆಗಳನ್ನು ಅಳತೆ ಮಾಡಿಸಿ, ಸೀಮೆಗಲ್ಲು, ಬಾಂದು, ಅಳತೆ ಕಲ್ಲು ನೆಡುವ ಕ್ರಮಗಳು ಮತ್ತು ಹೊಲಗಳ ಮೇರೆ(ಗಡಿ)ಯನ್ನು ಗುರುತಿಸುವ ಅಂಶಗಳು ಶಾಸನಗಳಲ್ಲಿ ಕಂಡುಬರುತ್ತವೆ. ಅಲ್ಲದೇ ನಾನಾಬಗೆಯ ಹೆಸರುಗಳಿಂದ ಹೊಲಗಳನ್ನು ಕರೆಯುವ ರೂಢಿಯು ಇರುವಂತಿದೆ. 'ಹೈದರಾಬಾದ್ ಕರ್ನಾಟಕದ ಕನ್ನಡ ಶಾಸನಗಳು' ಎಂಬ ಕೃತಿಯಲ್ಲಿ ಹುಣಸೀ ಹಡಗಲಿ ಶಾಸನದಲ್ಲಿ ಮೇರೆ ಕುರಿತಾದ ಮಾಹಿತಿ ವಿವರವಾಗಿ ಹೀಗೆ ತಿಳಿದು ಬರುತ್ತದೆ. "...ಮೂಡಲ ಪಿರಿಯ ಮೇಲಕುಂದೆಯಿಂ ಆ ಊರಿಗೆ ಹೋದ ಬಟ್ಟೆ ತೆಂಕ ನೆಟ್ಟಕಲ್ । ಪಡುವ ನೀಲನೂರು ವೊಲ ಮೇರೆ । ಬಡಗ ಹತ್ತಿ ಕುಂದೆಯ ಹೊಲ ಮೇರೆ । ಯಿವು ಚತು ಸೀಮೆಯಿಂತೀ..."(ಪು–63), ಪೂರ್ವದಿಕ್ಕಿಗೆ ಮೇಳಕುಂದೆ ಎಂಬ ಊರಿನಿಂದ ಆ ಊರಿಗೆ ಹೋಗುವ ದಾರಿಯ ದಕ್ಷಿಣ ದಿಕ್ಕಿನಲ್ಲಿ ನೆಟ್ಟ ಕಲ್ಲು, ಪಶ್ಚಿಮ ದಿಕ್ಕಿನ ನೀಲನುರಿನ ಹೊಲದ ಮೇರೆಯಿಂದ ಉತ್ತರ ದಿಕ್ಕಿನ ಹತ್ತಿ ಕುಂದೆಯ ಹೊಲದ ಮೇರೆಯವರೆಗೆ ಇರುವ ನಾಲ್ಕು ದಿಕ್ಕಿನ ಚಕ್ಕುಬಂದಿವಳಗಿರುವ ಭೂಮಿ ಎಂದು ಗುರುತಿಸಿ ಹೇಳಲಾಗಿದೆ. ನೆಟ್ಟ ಕಲ್ಲುಗಳನ್ನು ಅನೇಕ ಹೆಸರುಗಳಿಂದ ಕರೆಯಲಾಗುತ್ತಿತ್ತು. ಮುಗ್ಗಲ್ಲು, ಸಾಲುಗಲ್ಲು, ಮುದ್ರಿಗಲ್ಲು (ಇದು ಪೂಜೆ ಮಾಡುವ ಕಲ್ಲಾಗಿರಬೇಕು) ಒಳತಕಲ್ಲು, ಕಾಲುವಲ್ಲಿಗಲ್ಲುಗಳ ಮಾಹಿತಿ ದೊರೆಯುತ್ತದೆ. ಕುಕ್ಕನೂರು ಶಾಸನವೊಂದರಲ್ಲಿಯೂ ಈ ಮಾಹಿತಿ ದೊರೆಯುತ್ತದೆ. "...ಇಂತಿ ಚತುಃಶೀಮೆಯೊಳಗುಳ್ಳ ನಟ್ಟಕಲ್ಲು, ಮುಗ್ಗಲ್ಲು, ಸಾಲುಗಲ್ಲು, ಮುದ್ರಿಗಲ್ಲು ಒಳತಕಲ್ಲು ಬೆಂಚಿ ಬಾವಿ ಸಹವಾದ ಈ ವಳೆಯ ದೊಳಗುಳ್ಳ ಕಾಲುವಲ್ಲಿಗಲ್ಲು..." ಅಲ್ಲದೇ ಇದೇ ಶಾಸನದಲ್ಲಿ ಹೊಲಗದ್ದೆಗಳನ್ನು ವಿಶಿಷ್ಟ ಹೆಸರು ಗಳಿಂದ ಕರೆಯುತ್ತಿದ್ದರು ಎಂಬ ಮಾಹಿತಿ ತಿಳಿದು ಬರುತ್ತದೆ.

ಗೊಬ್ಬುರು ಶಾಸನವೊಂದರಲ್ಲಿ ನಾಲ್ಕು ದಿಕ್ಕುಗಳಿಗೆ ಇರುವ ಮೇರೆ, ನಟ್ಟಕಲ್ಲುಗಳ ಕುರಿತಾದ ಮಾಹಿತಿ ದೊರೆಯುತ್ತದೆ. ಪೂರ್ವ ಉತ್ತರ ದಿಕ್ಕುಗಳ ಮೇಳಕುಂದೆಯ ವರೆಗೆ, ದಕ್ಷಿಣದ ಕಾಲಂಬರಿಗೆಯ ದಾರಿಯವರೆಗೂ ಮತ್ತು ಪೂರ್ವದ ಕರಿಯ ಹತ್ತು ಮತ್ತರು, ಪಶ್ಚಿಮ ತಳಾಯು ಗೈಯುವ ಹೊಲದವರೆಗಿನ ಸೀಮೆಯ ಎಲ್ಲೇ ಕುರಿತು ಹೇಳಲಾಗಿದೆ...

ಗುಂಜಹಳ್ಳಿ ಶಾಸನವೊಂದರಲ್ಲಿ ಸ್ಪಷ್ಟವಾದ ಚಕ್ಕುಬಂಧಿಯ ವಿವರ ಕುರಿತು ಹೀಗೆ ಹೇಳಲಾಗಿದೆ, "...ಪುರ್ವಕೆ ಗುಂಜಣಪನ ಹೊಲಪ ॥ ಬಕಿರೆಡಿ ಹೊಲಾದ॥ ದೆಂಡಕದ ಅವರ ಹೊಲವು ಕೊಂಡಿಭಟರ ಮಾನ್ಯವುಯಿಯಪಂದೆ ಮೇರೆ, ಬಡಿಗೇರ ಯಲ್ಲೋಜಗೆ ಹೊಲಂ ॥ ಯೆಂಟು ಮಾನ ಬಸವೇಪುರದ ಹಾದಿ ಮೊಳ ಹೊಲ ಕಡಗೊಡದ್ದಲೆಯ ಹೊಲದೊಳಗೆ ದಂಗುಡಿ ಬಸಪ್ಪನ ಹೊಲ ಪೂ। ಹಳು ಪ–ಯರಗೆರೆ ಹಟಿ, ವು ಚಿಂಚರೆಡಿ ಹೊಲ ಮೇರಗಳ ಹಾಕಿ ಕೊಟುಯಿದೆ..." ಪೂರ್ವಕ್ಕೆ ಕುಂಜಣ್ಣಪ್ಪನ ಹೊಲ, ಪಶ್ಚಿಮಕ್ಕೆ ಬಕಿರಡ್ಡಿ ಹೊಲದ ದೆಂಡಕದ ಹೊಲ, ಉತ್ತರಕ್ಕೆ ಕೊಂಡಿ ಬಟ್ಟರ ಹೊಲದ ಮೇರೆ ಹೊಂದಿರುವ ಹೊಲ ಬಡಿಗೇರ ಎಲ್ಲೋಜಿಗೆ ಬಸವೇಪುರದ ಹಾದಿಯ ಹತ್ತಿರದ ಹೊಲದೊಳಗೆ ದಂಗುಡಿ ಬಸವಪ್ಪನಹೊಲ, ಪೂರ್ವ ಎರೆಗೆರೆ ಹಟ್ಟಿ ಉತ್ತರದ ಚಿಂಚರೆಡ್ಡಿ ಹೊಲದ ಮೇಲೆಹಾಕಿ ಕೊಟ್ಟ ಚೆಕ್ಕಬಂಧಿ ವಿವರ ದೊರೆಯುತ್ತದೆ.

ಒಟ್ಟಾರೆಯಾಗಿ ಹೊಲದ ಮೇರೆಗಳು, ನೆಟ್ಟಕಲ್ಲುಗಳು, ಮೇರೆಗಲ್ಲುಗಳು, ಚಕ್ಕು ಬಂದಿಯ ಪೂರ್ಣ ವಿವರ, ಸೀಮೆಗಲ್ಲುಗಳ ನೆಡುವ ಕ್ರಮ ಮುಂತಾದ ಮಾಹಿತಿಗಳು ಶಾಸನಗಳಲ್ಲಿ ದೊರೆಯುತ್ತವೆ.

ಕನ್ನಡ ದಾಖಲು ಸಾಹಿತ್ಯದ ಗುಂಪಿಗೆ ಸೇರಿರುವ ಶಾಸನಗಳಲ್ಲಿ ಬಿಡಿಬಿಡಿಯಾಗಿ ದೊರಕಿರುವ ಕೃಷಿ ಸಂಬಂಧಿತ ಮಾಹಿತಿಯನ್ನು ಒಂದೆಡೆಗೆ ತರುವ ಉದ್ದೇಶ ಈ ಲೇಖನದ್ದು. ಭೂಮಿಯ ವಿಧಗಳು, ಬೆಳೆಗಳಲ್ಲಿನ ವಿವಿಧತೆ ಮತ್ತು ಭೂಮಾಪನದ ವಿಧಾನಗಳು ನಮ್ಮ ಪ್ರಾಚೀನರಲ್ಲಿ ಹೇಗೆ ಬಳಕೆಯಾಗುತ್ತಿದ್ದವು ಎಂಬ ಮಾಹಿತಿಯನ್ನು ಸಂಗ್ರಹಿಸಿ ಇಲ್ಲಿ ನೀಡಲಾಗಿದೆ.

ಆಕಾರ ಗ್ರಂಥಗಳು

1. ಶಾಸನಗಳಲ್ಲಿ ಕರ್ನಾಟಕದ ವರ್ತಕರು – ಡಾ. ಬಿ.ಆರ್. ಹಿರೇಮಠ್, ಮುನ್ನುಡಿ, ಪು–6
2. ಅದೇ ಕುಕ್ಕನೂರು ಶಾಸನ – 108, ಪು–252
3. ಹೈದರಾಬದ ಕರ್ನಾಟಕ ಕನ್ನಡ ಶಿಲಾಶಾಸನಗಳು, ಸಂ. ಡಾ. ವಿ. ಶಿವಾನಂದ, ಪು–35
4. ಇ.ಸಿ.ವಿ– ರಾಗಿಮರೂರು – 103, ಪು–172
5. ಕೆಳದಿ ಅರಸರ ಶಾಸನ, ಸಂ. ಕೆಳದಿ ವೆಂಕಟೇಶ ಜೋಯಿಸ. ಕೌಲೆದುರ್ಗ, ಪು–70
6. ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಸಂ. ಡಾ. ಹನುಮಾಕ್ಷಿ ಗೋಗಿ ಗೊಬ್ಬೂರು, ಪು–14

❖❖❖

ನೂರಾರು ಬಾನಾಡಿ
ಹಾರಾಡಿ ಇಲ್ಲಿ
ನೂರಾರು ದಾರಿಗಳು
ಬಾನ ಬಯಲಲ್ಲಿ

ಜತ್ತಪ್ಪ ರೈ ಅವರ 'ಬೇಟೆಯ ನೆನಪುಗಳು' ಕೃತಿಯ ಅವಲೋಕನ

ಡಾ. ಮೋಹನ್‌ಕುಮಾರ ಕೆ.ಎಸ್.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸ.ಪ್ರ.ದ. ಕಾಲೇಜು, ಉಪ್ಪಿನಂಗಡಿ

ದಕ್ಷಿಣ ಕನ್ನಡ ಜಿಲ್ಲೆಯ ಕೆದಂಬಾಡಿ ಜತ್ತಪ್ಪ ರೈಯವರು ಹೊಸಗನ್ನಡದ ಮೃಗಯಾ ಸಾಹಿತ್ಯಕ್ಕೆ ನೀಡಿದ ಕೊಡುಗೆ ಹಿರಿದು. ಬೇಟೆಯ ಗೀಳನ್ನು ಬಾಲ್ಯದಲ್ಲೇ ಬೆಳೆಸಿಕೊಂಡ ರೈಯವರು 1978ರಲ್ಲಿ 'ಬೇಟೆಯ ನೆನಪುಗಳು' ಕೃತಿಯ ಮೂಲಕ ನೆನಪಿನ ಬುತ್ತಿಯನ್ನು ಬಿಚ್ಚಿದರು. ಈ ಕೃತಿ ಪ್ರಕಟವಾಗುವವರೆಗೆ ಹೊಸಗನ್ನಡದಲ್ಲಿ ಮೃಗಯಾ ಸಾಹಿತ್ಯ ಇಲ್ಲವೆನ್ನುವಷ್ಟರ ಮಟ್ಟಿಗೆ ವಿರಳವಾಗಿತ್ತು. ಬೇಟೆಯನ್ನೇ ಪೂರ್ಣವಾಗಿ ವಸ್ತುವಾಗಿ ಸ್ವೀಕರಿಸಿಕೊಂಡು ಬರೆದ ಕೃತಿ ಬೇರೊಂದು ಇರಲಿಲ್ಲ. ಇಂಗ್ಲಿಷಿನಿಂದ ಅನುವಾದಗೊಂಡು ಬಂದ ಮೂರು–ನಾಲ್ಕು ಕೃತಿಗಳು ಮತ್ತು ಬಿಡಿ ಲೇಖನಗಳು ಅಲ್ಲಲ್ಲಿ ಪ್ರಕಟವಾಗಿದ್ದವು.

ಕುವೆಂಪು ಅವರು ತಮ್ಮ ಕಾದಂಬರಿಗಳಾದ 'ಕಾನೂರು ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಹಾಗೂ 'ಮಲೆನಾಡಿನ ಚಿತ್ರಗಳು' ಎಂಬ ಪ್ರಬಂಧ ಸಂಕಲನದಲ್ಲಿ ಮಲೆನಾಡಿನಲ್ಲಿ ನಡೆಯುತ್ತಿದ್ದ ಬೇಟೆಯನ್ನು ಸೊಗಸಾಗಿ ವರ್ಣಿಸಿದ್ದರು. ಇಂಗ್ಲಿಷಿನಂತೆ ಪ್ರತ್ಯೇಕ ವಸ್ತುವನ್ನಾಗಿ ಸ್ವೀಕರಿಸಿಕೊಂಡು ಬರೆಯಲಾದ ಕೃತಿಗಳು ಕನ್ನಡದಲ್ಲಿ ಅಪರೂಪ. ಅಂತಹ ಸಂದರ್ಭದಲ್ಲಿ ಕೆದಂಬಾಡಿ ಜತ್ತಪ್ಪ ರೈ ಅವರ 'ಬೇಟೆಯ ನೆನಪುಗಳು', 'ಈಡೊಂದು ಹುಲಿಯೆರಡು', 'ಬೇಟೆಯ ಉರುಳು' ಮತ್ತು 'ಬೆಟ್ಟದ ತಪ್ಪಲಿಂದ ಕಡಲ ತಡಿಗೆ' ಎಂಬ ನಾಲ್ಕು ಮೃಗಯಾ ಸಾಹಿತ್ಯ ಕೃತಿಗಳು ಪ್ರಕಟಗೊಂಡವು.

'ಬೇಟೆಯ ನೆನಪುಗಳು' ಕೆದಂಬಾಡಿ ಜತ್ತಪ್ಪ ರೈಯವರ ಮೊದಲ ಮೃಗಯಾ ಸಾಹಿತ್ಯ ಕೃತಿ. ಬೇಟೆಯನ್ನು ವಸ್ತುವನ್ನಾಗಿ ಸ್ವೀಕರಿಸಿಕೊಂಡು ಬರೆಯಲಾದ ಮೊದಲನೆಯ ಕೃತಿ ಇದಾಗಿದೆ. ರೈಯವರ ಬೇಟೆಯ ಅನುಭವಗಳ ಮೊದಲ ಕಂತು ಇದರಲ್ಲಿದೆ. "ನನ್ನ ಶಿಕಾರಿಯ ಸಾಹಸಕ್ಕೆ ಸಂಬಂಧಿಸಿದ ಕೆಲವು ಪ್ರಸಂಗಗಳು ಮಾತ್ರ ಇಲ್ಲಿ ಕಾಣಿಸಿಕೊಂಡಿವೆ. ನೆನಪಿನ ಉಗ್ರಾಣದಲ್ಲಿ ಇನ್ನೂ ವಿಪುಲ ಸಾಮಗ್ರಿಗಳು ಉಳಿದಿವೆ" ಎಂಬ ರೈಯವರ ಮಾತು ಈ ಕೃತಿಯಲ್ಲಿ ಅವರ ಅನುಭವ ಪರಿಪೂರ್ಣವಾಗಿ ಹೊರ ಬಂದಿಲ್ಲ ಎಂಬುದನ್ನು ಸೂಚಿಸುತ್ತದೆ. ಈ ಕೃತಿಯಲ್ಲಿ ಕೇವಲ ಬೇಟೆ ಮಾತ್ರ ನೆನಪಿನ ಗಣಿಯಿಂದ ಹೊರಗೆ ಬಂದಿಲ್ಲ. ಬದಲಾಗಿ, ಒಂದು ಶ್ರೀಮಂತ ಸಾಹಿತ್ಯ ಮತ್ತು ಕಾಡಿನ ಶ್ರೀಮಂತಿಕೆ, ಆಗಿನ ಕಾಲದ ಬದುಕು ಕೂಡ ಇಲ್ಲಿ ಚಿತ್ರಿತವಾಗಿದೆ. ಈ ಕೃತಿಯಲ್ಲಿ ತುಳು ಮತ್ತು ಮಲಯಾಳ ಪದಗಳು ಕೂಡ ಬಳಕೆಯಾಗಿವೆ.

ಕೃತಿಯ ವಸ್ತು ಬೇಟೆಯ ಅನುಭವಗಳೇ ಆಗಿದ್ದು ಮೃಗಯಾ ಸಾಹಿತ್ಯ ಮತ್ತು ಕಾಡಿನ ಶ್ರೀಮಂತಿಕೆ, ಆಗಿನ ಕಾಲದ ಬದುಕು ಮುಂತಾದ ವಿಚಾರಗಳು ಚಿತ್ರಿತವಾಗಿವೆ.

ಕೆದಂಬಾಡಿ ಜತ್ತಪ್ಪ ರೈ ದಕ್ಷಿಣ ಕನ್ನಡ ಜಿಲ್ಲೆಯ ಪ್ರದೇಶಕ್ಕೆ ಸೇರಿದವರು. ಸ್ವಾತಂತ್ರ್ಯ ಪೂರ್ವದಲ್ಲಿ ಕೋವಿ ಕೈಗೆತ್ತಿಕೊಂಡು ನುರಿತ ಬೇಟೆಗಾರರೆಂದು ಪ್ರಸಿದ್ಧಿ ಪಡೆದವರು ಮತ್ತು ಪ್ರಗತಿಪರ ಕೃಷಿಕರಾಗಿದ್ದವರು.

ಜತ್ತಪ್ಪ ರೈಗಳ ಅಜ್ಜ ಪಟೇಲ ಕೊರಗಪ್ಪ ರೈಗಳು ಬೇಟೆಗಾರರಾಗಿದ್ದರು. ಅವರ ಈಡಿನ ಕೌಶಲ್ಯವನ್ನು ಗಮನಿಸಿದ ಇಂಗ್ಲಿಷ್ ಅಧಿಕಾರಿ ಜೋಡು ನಳಿಗೆಯ ಕೋವಿಯನ್ನು ಬಹುಮಾನವಾಗಿ ನೀಡಿದರು. ಆಗ ಮೊಮ್ಮಗ ರೈ ಅವರಿಗೆ ಬೇಟೆಯಲ್ಲಿ ಅಜ್ಜನನ್ನು ಮೀರಿಸಬೇಕೆಂಬ ಆಸೆ ಚಿಗುರಿತು.

ರೈಯವರು ಮೊಟ್ಟ ಮೊದಲ ಗುಂಡು ಮೊಲಕ್ಕೆ ತಾಕದೆ ತಪ್ಪಿ ಹೋದಾಗ ಎರಡನೆಯ ಗುಂಡು ಹುಸಿಯಾಗಲಿಲ್ಲ. ಕೋಳಿ ಜಾತಿಯ ಹಕ್ಕಿಯನ್ನು ಗುಂಡಿಕ್ಕಿದರು... "ನಾನು ಗುರಿಯಿರಿಸಿದ್ದ ಹಕ್ಕಿ ಸದ್ದಿಲ್ಲದೆ ಮಲಗಿದೆ. ಮಲ್ಲು ಒಂದೇ ನೆಗೆತಕ್ಕೆ ಓಡಿ ಅದನ್ನು ಬಿಗಿ ಹಿಡಿದು ಎತ್ತಿ ಗೆಲುವಿನ ದೃಷ್ಟಿಯಿಂದ ನನ್ನೆಡೆಗೆ ನೋಡಿದ. ನನ್ನ ಹೆಮ್ಮೆಗೆ ಪಾರವಿಲ್ಲ" ಎಂದು ಪ್ರಥಮ ಬೇಟೆಯ ನೆನಪನ್ನು ದಾಖಲಿಸಿದ್ದಾರೆ.

ಜತ್ತಪ್ಪ ರೈಯವರ ಅಜ್ಜನವರು ಲೈಟ್ ಶಿಕಾರಿಯನ್ನು ಮೆಚ್ಚುತ್ತಿರಲಿಲ್ಲ. "ಇದು ಮೃಗಗಳ ಕಣ್ಣು ಕಟ್ಟಿ ಮೋಸದಿಂದ ಕೊಂದು ನಾಲಿಗೆಯ ಚಾಪಲ್ಯವನ್ನು ತೀರಿಸುವ ಪೌರುಷಹೀನ ವಿಹಾರ. ಕೋವಿ ಹಿಡಿಯುವ ತಾಕತ್ತಿದ್ದರೆ ಲೈಟು ಶಿಕಾರಿಯನ್ನು ಹೆಂಗಸರೂ ಮಾಡಬಹುದೆಂದು ಅಜ್ಜಯ್ಯ ಲೇವಡಿ ಮಾಡುತ್ತಿದ್ದರು" ಎನ್ನುತ್ತಾರೆ ಜತ್ತಪ್ಪ ರೈಯವರು. ಆದರೆ ಜತ್ತಪ್ಪ ರೈ ಅವರು ಲೈಟು ಶಿಕಾರಿಯನ್ನು ಇಷ್ಟ ಪಡುತ್ತಿದ್ದರು. ರೈಯವರು ಮೊದಲ ಹುಲಿ ಶಿಕಾರಿ ಮಾಡಿದ್ದು ರಾತ್ರಿ ಹೊತ್ತಿನಲ್ಲಿಯೇ.

ಕೃತಿಯಲ್ಲಿ ಕೋವಿ ಎತ್ತಿಕಟ್ಟುವ ಕ್ರಮದ ಬಗ್ಗೆ ವಿವರಗಳಿವೆ. ಕೋವಿ ಎತ್ತಿಕಟ್ಟುವ ಕ್ರಮವು ಬಹಳ ಅಪಾಯಕಾರಿ. ಸರಕಾರ ಇದನ್ನು ನಿಷೇಧಿಸಿತ್ತು. "ಇದೊಂದು ತುಂಬಿಸುವ ಕೋವಿಯಿಂದ ಸ್ವಯಂಚಾಲಿತವಾಗಿ ಮೃಗವನ್ನು ಕೊಲ್ಲುವ ವಿಧಾನ... ಗದ್ದೆಗೆ ಇಳಿಯುವ ಆತುರದಲ್ಲಿರುವ ಮೃಗಗಳು, ಎತ್ತಿಕಟ್ಟಿದ ಹಗ್ಗವು ಕಾಲಿಗೆ ತೊಡಕಿದಾಗ, ಬೀಳೆಂದು ಭ್ರಮಿಸಿ ನೂಕಿಕೊಂಡು ಬರುವಾಗ ಕುತ್ತು ಎಳೆಯಲ್ಪಟ್ಟು, ಎತ್ತಿಟ್ಟ ಕುದುರೆಯು ಬಿದ್ದು, ಕೋವಿ ಈಡಾಗುವುದು.. ಹೀಗೆ ಕಟ್ಟಿದ್ದನ್ನರಿಯದೆ ಬೇರೆ ಬೇಟೆಗಾರರಾದರೂ ಸಾರ್ತೆ ಬೇಟೆಗೆ ಬಂದು ಈ ಹಗ್ಗಕ್ಕೆ ಕಾಲಿಟ್ಟರೆ ಅವರ ಗತಿಯೂ ಮುಗಿದ ಗತಿಯೆ! ಆದುದರಿಂದ ಇದು ಸಾಮಾಜಿಕವಾಗಿಯೂ ಕಾನೂನಿನ ದೃಷ್ಟಿಯಲ್ಲಿಯೂ ನ್ಯಾಯ ಬಾಹಿರವಾದುದು" ಎನ್ನುತ್ತಾರೆ ಜತ್ತಪ್ಪ ರೈಯವರು.

ಕೃತಿಯಲ್ಲಿ 'ಕಾಡಿನ ಭೂತ'ದ ಬಗ್ಗೆ ಪ್ರಸ್ತಾಪವಿದೆ. ರೈಯವರ ಅಜ್ಜಯ್ಯ ಕೊರಗಪ್ಪ ರೈಯವರು ಮತ್ತು ಇಂಗ್ಲಿಷ್ ಅಧಿಕಾರಿ ಗೋನ್ ಅವರು ಒಟ್ಟುಗೂಡಿ ಭರ್ಜರಿ ಬೇಟೆ ಮಾಡಿದರು. ಅನಂತರ ಕೊರಗಪ್ಪ ರೈಯವರು "ಕಾಡಿನ ಭೂತಕ್ಕೆ ಬಡಿಸುವ ಬಹುಮುಖ್ಯ ಕೆಲಸ ಈಗ ನಡೆಯಬೇಕು. ಅದನ್ನು ನೇರವೇರಿಸಿಯೇ ಮುಂದಿನ ಕೆಲಸಗಳಿಗೆ ತೊಡಗುವುದು ನಮ್ಮ ಸಂಪ್ರದಾಯ. ಅದಕ್ಕೆ ವ್ಯತಿರಿಕ್ತವಾಗಿ ನಡೆದರೆ ಕಾಡಿನ ದೈವಗಳ ಮುನಿಸಿಗೆ ಈಡಾಗಬೇಕಾದೀತು" ಎನ್ನುತ್ತಾರೆ. ಅದರಂತೆ ಸತ್ತ ಮೃಗಗಳನ್ನು ಒಟ್ಟಿಗೆ ತೆಂಕು ಬಡಗು ಮುಖ ಮಾಡಿ ನಿಯಮದಂತೆ ಇರಿಸುತ್ತಾರೆ. ಅಡುಗೆಯಾದ ಅನಂತರ ಕಾಡಿನ ಭೂತದ ದೊಳ್ಳ ಪೂಜಾರಿ "ಅಡುಗೆಯಾಗಿ ಭೂತಕ್ಕೆ ಬಡಿಸಿಯಾಗಲಿ, ಭೂತವು ಸಂತೋಷವಾಗಿ ಇದನ್ನು ಕೈಗೊಂಡಿದ್ದರೆ ಮತ್ತೆ

ಇದರ ರುಚಿ ನೋಡಿ" ಎನ್ನುತ್ತಾನೆ. ಗಾರ್ಡರು ಪೆಟ್ಟಾದ ಹುಲಿಯನ್ನು ಕಂಡು ಮೂರ್ಛೆ ಹೋದಾಗ ಜತ್ತಪ್ಪ ರೈಗಳು 'ಹುಲಿಭೂತ'ಕ್ಕೆ ಕೋಲ ಕೊಡುವುದೆಂದು ಹರಕೆ ಹೊತ್ತುಕೊಳ್ಳುತ್ತಾರೆ. ಕುಂಞಮೊನುವಿಗೆ 'ನಾಯಿಹುಲಿ' ಕಚ್ಚಿದಾಗ ಮಂತ್ರವಾದಿ ಚೋಮ ಪೂಜಾರಿಯನ್ನು ಕರೆಯಿಸಿ ಹುಲಿಯ ಪಂಜಿನ ಹೊಡೆತದ, ಹಲ್ಲಿನ ಇರಿತದ ನಂಜೇರದಂತೆ ಮಂತ್ರವಾದ ಮಾಡಿಸಿ, ಬಲಿ ತೆಗೆಸುತ್ತಾರೆ.

ಬೇಟೆಯ ನಿಯಮಗಳ ಬಗ್ಗೆ, ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಯ ಬಗೆಗೆ, ಅಪಾಯಕ್ಕೆ ಸಿಲುಕಿದಾಗ ಬಚಾವಾಗುವ ಬಗೆಗೆ ಕೃತಿಯಲ್ಲಿ ವಿವರಗಳಿವೆ. ಜತ್ತಪ್ಪ ರೈಗಳಿಗೆ ಅವರ ಅಜ್ಜಯ್ಯನವರು ಯಾವ ಪ್ರಾಣಿಯನ್ನು ಹೇಗೆ ಬೇಟೆಯಾಡಬೇಕು ಎಂಬುದರ ಬಗ್ಗೆ ಹೇಳಿಕೊಡುತ್ತಾರೆ. "ರೂಪು ರೂಪು ಹುಲಿಗೆ ಎಂದೂ ಹೊಡೆಯಬೇಡ, ಪೆಟ್ಟಾದಾಗ ಎದುರು ಕಂಡರೆ ಅದು ನೆಗೆಯಿತೆಂದೆ ಅರ್ಥ. ಅಡ್ಡಕ್ಕೆ ಹುಲಿಯು ಹೋಗುವುದಿದ್ದರೆ ನಿನ್ನಿಂದ ಮೂರು ನಾಲ್ಕು ಮಾರು ಅಡ್ಡದಾರಿಯನ್ನು ದಾಟಿದ ಬಳಿಕ ಹೊಡೆದರೆ ಅದು ಕಳ್ಳ ಹಾರು ಹಾರಿ ಮುಂದಕ್ಕೆ ಓಡುವುದೇ ವಿನಾ ಈಡಾದ ಜಾಗಕ್ಕೆ ಬರದು.. ಹಂದಿಯಾದರೋ ಹುಲಿಗಿಂತಲೂ ಶಕ್ತಿಯುತವಾದುದು. ಹಂದಿಯ ಚರ್ಮ ಗಟ್ಟಿ, ಪೆಟ್ಟಾದರೆ ಪ್ರಾಣ ಹೋಗುವ ತನಕವೂ ಹೋರಾಟ ಮಾಡುವ ಪ್ರಾಣಿಯೆಂದರೆ ಕಾಡು ಹಂದಿಯೊಂದೆ; ರಕ್ಕಸ ಜಾತಿಯದು! ಆನೆಯೂ ಕೊನೆಗೆ ಪ್ರಾಣೋತ್ಕ್ರಮಣ ಕಾಲದಲ್ಲಿ ಸೊಂಡಿಲೆತ್ತಿ ಸೋತ ಭಾವದಿಂದ ನಮಿಸುತ್ತದೆ. ಹಂದಿ, ಹುಲಿಗಳು ಕೊನೆತನಕವೂ ಸೇಡಿನ ಭಾವನೆಯನ್ನು ಬಿಡುವುದಿಲ್ಲ.. ಹಂದಿಗಾಗಲೀ, ಹುಲಿಗಾಗಲೀ ಕೈಗಳ ಮುಂದೆ ಕತ್ತಿನ ಭಾಗಕ್ಕೆ ಹೊಡೆಯುವುದು ಈಡುಗಾರನ ಜಾಣ್ಮೆ. ಆ ಭಾಗದಲ್ಲಿ ಚರ್ಮವು ತೆಳು.. ಬೇಟೆಯಲ್ಲಿ ಅವಸರ, ಅಜಾಗರೂಕತೆ ಎಂದಿಗೂ ಸಲ್ಲದು. ಬೇಟೆಗೂ ಒಂದು ನೀತಿ ಸಂಹಿತೆ ಇದ್ದೇ ಇದೆ. ಇದನ್ನು ಉಲ್ಲಂಘಿಸುವುದು ಪಾಪಕರ. ಮೃಗವಾವುದೆಂದು ತಿಳಿಯದೆ, ಕೋವಿಯೆತ್ತಬಾರದು. ಎತ್ತಿದ ಬಳಿಕ ಕೇವಲ ನಾನೂ ಹೊಡೆದೆ ಎನ್ನಿಸಿಕೊಳ್ಳಲು, ಮೃಗವನ್ನು ನೋಯಿಸುವುದಕ್ಕಾಗಿ ಮಾತ್ರ ಹೊಡೆಯಲಾಗದು. ಹೊಡೆದೆಯೋ ಅದು ಸಾಯಲೇಬೇಕು" ಹೀಗೆ ಅಜ್ಜನ ಉಪದೇಶ ರೈಯವರ ಪಾಲಿಗೆ ಚಿರಸ್ಮರಣೀಯವಾಗಿದೆ.

ಬ್ರಿಟಿಷ್ ಕುಟುಂಬದೊಡನೆ ಕುದುರೆಮುಖದಲ್ಲಿ ಬೇಟೆಯಾಡಲು ಹೋಗಿದ್ದಾಗ ಬ್ರಿಟಿಷ್ ದಂಪತಿಗಳು ಒಂದು ನಿಯಮವನ್ನು ಪಾಲಿಸುವಂತೆ ರೈಯವರಿಗೆ ತಿಳಿಸುತ್ತಾರೆ. ಬೇಟೆಯ ಸಂದರ್ಭದಲ್ಲಿ ಸಂತಾನ ರಕ್ಷೆಯ ಕಾರಣಕ್ಕಾಗಿ ಹೆಣ್ಣು ಮೃಗಗಳಿಗೆ ಎಂದೂ ಹೊಡೆಯಬಾರದೆಂಬ ನಿಯಮ. ಈ ನಿಯಮದಲ್ಲಿ ಹಂದಿಯನ್ನು ಮಾತ್ರ ಹೊರತುಪಡಿಸಲಾಗಿತ್ತು. ನಿಯಮ ಮೀರಿದರೆ ಸಾವಿರಾರು ರೂಪಾಯಿಗಳ ದಂಡ ತೆರಬೇಕು ಎಂದು ಎಚ್ಚರಿಸುತ್ತಾರೆ.

ಕೃತಿಯಲ್ಲಿ ಹುಲಿ–ಹಂದಿಯ ಹೋರಾಟದ ವಿವರಗಳಿವೆ. ಜತ್ತಪ್ಪ ರೈ ಅವರು ಹುಲಿ ಹಂದಿಯ ಹೋರಾಟವನ್ನು ವಿವರಿಸುವುದು ಹೀಗೆ... "ಮೊದಲೇ ಹಂದಿಯ ಮೇಲೆ ನೆಗೆಯಲು ಸಿದ್ಧವಾಗಿದ್ದ ಹುಲಿ ಒಡನೇ ಕಾಡೇ ಬಿರಿಯುವಂಥ ಒಂದು ಆರ್ಭಟೆಯನ್ನು ಕೊಟ್ಟು, ಸೆಣಸಿ ನಿಂತ ಹಂದಿಯ ಮೇಲೆ ನೆಗೆದೇ ಬಿಟ್ಟಿತು! ಪಂಥಾಹ್ವಾನಕ್ಕೆ ಸನ್ನದ್ಧವಾಗಿದ್ದ ಹಂದಿಯು ಬಾಯಗಲಿಸಿ ತನ್ನ ಮೇಲೆರಗಿ ಕುತ್ತಿಗೆಯನ್ನು ಕಚ್ಚಿ ಹಿಡಿದ ಹುಲಿಯನ್ನು ತನ್ನ ಕೋರೆಯಿಂದ ಒತ್ತಿ ಭೂಮಿಗೆ ಅವುಕಿ

ಬಾಯಿಗೆ ಸಿಕ್ಕಿದ ಹುಲಿಯ ಕೈಯನ್ನು ಕಚಕಚನೆ ಕಡಿದಾಗ ಆ ನೋವನ್ನು ತಾಳಲಾರದೆ ಹುಲಿಯು ಹಂದಿಯನ್ನು ಬಿಟ್ಟು ಓಡಲು ಹವಣಿಸಿತು. ಹಂದಿಯು ಹುಲಿಯ ಕಡಿತ, ಪಂಜಿನ ಹೊಡೆತಗಳಿಂದ ಜರ್ಜರಿತವಾಗಿ ಅಂತ್ಯಕಾಲದ ಹೋರಾಟವನ್ನು ಕೊಡುವ ಕಡುಗಲಿಯಂತೆ ಮುಸುಡನ್ನು ಹುಲಿಯ ಎದೆಗೆ ಒತ್ತಿ ಏಳಲು ಬಿಡನೆಂಬ ಹಟದಲ್ಲಿದೆ. ಹುಲಿಗೆ ಬಿದ್ದಲ್ಲಿಂದ ಏಳಲಾಗುತ್ತಿಲ್ಲವಾದರೂ ಕೊನೆಗಾಲದ ತನ್ನ ಬದುಕಿನ ಪ್ರಶ್ನೆಗೆ ಉತ್ತರವೆಂಬಂತೆ ಕಿವಿ, ಮೂಗು, ಬಾಯಿ, ಎದೆಯೆನ್ನದೆ ಹಂದಿಯನ್ನು ಕಚ್ಚಿ ಮಾಂಸದ ಮುದ್ದೆಗಳನ್ನೇ ಹೊರಗೆಳೆಯುತ್ತಿದೆ" ಆಗ ಹಂದಿ, ಹುಲಿಗಳನ್ನು ಏಕಕಾಲದಲ್ಲಿ ಗುಂಡಿಕ್ಕಿ ಕೊಲ್ಲುತ್ತಾರೆ.

ಬೇಟೆಗಾರ ಕುಟುಂಬಗಳೊಂದಿಗಿನ ಒಡನಾಟವನ್ನು ಕೃತಿಯಲ್ಲಿ ಗುರುತಿಸಬಹುದು. ಜತ್ತಪ್ಪ ರೈಯವರು ಮೇರರು, ಬೊಟ್ಟದ ಮಾರಿ ಹೊಲೆಯರು, ದಟ್ಟಿಗೆಯ ಅಜಲರು, ಕೊಟ್ಯದ ಕೊರಗರು, ಚೇರದ ಮಾಯಿಲರು, ಗಿಡ್ಡ ಶರೀರದ ಅರೆನೆರೆತ ಕೂದಲಿನ ಗಿರಿಜಾ ಮೀಸೆಯ ಬಿಲ್ಲವ ದೊಳ್ಳಜ್ಜ, ದೊಣ್ಣೆಯಿಂದ ಹುಲಿಕೊಂದ ಕುಂಞ ಮೋನು, ಗರ್ನಲ್ ಕಾಸಿಂ ಸಾಹೇಬ್, ಹುಲಿ ಮೀಸೆ ಕಿತ್ತು ತರುವ ಮೋಂತು, ಬ್ರಿಟಿಷ್ ಕುಟುಂಬದ ತರುಣಿ ರೋಸ್ಲಿ, ಗಾರ್ಡರ್ ಹೀಗೆ ನಾನಾ ರೀತಿಯ ಜನರೊಂದಿಗೆ ಬೇಟೆಯ ನಂಟನ್ನು ಹೊಂದಿದ್ದರು.

ಜತ್ತಪ್ಪ ರೈಯವರನ್ನು ಯಾರಾದರೂ ಸಲುಗೆಯಿಂದ, 'ನಿಮಗೆ ಮದುವೆಯಾದದೆಷ್ಟು?' ಎಂದು ಕೇಳಿದರೆ, 'ನಾಲ್ಕು' ಎಂದು ಅತ್ಯಂತ ಅಭಿಮಾನದಿಂದ ಉತ್ತರಿಸುತ್ತಿದ್ದವರನ್ನು ಅಚ್ಚರಿಯಿಂದ ದಿಟ್ಟಿಸಿದರೆ, ಎರಡು ಹೆಣ್ಣುಗಳ ಜೊತೆಗೆ, ಎರಡು ಸತ್ತ ಹುಲಿಗಳ ಜೊತೆಗೆ ಎಂದು ನಿಧಾನವಾಗಿ ವಿವರಿಸುತ್ತಿದ್ದರು.

ಒಟ್ಟಿನಲ್ಲಿ ಜತ್ತಪ್ಪ ರೈಯವರು ಬದುಕಿನಲ್ಲಿ ಉಲ್ಲಾಸಮಯ, ರಸಮಯ, ಸಾಹಸಮಯವಾದ ಬೇಟೆಯಲ್ಲಿ ಪರಮಸಿದ್ಧಿಯನ್ನು, ಕೀರ್ತಿ ಶಿಖರವನ್ನು ತಲುಪಿದರೆಂದು ಈ ಕೃತಿ ನಮಗೆ ತಿಳಿಯಪಡಿಸುತ್ತದೆ. ಇಂತಹ ಬರೆವಣಿಗೆ ಕನ್ನಡ ಸಾಹಿತ್ಯಕ್ಕೆ ಒಂದು ಅಪೂರ್ವವಾದ ಕೊಡುಗೆಯಾಗಿದೆ.

'ಬೇಟೆಯ ನೆನಪು'ಗಳು ಕೃತಿಗೆ ಕೈಯ್ಯಾರ ಕಿಞ್ಞಣ್ಣ ರೈ ಅವರು ಮುನ್ನುಡಿಯಲ್ಲಿ "...ಬೇಟೆಯಲ್ಲಿ ಅದರಲ್ಲೂ ಮುಖ್ಯವಾಗಿ ಹುಲಿಬೇಟೆಯಲ್ಲಿ ಸಾಹಸವಿದೆ, ಶೌರ್ಯವಿದೆ, ರಸವಿದೆ, ರುಚಿಯಿದೆ ಎಂಬೀ ವಿಪುಲ ಪ್ರಯೋಜನವನ್ನು ಪ್ರಸ್ತುತ ಪುಸ್ತಕದಲ್ಲಿ ಲೇಖಕರು ಕೊಟ್ಟಿರುವ ಹಲವು ಘಟನೆಗಳಿಂದ, ಕಥನಕ್ರಮದಿಂದ, ವರ್ಣನಾ ವೈಖರಿಯಿಂದ ನಾವು ಸರಿಯಾಗಿ ತಿಳಿದುಕೊಂಡು ಆಸ್ವಾದಿಸಬಹುದಾಗಿದೆ" ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ರಾಷ್ಟ್ರಕವಿ ಕುವೆಂಪು ಅವರು ಈ ಪುಸ್ತಕವನ್ನು ಓದಿ, "ಓದಲು ತೊಡಗಿದವರಿಗೆ ಎಂತಹ ಒಂದು ಅದ್ಭುತ ರಸಾನುಭವ ಕಾದಿತ್ತು ಎಂದು ನಿಮಗೆ ಹೇಗೆ ವರ್ಣಿಸಲಿ–ಭಂಗಿ ಸೇದುವವರಿಗೆ ಇನ್ನೊಬ್ಬ ಖದೀಮ ಭಂಗಿ ಸೇದುವವನ ಗೆಳೆತನ ದೊರಕೊಂಡ ಹಾಗಾಯಿತು..." ಎಂದು ಪ್ರತಿಕ್ರಿಯಿಸಿದ್ದಾರೆ. ಬೇಟೆಯು ಒಂದು ವ್ಯಸನ; ಮತ್ತು ಪರಿಸರ ಹಿತದ ದೃಷ್ಟಿಯಿಂದ ದುರ್‌ವ್ಯಸನ ಎಂಬುದನ್ನು ಕುವೆಂಪು ಅವರ ಈ ಮಾತು ಸೂಚ್ಯವಾಗಿ ತಿಳಿಸುತ್ತದೆ!

ಜತ್ತಪ್ಪ ರೈ ಅವರು ಕೃತಿಯಲ್ಲಿ ತಾರುಣ್ಯದ ಉತ್ಸಾಹದ ದಿನಗಳಲ್ಲಿ ಬೇಟೆಯಾಡಿದ ಅನುಭವಗಳನ್ನು ಮಾತ್ರ ಚಿತ್ರಿಸಿದ್ದಾರೆ. ಈ ಕೃತಿ ಅವರ ಬೇಟೆಯ ಬದುಕಿನ ಒಂದು

ಪಾರ್ಶ್ವನೋಟವನ್ನು ಚಿತ್ರಿಸುತ್ತದೆ. ರೈಯವರ ಪ್ರಾರಂಭದ ಬೇಟೆಯ ಅನುಭವಗಳು ತುಂಬಾ ರೋಚಕವಾಗಿವೆ, ಓದುಗನನ್ನು ರೋಮಾಂಚನಗೊಳಿಸುತ್ತವೆ. ರೈ ಅವರ ಕೃತಿಯ ನಿರೂಪಣಾ ಶೈಲಿ ಅತ್ಯಾಕರ್ಷಕವಾಗಿದೆ. ಯಥೇಚ್ಛವಾಗಿ ಗಾದೆಗಳನ್ನು ಬಳಸಿಕೊಂಡು, ಹಳ್ಳಿಯ ಬದುಕಿನ ರೀತಿಯನ್ನು ಬಿಚ್ಚಿಟ್ಟಿರುವುದು ನೂರು ವರ್ಷಗಳ ಹಿಂದಿನ ಜನಜೀವನವನ್ನು ತೆರೆದಿಡುತ್ತಾ ಮಂತ್ರಮುಗ್ಧರನ್ನಾಗಿಸುತ್ತದೆ.

ಅಡಿಟಿಪ್ಪಣಿಗಳು

1. ಕೆದಂಬಾಡಿ ಜತ್ತಪ್ಪ ರೈ, ಬೇಟೆಯ ನೆನಪುಗಳು (ಬರೆಹಗಾರನ ಅರಿಕೆ)
2. ಕದಂಬಾಡಿ ಜತ್ತಪ್ಪ ರೈ, ಬೇಟೆಯ ನೆನಪುಗಳು, ಪು.ಸಂ.38
3. ಅದೇ, ಪು.ಸಂ.14
4. ಅದೇ, ಪು.ಸಂ. 06
5. ಕದಂಬಾಡಿ ಜತ್ತಪ್ಪ ರೈ, ಬೇಟೆಯ ನೆನಪುಗಳು, ಪು.ಸಂ. 28
6. ಅದೇ, ಪು.ಸಂ. 32
7. ಕದಂಬಾಡಿ ಜತ್ತಪ್ಪ ರೈ, ಬೇಟೆಯ ನೆನಪುಗಳು, ಪು.ಸಂ.55–56
8. ಅದೇ, ಪು.ಸಂ.101–102
9. ಕದಂಬಾಡಿ ಜತ್ತಪ್ಪ ರೈ, ಬೇಟೆಯ ನೆನಪುಗಳು (ಮುನ್ನುಡಿ)
10. ಅನುಬೆಳ್ಳೆ (ಸಂ.), ಕನ್ನಡ ಬೇಟೆ ಸಾಹಿತ್ಯದ ಪೆರ್ಬುಲಿ, ಕೆದಂಬಾಡಿ ಜತ್ತಪ್ಪ ರೈ, ಪು.ಸಂ. 29

ಪರಾಮರ್ಶನ ಗ್ರಂಥಗಳು

ಅನುಬೆಳ್ಳೆ, ಕನ್ನಡ ಬೇಟೆ ಸಾಹಿತ್ಯದ ಪೆರ್ಬುಲಿ, ಕೆದಂಬಾಡಿ ಜತ್ತಪ್ಪರೈ, ವಿಸ್ಮಯ ಪ್ರಕಾಶನ, ಮೈಸೂರು, 2011
ಜತ್ತಪ್ಪ ರೈ ಕೆದಂಬಾಡಿ, ಬೇಟೆಯ ನೆನಪುಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 1998
ಪ್ರಭಾಕರ ಶಿಶಿಲ, ಶಿಕಾರಿಯ ಶೀಳುನೋಟ, ರಾಜ್ ಪ್ರಕಾಶನ, ಮೈಸೂರು. 2005
ಮಾಧವ ಪೆರಾಜೆ (ಸಂ.), ಸಾಹಿತ್ಯ ಶಿಶಿಲ, ರಾಜ್ ಪ್ರಕಾಶನ ಮೈಸೂರು. 2013

❖❖❖

ಸಂದರ್ಭ–ಔಚಿತ್ಯ

ಡಾ. ಎಸ್. ಆರ್. ಲೀಲಾ
ವಿಶ್ರಾಂತ ಪ್ರಾಧ್ಯಾಪಕರು ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರು

ಎಲ್ಲಿಂದಲೋ ಒಂದು ವಾಕ್ಯವನ್ನೋ ಪದವನ್ನೋ ಹೆಕ್ಕಿ ಅದನ್ನು ಇನ್ನೆಲ್ಲೋ ಸಂಬಂಧವಿಲ್ಲದೆಡೆ ಹಾಕಿ, ಅದರ ಅರ್ಥವನ್ನು, ಆಶಯವನ್ನು ವಿಪರೀತವಾಗಿಸುವ ಪರಿ ನಮಗೆ ತಿಳಿದೇ ಇದೆ. ಯಾರನ್ನಾದರೂ ಖಂಡಿಸಬೇಕಾದರೆ ವಿರೋಧಿಸಬೇಕಾದರೆ ಅವರ ಹೇಳಿಕೆಗಳನ್ನು, ಬರೆಹಗಳನ್ನು ಇಂಥ ಆಪರೇಷನ್‌ಗೆ ಒಳಪಡಿಸುವುದು ಸರ್ವೇಸಾಮಾನ್ಯ. ಉದಾ. ವೀರ ಸಾವರ್ಕರ್ ಅವರ ನುಡಿಗಳು. ಅವರು ಮಾಡಿದ ಎಲ್ಲ ಕ್ರಾಂತಿ–ಕಾರ್ಯಗಳನ್ನೂ ಸಮಾಜಸೇವೆಯನ್ನೂ ದೇಶಭಕ್ತರಿಗೆ ನೀಡಿದ ಪ್ರೇರಣೆ–ಸ್ಫೂರ್ತಿಗಳನ್ನೂ ಕಡೆಗಣಿಸಿ, ಅವರು ಅಂಡಮಾನ್ ಜೈಲಿನಲ್ಲಿ ಅನುಭವಿಸಿದ ಯಮಯಾತನೆಯನ್ನೂ ಲಘುವಾಗಿ ಪರಿಗಣಿಸಿ ಕ್ಷಮಾಪಣೆ ಪತ್ರ ಬರೆದರು ಎಂಬುದನ್ನು ಮಾತ್ರ ಎತ್ತಿಹೇಳಿ ಆ ಮಹಾನ್ ವ್ಯಕ್ತಿಯ ತೇಜೋವಧೆ ಮಾಡಲು ಯ:ಕಶ್ಚಿತ್ ಪ್ರಾಣಿಗಳು ನಿಂತು ಬಿಡುತ್ತಾರೆ. ಹಾಗೆಯೆ ಗೀತೆಯ ಒಂದೆರಡು ವಾಕ್ಯಗಳನ್ನು ಉದ್ಧರಿಸಿ, 18 ಅಧ್ಯಾಯಗಳ 1500 ಸಾಲುಗಳ ಮೇರುಕೃತಿಯ ಸಾರಾಂಶ ಇದಿಷ್ಟೇ, ಇನ್ನೇನೂ ಇಲ್ಲ ಎಂದು ಉದ್ಘಟತನ ತೋರುವವರೂ ಇದ್ದಾರೆ. ಇವರ ಕೆಲಸ ಖಂಡನೆ ಮಾಡುವುದಷ್ಟೆ! ಒಂದು ಮಹಾಗ್ರಂಥವನ್ನು ಅವಲೋಕಿಸುವಾಗ ಅದು ಸಹಸ್ರಾರು ವರ್ಷಗಳ ಕಾಲ ಧೀಮಂತರ, ಸಂಸ್ಕೃತಿ ಆರಾಧಕರ ವಿಮರ್ಶೆಗೊಳಪಟ್ಟು ಆಚರಣೆಗೆ ಅಳವಟ್ಟು ಮಾನ್ಯವಾಗಿರುವ ಅಂಶವನ್ನು ಸಂಪೂರ್ಣ ಕಡೆಗಣಿಸಿ ಯಾವುದನ್ನು ಹೇಳಬೇಕು, ಏಕೆ, ಹೇಗೆ ಇತ್ಯಾದಿ ಶಿಷ್ಟಾಚಾರಗಳನ್ನೆಲ್ಲ ನಗಣ್ಯ ಮಾಡಿ ಅಪಾರ್ಥ–ಅನರ್ಥಗಳಿಗೆ ಈಡು ಮಾಡುವ ಇಂಥ ಉದಾಹರಣೆಗಳು ಯಥೇಷ್ಟವಾಗಿವೆ.

ಈ ಹಿನ್ನೆಲೆಯಲ್ಲಿ ನಿಜವಾಗಿಯೂ ಯಾವುದಕ್ಕೆ ಯಾವುದು ಸಂಬಂಧವಿದೆ, ಹೇಗೆ ನೋಡಬೇಕು, ನೋಡಬೇಕಾದ ಜರೂರತ್ತು ಏನು, ಸ್ವಾರಸ್ಯವೇನು ಎಂಬುದನ್ನು ತಿಳಿಹೇಳಲು ಮಹಾಕವಿ ಕಾಳಿದಾಸನ ಕೃತಿಯಿಂದ ಒಂದು ಪ್ರಸಂಗವನ್ನು ಗಮನಿಸೋಣ.

ಅಭಿಜ್ಞಾನ ಶಾಕುಂತಲ ನಾಟಕವು ನಾಟಕ ಜಗತ್ತಿಗೆ ಹಾಗೂ ನಾಟಕ ಸಾಹಿತ್ಯಕ್ಕೆ ಭಾರತವು ನೀಡಿದ ಅಮೂಲ್ಯ ರತ್ನದಂಥ ಕಾಣಿಕೆ. ನಾಟಕದ ಕಥಾವಸ್ತು ಸಾಹಿತ್ಯ ವಿದ್ಯಾರ್ಥಿಗಳಿಗಷ್ಟೇ ಅಲ್ಲ, ಸಾಮಾನ್ಯರಿಗೂ ಚಿರಪರಿಚಿತ. ಕಾವ್ಯ, ನಾಟಕ, ಚಲನಚಿತ್ರ, ಚಿತ್ರ, ನೃತ್ಯ ಮುಂತಾದ ಕಲಾಪ್ರಕಾರಗಳಲ್ಲೆಲ್ಲಾ ಶಾಕುಂತಲದ ಪಕಳೆಗಳು ಕಂಡು ಬರುತ್ತವೆ. ಬೇಟೆಗಾಗಿ ಕಾಡಿಗೆ ಹೋದ ಮಹಾರಾಜ ದುಷ್ಯಂತನು ಮಾಲಿನೀ ತೀರದ ತಪೋವನದಲ್ಲಿ ಕಣ್ವ ಮಹರ್ಷಿಗಳು ಇಲ್ಲದಿದ್ದಾಗ ಋಷಿಪುತ್ರಿ ಶಕುಂತಲೆಯನ್ನು ಗಾಂಧರ್ವ ವಿಧಿಯಿಂದ ವರಿಸಿ ತನ್ನೂರಿಗೆ ಮರಳುತ್ತಾನೆ. ಯಾತ್ರೆಗೆ ಹೋಗಿದ್ದ ಕಣ್ವರು ಹಿಂತಿರುಗಿ ಬಂದು ತಾನಿಲ್ಲದಿದ್ದರೂ ಶಕುಂತಲೆ ಸೂಕ್ತನಾದ ವರನನ್ನೇ (ರಾಜನನ್ನೇ) ವರಿಸಿರುವುದನ್ನು ಕಂಡು ಸಂತೋಷದಿಂದಲೆ ಅವಳನ್ನು ಪತಿಗೃಹಕ್ಕೆ ಕಳುಹಿಸಿಕೊಡುತ್ತಾರೆ.

ಇತ್ತ ಋಷಿಪುತ್ರರು ಹಾಗೂ ಹಿರಿಯ ತಾಪಸಿ ಗೌತಮಿಯರ ಒಡಗೂಡಿ

ಆಸ್ಥಾನಕ್ಕೆ ಬಂದ ಶಕುಂತಲೆಯನ್ನು ರಾಜ ತನ್ನ ಪತ್ನಿಯಲ್ಲವೆಂದೂ, ತಾನು ಅವಳನ್ನು ನೋಡೇ ಇಲ್ಲವೆಂದು ಹೇಳಿ ತಿರಸ್ಕರಿಸುತ್ತಾನೆ. ಅವನಿಗೆ ದುರ್ವಾಸಮುನಿ ಶಾಪದ ಮಂಕು ಕವಿದು ಇಂಥ ದುರ್ವ್ಯವಹಾರ ನಡೆದುಹೋಗುತ್ತದೆ. ಬಳಿಕ ಮೀಂಗುಲಿಗ ಹಿಡಿದ ಮೀನಿನ ಹೊಟ್ಟೆಯಲ್ಲಿದ್ದ ರಾಜಾಂಗುಲೀಯಕವನ್ನು ನಗರ ರಕ್ಷಕರು ತಂದು ತೋರಿಸಿದಾಗ ಅದರ ದರ್ಶನದಿಂದ ದುಷ್ಯಂತನಿಗೆ ನೆನಪು ಮರಳುತ್ತದೆ. ಕಣ್ವರ ತಪೋವನದಲ್ಲಿ ನಡೆದ ಎಲ್ಲ ರಸಗಳಿಗೆಗಳೂ ನೆನಪಾಗಿ ಅವನನ್ನು ಹಣ್ಣು ಮಾಡುತ್ತವೆ. ವಿನಾಕಾರಣವಾಗಿ ತನ್ನ ಮನದನ್ನೆಯನ್ನು ಅಟ್ಟಿಬಿಟ್ಟೆನಲ್ಲ, ತನ್ನಂಥ ಪಾಪಿ ಬೇರೆ ಯಾರೂ ಇರಲಾರರೆಂದು ಕೊರಗುತ್ತಾನೆ.

ಇದೀಗ ಶಕುಂತಲೆ ಹಾಗೂ ಅವಳ ಗೆಳತಿಯರೂ, ತಪೋವನದ ಸಂದರ್ಭ ಇವೆಲ್ಲ ಅವನ ಮನಃಪಟಲದ ಮೇಲೆ ಹಾದುಹೋಗುವ ಜೀವಂತ ಚಿತ್ರಗಳಾಗುತ್ತಾರೆ. ಕಲಾವಿದನೂ ಸೂಕ್ಷ್ಮಸಂವೇದನಾಶೀಲನೂ ಸಭ್ಯನೂ ಆದ ದುಷ್ಯಂತನು ಶಕುಂತಲೆಯ ಚಿತ್ರವನ್ನು ಬಿಡಿಸಿ ಅದನ್ನೇ ನೋಡಿ ಒಂದಷ್ಟು ಸಮಾಧಾನಪಟ್ಟುಕೊಳ್ಳುತ್ತಾನೆ.

ಒಮ್ಮೆ ರಾಜಕಾರ್ಯಗಳನ್ನೆಲ್ಲ ಮುಗಿಸಿ ಆಯಾಸಗೊಂಡಿದ್ದಾಗ ಅರಮನೆಯ ಉದ್ಯಾನಕ್ಕೆ ಬಂದು, ಅಪೂರ್ಣವಾಗಿದ್ದ ಚಿತ್ರಪಟವನ್ನು ತರಿಸಿಕೊಳ್ಳುತ್ತಾನೆ. ಅದರಲ್ಲಿ ಮೂವರು ತರುಣಿಯರ ಚಿತ್ರವಿರುತ್ತದೆ. ಪಕ್ಕದಲ್ಲಿರುವ ವಿದೂಷಕ ಮಾಢವ್ಯನು– ಈ ಮೂವರಲ್ಲಿ ಯಾರು ನಿನ್ನ ಪ್ರಿಯತಮೆ ಶಕುಂತಲೆ ಎಂದು ಕೇಳುತ್ತಾನೆ. ಅದಕ್ಕೆ 'ನೀನೇ ಹೇಳು ನೋಡೋಣ' ಎಂದು ಮಾಢವ್ಯನ ಬುದ್ಧಿಮತ್ತೆಯನ್ನು ಪರೀಕ್ಷಿಸುವಂತೆ ಸವಾಲೆಸೆಯುತ್ತಾನೆ ದುಷ್ಯಂತ! ಎಲ್ಲರೂ ಮನಸೆಳೆಯುವ ರೂಪಸಿಯರು. ಶಕುಂತಲೆ ಯಾರಿರಬಹುದು? ಎಂದು ವಿದೂಷಕನು ಯೋಚಿಸುತ್ತ ಶಕುಂತಲೆಯ ಚಿತ್ರವನ್ನು ಊಹಿಸುತ್ತಾನೆ. ಅದು ಸರಿಯಾಗಿಯೆ ಇರುತ್ತದೆ. ದುಷ್ಯಂತನು–ಮಿತ್ರ ನಿನ್ನಲ್ಲೂ ಜಾಣ್ಮೆ ಇದೆ. ಈ ಚಿತ್ರದ ಪಕ್ಕದಲ್ಲಿ ನನ್ನ ಕಣ್ಣೀರಿನ ಹನಿಗಳು ಉದುರಿ ಆ ಭಾಗ ನೆನೆದು ಉಬ್ಬಿದ ವರ್ಣಿಕೆ(ಬಣ್ಣ) ಕಾಣುತ್ತಿದೆ. ಅವಳಿಗೆ ನಾನು ಮಾಡಿದ ಅನ್ಯಾಯಕ್ಕೆ ಈಗ ಕಣ್ಣೀರೇ ನನ್ನ ಗೆಳೆಯನಾಗಿದೆ ಎನ್ನುತ್ತಾನೆ. ಚಿತ್ರವನ್ನು ಪೂರ್ಣಗೊಳಿಸುವ ಸಲುವಾಗಿ ಬಣ್ಣವನ್ನೂ ವರ್ತಿಕೆ(ಬ್ರಶ್)ಯನ್ನೂ ತರಲು ಹೇಳಿ ಕಳಿಸುತ್ತಾನೆ. ಹಾಗೆಯೇ ಚಿತ್ರವನ್ನು ನೋಡುತ್ತಾ ವಿಷಣ್ಣ ಭಾವದಲ್ಲಿ ಮುಳುಗುತ್ತಾನೆ. ರಾಜನು ಚಿತ್ರ ನೋಡುತ್ತ ಕಣ್ಣೀರಿಡುವುದು ವಿದೂಷಕನಿಗೆ ಬೇಸರದ ಸಂಗತಿ. ಅವನ ಬಗೆಯನ್ನು ಬೇರೆಡೆ ಸೆಳೆಯಲು ಹೇಳುತ್ತಾನೆ– "ಮಿತ್ರ ಈಗ ನೀನು ಬರೆದಿರುವ ಚಿತ್ರ ಚೆನ್ನಾಗೇ ಇದೆಯಲ್ಲ. ಇನ್ನೇನು ಮಾಡಬೇಕು, ಸಾಕು ಬಿಡು."

ಹಿನ್ನೆಲೆ ಎಂದರೇನು? ಅದರ ಔಚಿತ್ಯವೆಷ್ಟು? ಯಾರಿಗೆ ಯಾವ ಭೂಮಿಕೆ ಹೊಂದುತ್ತದೆ? ಪಠ್ಯ ಮತ್ತು ಸಂದರ್ಭಕ್ಕೆ ಅತ್ಯಂತ ಸಮಂಜಸವಾದ ವಸ್ತು ಯಾವುದು ಎಂಬುದು ಸ್ಪಷ್ಟವಾಗಿ ತಿಳಿಯಬೇಕಾದರೆ, ದುಷ್ಯಂತ ಹೇಳುವ ಮಾತನ್ನು ಗಮನಿಸಬೇಕು– "ನನ್ನ ಮಿತ್ರನೇ ಈ ಚಿತ್ರದಲ್ಲಿ ಶಕುಂತಲೆ ಮತ್ತವಳ ಸಖಿಯರಿದ್ದಾರೆ ಅಲ್ಲವೆ! ಅವರೆಲ್ಲಿದ್ದಾರೆ? ಯಾವ ಪರಿಸರದಲ್ಲಿದ್ದಾರೆ? ಆ ಪರಿಸರದಲ್ಲೇನಿದೆ? ಅದರಲ್ಲಿರುವ ಪಶು, ಪಕ್ಷಿ, ಪ್ರಾಣಿಗಳ ಭಾವವೇನು? ಅವುಗಳನ್ನೆಲ್ಲ ತೋರಬೇಕಲ್ಲವೆ?"

ಕಾರ್ಯಾ ಸೈಕತ ಹಂಸಲೀನ ಮಿಥುನಾ ಸ್ರೋತೋವಹಾ ಮಾಲಿನೀ
ಪಾದಾಸ್ತಾಮಭಿತಾ ನಿಷಣ್ಣಹರಿಣಾ ಗೌರೀಗುರೋಃ ಪಾವನಾಃ ।

ಶಾಖಾಲಂಬಿತವಲ್ಕಲಸ್ಯ ಚ ತರೋ: ನಿರ್ಮಾತುಮಿಚ್ಛಾಮ್ಯಧ:
ಶೃಂಗೇ ಕೃಷ್ಣಮೃಗಸ್ಯ ವಾಮನಯನಂ ಕಂಡೂಯಮಾನಾಂ ಮೃಗೀಂ ॥

(ಶಾಕುಂತಲ 6ನೇ ಅಂಕ, ಶ್ಲೋಕ –17)

ಚಿತ್ರಕಲೆ ಎಂದರೆ ಕೇವಲ ರೇಖೆಗಳ, ವರ್ಣಗಳ ಮೇಳವಲ್ಲ. ತನ್ಮೂಲಕ ಹೊಮ್ಮುವ ಭಾವಸಮಾಗಮ ಸಾಂಗತ್ಯಕ್ಕೆ, ಚಿತ್ರದ ಜೀವಂತಿಕೆಗೆ ಕನ್ನಡಿಯಾಗಬೇಕು. ದುಷ್ಯಂತನ ಮನಸ್ಸು ಅಂದು ಕಂಡದ್ದನ್ನು ಇಂದೂ ಕಾಣುತ್ತಿದೆ. 'ಆಹಾ! ನಾನವಳನ್ನು ಕಂಡ ಪರಿಸರ ಎಂಥದ್ದು? ಆ ಪಾವಿತ್ರ್ಯ, ಆ ಪರಿಶುದ್ಧಿ, ಆ ರಮ್ಯತೆ. ಹಿಮಗಿರಿಯ ಮಡಿಲಲ್ಲಿ ಜುಳುಜುಳು ಹರಿಯುವ ಮಾಲನೀ ನದಿ, ಅದರ ತೀರದಲ್ಲಿ ನಲಿದಾಡುವ ಅಂಚೆವಕ್ಕಿಗಳ ಜೋಡಿಗಳು, ಹಿಮಾದ್ರಿಯ ಅಡಿಗಳಲ್ಲಿ ಹಾಯಾಗಿ ವಿಶ್ರಮಿಸುವ ಹರಿಣಗಳ ಹಿಂಡು ಈ ಚಿತ್ರದಲ್ಲಿಲ್ಲದಿದ್ದರೆ ಅಪೂರ್ಣವಾಗದೆ? ನದೀತೀರದ ತರುಗಳ ರೆಂಬೆ ಕೊಂಬೆಗಳಲ್ಲಿ ನಾರುಮಡಿಗಳನ್ನು ಇಳಿಸಬೇಕು. ತಪಸ್ವಿಗಳು ಸಂಧ್ಯಾಕಾಲಗಳಲ್ಲಿ ಮಿಂದು ವಲ್ಕಲಗಳನ್ನು ಮಡಿ ಮಾಡಿಕೊಳ್ಳಲು ಈ ಮರದ ರೆಂಬೆಗಳ ಮೇಲಲ್ಲವೆ ಹರುವುವುದು? ಹ್ಞಾ ! ಆ ದೃಶ್ಯವನ್ನು ಹೇಗೆ ಮರೆಯಲಿ? ಮರದ ಕೆಳಗಿನ ತಂಪು ನೆರಳಲ್ಲಿ ಕೃಷ್ಣಮೃಗದ ಜೋಡಿಯೊಂದು ನೆಮ್ಮದಿಯಾಗಿ ಕುಳಿತಿದೆ. ಅವುಗಳು ಪರಸ್ಪರ ಪ್ರೀತಿಭಾವದಿಂದ ಮೈಮರೆತಿವೆ. ಹೆಣ್ಣು ಹರಿಣವು ತನ್ನ ಕೊಂಬಿನಿಂದ ಗಂಡಿನ ಎಡಕಣ್ಣಿನ ಕೆಳಭಾಗವನ್ನು ನಯವಾಗಿ ನೇವರಿಸುತ್ತಿದೆ. ಆ ನೇವರಿಕೆ ಗಂಡಿಗೆ ಹಿತವಾದ ಅನುಭವ ನೀಡುತ್ತಿದೆ. ಕಣ್ಣಿನ ಸಮೀಪದಲ್ಲೆ ಕೆರೆಯುತ್ತಿದ್ದರೂ ಕಣ್ಣಿಗೆ ಚುಚ್ಚದಂತೆ ಎಚ್ಚರವಹಿಸುತ್ತಿದೆ ಹರಿಣಿ. ಆಹಾ! ಎಂಥ ವಿಶ್ವಾಸ! ದುಶ್ಯಂತನಿಗೆ ಕಣ್ವಾಶ್ರಮದ ಈ ಸೊಬಗಿನ ದೃಶ್ಯ ಕಾಣುತ್ತಿದ್ದರೆ, ಇತ್ತ,

ವಿದೂಷಕ ಒಳಗೊಳಗೆ ಗೊಣಗುತ್ತಾನೆ. "ಅಯ್ಯಯ್ಯೋ! ಸುಂದರ ಹುಡುಗಿಯರಿರುವ ಚಿತ್ರಫಲಕದ ತುಂಬ ಗಡ್ಡ–ಮೀಸೆಯ ತಪಸ್ವಿಗಳನ್ನೂ ಒರಟೊರಟಾದ ನಾರುಮಡಿಗಳ ಚಿತ್ರಗಳನ್ನು ತುಂಬಿಸಿ ಬಿಡುತ್ತಾನೋ ಏನೋ ಕಾಣೆ! ಇದ್ಯಾವ ಕರ್ಮ"

ಅಷ್ಟರಲ್ಲಿ ದುಷ್ಯಂತ ಹೇಳುತ್ತಾನೆ. 'ಮಿತ್ರ, ನೋಡು ಶಕುಂತಲೆಗೆ ಆಭರಣಗಳನ್ನೇ ತೊಡಿಸಿಲ್ಲ. ಅವುಗಳನ್ನೂ ಚಿತ್ರಿಸಬೇಕಲ್ಲ'. ತಪೋವನದಲ್ಲಿರುವ ಅವಳಿಗೆಂಥ ಆಭರಣ? ವಿದೂಷಕನ ಶಂಕೆ– 'ಅದೇ ವನವಾಸಕ್ಕೂ, ಸೌಕುಮಾರ್ಯಕ್ಕೂ ತಕ್ಕುದಾದ ಒಡವೆ'. ಅದಾವುದೆಂದರೆ–ನಯವಾದ ಕೆನ್ನೆಯ ಮೇಲೆ ಇಳಿಬಿದ್ದ ಕೇಸರವುಳ್ಳ ಶಿರೀಷಕುಸುಮವನ್ನು ಕಿವಿಯೋಲೆಯಂತೆ ಇಡಬೇಕು. ತಾವರೆ ದಂಟಿನೊಳಗಿನ ಬೆಳ್ಳನೆಯ ಸೂತ್ರದಂಥ ಎಳೆಯನ್ನು ಅವಳ ಎದೆಯ ಮೇಲೆ ಚಿತ್ರಿಸಬೇಕಾಗಿದೆ'.

ಅಪ್ಸರೆಯ ಕುವರಿಯಾದರೂ ತಪೋವನದಲ್ಲಿ ಋಷಿಪುತ್ರಿಯಾಗಿ ಬೆಳೆದ ಸಹಜಸುಂದರಿಗೆ ಮತ್ತಾವ ಆಭರಣ ಒಪ್ಪುತ್ತದೆ? ಶಕುಂತಲೆ ಎಲ್ಲಿದ್ದಳು? ಮಾಲಿನೀ ತೀರದ ತಪೋವನದಲ್ಲಿದ್ದವಳು. ಆ ತಪೋವನಕ್ಕೆ ಆ ಇಡೀ ಪರಿಸರಕ್ಕೆ ವಿಶಿಷ್ಟವಾದ ಕಾಂತಿ ಇದೆ, ಭಾವವಿದೆ, ಜೀವಿಗಳ ಸಂಪರ್ಕವಿದೆ. ಅವಳು ಎಲ್ಲೋ ಆಕಾಶದಲ್ಲಿ ನಿರಾಧಾರವಾಗಿ ಇದ್ದವಳಲ್ಲ. ಅವಳ ಇರುವಿಕೆಯ ಭೂಮಿಕೆಯನ್ನು ಪರಿಪೂರ್ಣವಾಗಿ ಗ್ರಹಿಸುತ್ತಾನೆ ಕಲಾವಿದನಾದ ದುಶ್ಯಂತ.

ಪ್ರಸಂಗದ ಔಚಿತ್ಯವೆಂದರೆ ಇದೇ ತಾನೇ?

❖❖❖

ನಾ. ಮೊಗಸಾಲೆ ಅವರ 'ಇದ್ದೂ ಇಲ್ಲದ್ದು'

ಡಾ. ಬಿ. ಜನಾರ್ದನ ಭಟ್
ನಿವೃತ್ತ ಪ್ರಾಂಶುಪಾಲ ಮತ್ತು ಲೇಖಕ, ಅಕ್ಷರ, ದೇವಸ್ಥಾನದ ರಸ್ತೆ
ಅಂಚೆ: ಬೆಳ್ಮಣ್ಣು. 576111

ಡಾ. ನಾ. ಮೊಗಸಾಲೆಯವರು ಸರಕಾರೀ ಸೇವೆಯಿಂದ(ಸರಕಾರೀ ವೈದ್ಯರಾಗಿ ಸೇವೆಸಲ್ಲಿಸಿ) ನಿವೃತ್ತರಾದ ಮೇಲೆ 'ಬಯಲಬೆಟ್ಟ' ಎಂಬ ಆತ್ಮಕಥೆ; 'ಉಲ್ಲಂಘನೆ' (ತುಳುನಾಡಿನ ಆರ್ಥಿಕ ಸಂಬಂಧಗಳ ಪಲ್ಲಟದ ಬದುಕನ್ನು, ಸಮಗ್ರ ಎನ್ನಬಹುದಾದಂತೆ–ಕಾಸರಗೋಡು ಭಾಗದ ಬಂಟ ಸಮುದಾಯದ ಕುಟುಂಬವೊಂದರ ಕೇಂದ್ರ ಕಥಾನಕದ ಮೂಲಕ ಚಿತ್ರಿಸಿದ ಕಾದಂಬರಿ) ಮತ್ತು 'ಮುಖಾಂತರ' (ತುಳುನಾಡಿನ ರಾಜಕೀಯ ಮತ್ತು ಸಾಂಸ್ಕೃತಿಕ ಪಲ್ಲಟವನ್ನು, ಸಮಗ್ರ ಎನ್ನಬಹುದಾದಂತೆ–ಕಾಸರಗೋಡು ಭಾಗದ ಹವ್ಯಕ ಬ್ರಾಹ್ಮಣ ಸಮುದಾಯದ ಕೇಂದ್ರ ಕಥಾನಕದ ಮೂಲಕ ಚಿತ್ರಿಸಿದ ಕಾದಂಬರಿ) – ಈ ಬೃಹತ್ ಕಾದಂಬರಿಗಳನ್ನು ಬರೆದು ತಮ್ಮ ಕಾಲದಲ್ಲಿ ಕಂಡುಂಡ ಜೀವನಾನುಭವವನ್ನು ದಾಖಲಿಸಿ ಈ ಭಾಗದ ಸಾಂಸ್ಕೃತಿಕ ದಾಖಲೆಗಳೆನ್ನಬಹುದಾದ ಕೃತಿಗಳನ್ನು ಸೃಷ್ಟಿಸಿದರು. ಇದರಲ್ಲಿ ಅವರು ಯೋಚಿಸಿರಬಹುದಾದಂತೆ ಒಂದು ಕೊರತೆ ಉಳಿದಿತ್ತು. ಅದೇನೆಂದರೆ ಉಡುಪಿ ಜಿಲ್ಲೆಯ ಬದುಕನ್ನು–ನಿರ್ದಿಷ್ಟವಾಗಿ, ಅವರಿಗೆ ಹೊಕ್ಕುಬಳಕೆ ಇರುವ, ಕರಾವಳಿಯ ಮತ್ತೊಂದು ಮುಖ್ಯ ಸಮುದಾಯವಾದ ಮಾಧ್ವ ಬ್ರಾಹ್ಮಣ ಕುಟುಂಬದ ಅನುಭವದ ಮೂಲಕ–ದಾಖಲು ಮಾಡಿದರೆ ಅವರ ಜೀವನಾನುಭವದ ಮತ್ತೊಂದು ದೊಡ್ಡ ಖಂಡದ ಸಾಂಸ್ಕೃತಿಕ ದಾಖಲೀಕರಣ ಆದಂತೆ ಆಗುತ್ತಿತ್ತು. ಮಧ್ವಾಚಾರ್ಯರಿಗೆ ಜನ್ಮವಿತ್ತ ಮಾಧ್ವಸಿದ್ಧಾಂತದ ಕೇಂದ್ರ ಉಡುಪಿಯನ್ನು–ಇಲ್ಲಿನ ಮಾಧ್ವ ಬ್ರಾಹ್ಮಣರ ಬದುಕನ್ನು–ಕೇಂದ್ರವಾಗಿಸಿಕೊಂಡು ಇಲ್ಲಿನ ಜೀವನಾನುಭವಗಳನ್ನು ಸಾಂಸ್ಕೃತಿಕವಾಗಿ, ಸೃಜನಶೀಲ ಕೃತಿಯೊಂದರಲ್ಲಿ ಹಿಡಿದಿಡದೆ ಇದ್ದರೆ ತಮ್ಮ ಅನುಭವ ಪ್ರಪಂಚವನ್ನೆಲ್ಲ ತೆರೆದಿಡುವ ಪ್ರಯತ್ನ ಪರಿಪೂರ್ಣವಾಗದು ಎಂದು ಡಾ. ನಾ. ಮೊಗಸಾಲೆಯವರು ತಿಳಿದಿರಬೇಕು.

ಅದರ ಫಲವಾಗಿ ಸೃಷ್ಟಿಯಾದ ಕಾದಂಬರಿಯೇ 'ಇದ್ದೂ ಇಲ್ಲದ್ದು' (ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ. 2022). ಇದು 'ಉಲ್ಲಂಘನೆ', 'ಮುಖಾಂತರ'ಗಳ ಜತೆಯಲ್ಲಿ –ಸಾಧ್ಯವಿದ್ದರೆ 'ಬಯಲಬೆಟ್ಟ'ವನ್ನೂ ಸೇರಿಸಿಕೊಂಡು–ಪರಿಶೀಲಿಸಬೇಕಾದ ಸುಮಾರಾಗಿ ದೊಡ್ಡದೇ ಅನ್ನಬಹುದಾದ ಕಾದಂಬರಿ. (ಸಣ್ಣ ಅಕ್ಷರಗಳಲ್ಲಿ 250 ಪುಟಗಳು. ಸಾಮಾನ್ಯವಾಗಿರುವ 12 ಪಾಯಿಂಟ್–30 ಸಾಲು ವಿನ್ಯಾಸದಲ್ಲಿ ಸುಮಾರು 350 ಪುಟಗಳಾಗುತ್ತವೆ). ಈ ಕಾದಂಬರಿಯಲ್ಲಿಯೂ ಕಥೆ ನಡೆಯುವುದು ಮೊಗಸಾಲೆಯವರ ಕಾಲ್ಪನಿಕ ಕಥನಕೇಂದ್ರ ಸೀತಾಪುರದಲ್ಲಿಯೇ. ಅವರ ಸಣ್ಣಕತೆಗಳಲ್ಲಿ ಕಾಂತಾವರವೇ ಸೀತಾಪುರವಾದರೆ, ಉಳಿದೆರಡು ಬೃಹತ್ ಕಾದಂಬರಿಗಳಲ್ಲಿ ಮಂಗಳೂರನ್ನು ರಾಜಧಾನಿಯಾಗಿ ಉಳ್ಳ ಸ್ವಾತಂತ್ರ್ಯಪೂರ್ವದ ಕಾಸರಗೋಡು ಜಿಲ್ಲೆ

ಕಥನಕೇಂದ್ರವಾಗಿದೆ. ಈ ಕಾದಂಬರಿಯಲ್ಲಿ ಅದು ಉಡುಪಿಯ ಸಮೀಪಕ್ಕೆ, ಮಾಧ್ವ ಬ್ರಾಹ್ಮಣ ಪ್ರಜೆಗಳ ಜನದಟ್ಟಣೆಯಿರುವ ಊರಾಗಿ ಸ್ಥಳಾಂತರಗೊಂಡಿದೆ.

'ಬಯಲಬೆಟ್ಟ' ಆತ್ಮಕಥನ ಓದಿದವರಿಗೆ ಕಾಸರಗೋಡು ಜಿಲ್ಲೆಯಲ್ಲಿ ಹುಟ್ಟಿದ ಮೊಗಸಾಲೆಯವರು ಉಡುಪಿಯ ಪೇಜಾವರ ಮಠದಲ್ಲಿ ಇದ್ದುಕೊಂಡು ಇಲ್ಲಿ ಆಯುರ್ವೇದ ವೈದ್ಯಕೀಯ ವಿದ್ಯಾರ್ಥಿಯಾಗಿದ್ದುದು ಮತ್ತು ಉಡುಪಿ ಜಿಲ್ಲೆಯ ಕಾಂತಾವರದಲ್ಲಿ ಸರಕಾರಿ ವೈದ್ಯರಾಗಿ ಉದ್ಯೋಗ ಜೀವನವನ್ನು ಪ್ರಾರಂಭಿಸಿ ಅದನ್ನೇ ತಮ್ಮ ಕರ್ಮಭೂಮಿಯನ್ನಾಗಿಸಿಕೊಂಡದ್ದರ ವಿವರಗಳು ದೊರಕುತ್ತವೆ. ಇದನ್ನು ಉಲ್ಲೇಖಿಸುವುದರಲ್ಲಿರುವ ಇನ್ನೊಂದು ಸೂಕ್ಷ್ಮ ಎಂದರೆ ಮೊಗಸಾಲೆಯವರು ಈ (ಇದ್ದೂ ಇಲ್ಲದ್ದು) ಕಾದಂಬರಿಯಲ್ಲಿ ಚಿತ್ರಿಸಿರುವ ಮಾಧ್ವ ಬ್ರಾಹ್ಮಣರ ಮತ್ತು ಉಡುಪಿ ಪರಿಸರದ ಬದುಕು ಅವರಿಗೆ ಹೊಕ್ಕುಬಳಕೆಯ ಪರಿಚಯದ್ದೇ ಆಗಿದೆ ಎನ್ನುವುದನ್ನು ದಾಖಲಿಸುವುದು.

****

ನಾ. ಮೊಗಸಾಲೆಯವರು ತಮ್ಮ 'ಇದ್ದೂ ಇಲ್ಲದ್ದು' ಕಾದಂಬರಿಯಲ್ಲಿ ಓದುಗನ ಆಸಕ್ತಿಯನ್ನು ಹಿಡಿದಿಡಲು ಒಂದು ಸಮಸ್ಯೆಯನ್ನು ಎತ್ತುತ್ತಾರೆ. ಅದು ಒಂದು ರೀತಿಯಲ್ಲಿ ಧರ್ಮಕ್ಕೆ ಸಂಬಂಧಿಸಿದ ಸಮಸ್ಯೆ. ದಕ್ಷಿಣ ಕನ್ನಡ (ನಿರ್ದಿಷ್ಟವಾಗಿ ಉಡುಪಿ ಕೇಂದ್ರಿತ) ಮಾಧ್ವ ಶಿವಳ್ಳಿ ಬ್ರಾಹ್ಮಣರ ಹೊಸ ತಲೆಮಾರಿನ ಒಂದು 'ಸಮಸ್ಯೆ' ಎಂದರೆ ಮನೆದೇವರ ಪೂಜೆಯನ್ನು ಮುಂದುವರಿಸಿಕೊಂಡು ಹೋಗಲು ಅಸಾಧ್ಯವಾಗಿರುವ ಸಮಸ್ಯೆ. ಅದೇ ಈ ಕಾದಂಬರಿಯ ಚೌಕಟ್ಟಾಗಿ ಕಾದಂಬರಿಯ ಕಥಾನಕಗಳನ್ನು ಹಿಡಿದಿಟ್ಟಿದೆ.

ಇದು ಈ ಪ್ರದೇಶದ ಬದುಕಿನ ಒಂದು 'ಧಾರ್ಮಿಕ' ಮುಖ. ಇದರ ಮುಖಾಂತರ ಇಲ್ಲಿನ ಸಮಗ್ರ ಬದುಕನ್ನು ಪರಿಶೀಲಿಸುವ ತಂತ್ರ ಕಾದಂಬರಿಯಲ್ಲಿದೆ. ಕಾದಂಬರಿಯ ಕುರಿತು, ಅದರ ಕತೆ – ಪಾತ್ರಗಳ ಕುರಿತು ಹೇಳುವ ಮುನ್ನ ಈ ವಸ್ತುವನ್ನು ಕುರಿತು ಚರ್ಚಿಸೋಣ.

ಈ ಕಾದಂಬರಿಯಲ್ಲಿರುವ ಕೇಂದ್ರ ಸಮಸ್ಯೆ ಮನೆದೇವರ ಪೂಜೆಯ ವ್ಯವಸ್ಥೆಯದ್ದು. ದಕ್ಷಿಣ ಕನ್ನಡದ ಬ್ರಾಹ್ಮಣರು (ಬೇರೆ ಪ್ರದೇಶಗಳಲ್ಲಿಯೂ ಇದೇ ಸಮಸ್ಯೆ ಇಲ್ಲವೆಂದಲ್ಲ – ಮೊಗಸಾಲೆಯವರ ಕಾದಂಬರಿಯಲ್ಲಿ ದಕ್ಷಿಣ ಕನ್ನಡದ ಬ್ರಾಹ್ಮಣರು) ಮನೆದೇವರು ಎಂದು ಯಾವುದಾದರೂ ದೇವರನ್ನು ವಿಗ್ರಹ ರೂಪದಲ್ಲಿ ಅಥವಾ ಶಾಲಗ್ರಾಮದ ಸಂಕೇತದಲ್ಲಿ ನಿತ್ಯಪೂಜಿಸುತ್ತಾ ಬರುತ್ತಿರುತ್ತಾರೆ. ಹಲವಾರು ಮನೆಗಳಲ್ಲಿ ದೇವರಿಗೆ ನಿತ್ಯವೂ ಮಡಿಯಲ್ಲಿ, ಬೆಳ್ತಿಗೆ ಅಕ್ಕಿಯಿಂದ ನೈವೇದ್ಯ ಮಾಡಿ ಸಮರ್ಪಣೆ ಮಾಡಬೇಕಾದ ಪದ್ಧತಿ ಇರುತ್ತದೆ. ಪೂಜೆ ಮಾಡಬೇಕಾದವನು ಮನೆಯ ಯಜಮಾನ ಅಥವಾ ಅವನಿಂದ ನಿಯೋಜಿತನಾದ ಉಪನಯನ ಆಗಿರುವ ಯಾವನಾದರೂ ವಿವಾಹಿತ ಅಥವಾ ಅವಿವಾಹಿತ ವ್ಯಕ್ತಿ. (ದೇವಸ್ಥಾನಗಳಲ್ಲಿ ಹೆಚ್ಚಾಗಿ ಅವಿವಾಹಿತರು ಮತ್ತು ವಿಧುರರು ಪೂಜೆ ಮಾಡುವಂತಿಲ್ಲ. ಮನೆಗಳಲ್ಲಿ ಅಷ್ಟು ಕಟ್ಟುನಿಟ್ಟಾದ ನಿಯಮ ಇರುವುದಿಲ್ಲ). ಹುಟ್ಟಿದೂರಲ್ಲಿಯೇ ಕೃಷಿ, ಅಡಿಗೆ, ಶಿಕ್ಷಕ, ಅರ್ಚಕ ಅಥವಾ ಪೌರೋಹಿತ್ಯ ವೃತ್ತಿಯನ್ನು ಅವಲಂಬಿಸುತ್ತಿದ್ದಷ್ಟು ಕಾಲ ದೇವಪೂಜೆ ಎನ್ನುವುದು ಸಮಸ್ಯೆಯಾಗಲಿಲ್ಲ. ಆದರೆ ಆಧುನಿಕತೆ ಬಂದಮೇಲೆ ಬ್ರಾಹ್ಮಣ ಕುಟುಂಬಗಳು

ವಲಸೆ ಹೋಗಲಾರಂಭಿಸಿದವು. ಹೋಟೆಲ್ ಉದ್ಯೋಗಕ್ಕಾಗಿ, ಬ್ಯಾಂಕ್ ಮತ್ತಿತರ ಹೊಸ ಉದ್ಯೋಗಗಳನ್ನು ಅರಸುತ್ತಾ ಮತ್ತು ಇತ್ತೀಚಿನ ದಶಕಗಳಲ್ಲಿ ಸಾಫ್ಟ್‌ವೇರ್ ಉದ್ಯೋಗಿಗಳಾಗಿ ಬ್ರಾಹ್ಮಣ ಕುಟುಂಬಗಳು ಊರುಬಿಟ್ಟು ವಲಸೆ ಹೋಗತೊಡಗಿದವು. ಆಗ ಅವರ ಮನೆದೇವರ ಪೂಜೆಯನ್ನು ಮಾಡುವುದು ಎಲ್ಲಿ, ಹೇಗೆ, ಯಾರು ಎನ್ನುವ ಸಮಸ್ಯೆ ತಲೆಯೆತ್ತತೊಡಗಿತು.

ಈ ಪೂಜಾಪದ್ಧತಿಯನ್ನು ನಿಲ್ಲಿಸಿದರೆ ಏನಾಗುತ್ತದೆ? ಪೂಜಿಸುತ್ತಿದ್ದ ದೇವರ ಸಂಕೇತಗಳನ್ನು ಏನು ಮಾಡುವುದು?

ಈ ಕಾದಂಬರಿಯಲ್ಲಿರುವ ಕೇಂದ್ರ ಸಮಸ್ಯೆ ಇದೇ. ಈ ಕಾದಂಬರಿಯ ಕುಟುಂಬ (ಸೀತಾಪುರದ ದೇವರಮನೆ ಕುಟುಂಬ. ಈ ಕುಟುಂಬದ ರಮಾನಂದ – ಕಥಾನಕದ ಕೇಂದ್ರ ಪಾತ್ರ) ಈ ಸಮಸ್ಯೆಯನ್ನು ಪರಿಹರಿಸಿಕೊಂಡದ್ದು ಬಡ ಬ್ರಾಹ್ಮಣ ಕುಟುಂಬ ಒಂದನ್ನು (ಪಡುಬಿದ್ರಿ ಕುಪ್ಪಣ್ಣಾಚಾರ್ಯ) ತಮ್ಮ ಮನೆಯಲ್ಲಿ ನಿಲ್ಲಿಸಿ ಪೂಜೆ ಪುರಸ್ಕಾರಗಳು ಅವರ ಮೂಲಕ ನಿರಂತರವಾಗಿ ನಡೆಯುತ್ತಿರುವಂತೆ ವ್ಯವಸ್ಥೆ ಮಾಡುವ ಮೂಲಕ. ಇಂತಹ ವ್ಯವಸ್ಥೆಯನ್ನು ನೂರಾರು ಕುಟುಂಬಗಳು ಮಾಡಿಕೊಂಡಿವೆ.

ಮೂರು ದಶಕಗಳ ಹಿಂದಿನವರೆಗೆ ಸ್ವಂತ ಮನೆಯಿಲ್ಲದ ಬಡಬ್ರಾಹ್ಮಣ ಕುಟುಂಬಗಳ ಸಂಖ್ಯೆ ಹೆಚ್ಚಾಗಿದ್ದುದರಿಂದ ಶ್ರೀಮಂತರ ಹಳ್ಳಿ ಮನೆಗಳಲ್ಲಿ ಉಚಿತವಾಗಿ ವಾಸವಾಗಿರಲು ಬಿಡುವುದೇ ಅವರಿಗೊಂದು ವರವಾಗಿತ್ತು. ಜತೆಗೆ ಮನೆಯ ಸುತ್ತ ಇರುವ ತೆಂಗಿನಮರ ಅಡಿಕೆ ಮರಗಳ ಉತ್ಪನ್ನಗಳನ್ನು ಇವರೇ ನೋಡಿಕೊಂಡು ಅದರಿಂದ ಬರುವ ಲಾಭಾಂಶವನ್ನು ಯಜಮಾನರಿಗೆ ತಲುಪಿಸಬೇಕಾಗಿಯೂ ಇತ್ತು. ಈ ಕಾದಂಬರಿಯ ಕುಪ್ಪಣ್ಣಾಚಾರ್ಯರು ದೇವರಮನೆಯನ್ನು ನೋಡಿಕೊಂಡು ಗದ್ದೆ ತೋಟಗಳ ಆದಾಯವನ್ನು ಯಜಮಾನರ ಖಾತೆಗಳಿಗೆ ಜಮೆ ಮಾಡುತ್ತಾ ಇರುತ್ತಾರೆ. ನಮ್ಮೂರಿನಲ್ಲಿಯೇ ನಾಲ್ಕು ಮನೆಗಳಲ್ಲಿ ಈ ರೀತಿಯ ವ್ಯವಸ್ಥೆಯಿದ್ದುದನ್ನು ನಾನು ಕಂಡಿದ್ದೇನೆ.

ಈಗ ಈ ರೀತಿ ಉಚಿತವಾಗಿ ಉಳಿಯುವ ಸೌಕರ್ಯಕ್ಕೆ ಹಾತೊರೆಯುವ ಕುಟುಂಬಗಳಿಲ್ಲ. ಹಾಗಾಗಿ ಯಜಮಾನರುಗಳು ತಾವೇ ಪ್ರತ್ಯೇಕ ಸಂಬಳವನ್ನು ಪೂಜೆ ಮಾಡುವ ಕುಟುಂಬದವರಿಗೆ ಕೊಡಬೇಕಾದ ಪರಿಸ್ಥಿತಿ ಬಂದಿದೆ. ಇತ್ತೀಚಿನ ದಶಕಗಳಲ್ಲಿ ಇಂತಹ ಯಜಮಾನರು ಆಧುನಿಕ ಉದ್ಯೋಗಾವಕಾಶಗಳ ಮೂಲಕ ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸುತ್ತ ಅದರ ಸಣ್ಣ ಒಂದು ಅಂಶವನ್ನು ತಮ್ಮ ಮೂಲ ಮನೆಯ ದೇವರ ಪೂಜೆಗೆ ವಿನಿಯೋಗಿಸುತ್ತಾ ದೂರದಲ್ಲೆಲ್ಲೋ ಸುಖವಾಗಿರುತ್ತಾರೆ. ಆದರೂ ಮನೆ ಪೂಜೆಗೆ ಜನ ಸಿಗುವುದಿಲ್ಲ.

ಪೂಜೆಗಾಗಿ ಹೀಗೆ ಇನ್ನೊಂದು ಮನೆಯಲ್ಲಿ ವಾಸಮಾಡುವ ಬ್ರಾಹ್ಮಣ ಕುಟುಂಬಗಳು ಸ್ವಂತ ಮನೆಯಿಲ್ಲದ ಬಡವರಾಗಿರುತ್ತಾರೆ. ಈ ಬಡ ಬ್ರಾಹ್ಮಣ ಕುಟುಂಬಕ್ಕೂ ಮೇಲ್ಮುಖ ಚಲನೆ ಒದಗಿ ಬರುವುದುಂಟು. ಸಣ್ಣ ಮಕ್ಕಳನ್ನು ಕರೆದುಕೊಂಡು ಬರುವ ಬಡ ಕುಟುಂಬಗಳು ವಿದ್ಯೆಯೆ ತಮ್ಮ ಉದ್ಧಾರಕ್ಕಾಗಿ ಇರುವ ದಾರಿ ಎಂದು ಕಂಡುಕೊಂಡು ಮಕ್ಕಳನ್ನು ಕಲಿಸುತ್ತಾರೆ. ಆ ಮಕ್ಕಳು ಉದ್ಯೋಗ ಸಂಪಾದಿಸಿದಾಗ ಹಂಗಿನ ಮನೆಗಳಿಂದ ತಮ್ಮ ಹೆತ್ತವರನ್ನು ಬಿಡಿಸಿ ಕರೆದುಕೊಂಡು ಹೋಗಿ ಸ್ವಂತ ಮನೆಗಳನ್ನು ಕಟ್ಟಿಕೊಳ್ಳುತ್ತಾರೆ. (ಪೂರ್ವಪರಂಪರೆ ಇಲ್ಲದ ಅಥವಾ

ಇದ್ದರೂ ವಿಸ್ಮೃತಿಗೆ ಸಂದಿರುವ ದೇಶಾವರಿ ಬಡ ಬ್ರಾಹ್ಮಣ ಕುಟುಂಬಗಳಿಗೆ ದೇವರ ನೆನಪಿನ ಹಂಗಿಲ್ಲದೆ ಇರುವುದೂ ಇದೆ).

ಈ ಕಾದಂಬರಿಯಲ್ಲಿ ಮಾತ್ರ ಇಂತಹ ಬಡ ಕುಟುಂಬ ಒಂದು ದುರಂತದ ಕಾರಣವಾಗಿ ದೇವರಮನೆಯನ್ನು ಬಿಟ್ಟುಹೋಗುವುದರಲ್ಲಿದೆ. ಕುಪ್ಪಣ್ಣಾಚಾರ್ಯರ ಮಗ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಆಗ ಅವರಿಗೆ ಮತ್ತೆ ಬದುಕಿನಲ್ಲಿ ಆಸಕ್ತಿ ಕಳೆದುಹೋಗಿ, ಕಾದಂಬರಿಯ ಕೇಂದ್ರ ಪಾತ್ರವಾದ ದೇವರಮನೆ ರಮಾನಂದನಿಗೆ ಪತ್ರ ಬರೆದು, ಪೂಜೆಗೆ ಬೇರೆ ವ್ಯವಸ್ಥೆ ಮಾಡಬೇಕು, ತನ್ನನ್ನು ಮುಕ್ತಗೊಳಿಸಬೇಕು ಎಂದು ಕೋರಿಕೊಳ್ಳುತ್ತಾರೆ.

ಆಗ 'ದೇವರ ಪೂಜೆಯ ಗತಿ ಏನು?' ಎನ್ನುವ ಸಮಸ್ಯೆ ನಾಯಕನನ್ನು ಕಾಡತೊಡಗುತ್ತದೆ. ಅದಕ್ಕಾಗಿ ಅವನು ಊರಿಗೆ ಬಂದು, ತಮ್ಮ ಹಿರಿಯರ ಬದುಕನ್ನು ಅರಿತುಕೊಳ್ಳುತ್ತಾ ಹೋಗುವುದು, ಆ ಮೂಲಕ ಅವನ ಹಿರಿಯರ ಕಾಲದ ಬದುಕಿನ ಚಿತ್ರಣ ನಡೆದಿರುವುದು ಕಾದಂಬರಿಯ ಶರೀರವಾಗಿದೆ. ಇದನ್ನು ಕಥೆಯೊಳಗಿನ ಕಥೆ ಅಥವಾ ಚೌಕಟ್ಟಿನ ತಂತ್ರವಾಗಿ ಪರಿಗಣಿಸಬಹುದು. ಭೂತಕಾಲದ ಬದುಕಿನ ಚಿತ್ರಣವನ್ನು ಕಥಾನಕದ ಹರಿವಿನಲ್ಲಿಯೆ ಅಳವಡಿಸಿಕೊಳ್ಳಲು, ಅದನ್ನು ನಮ್ಮ ಅರಿವಿಗೆ ತರಲು ಲೇಖಕರು ಒಂದು ತಂತ್ರವನ್ನು ಅನುಸರಿಸುತ್ತಾರೆ. ರಮಾನಂದನಿಗೆ ತನ್ನ ಅಪ್ಪ ಬರೆಯುತ್ತಿದ್ದ ದಿನಚರಿಪುಸ್ತಕ (ಡೈರಿ) ಸಿಕ್ಕಿ, ಅದರ ಮೂಲಕ ಹಿಂದಿನ ಕಾಲದಲ್ಲಿ ನಡೆದ ಘಟನೆಗಳನ್ನು ಅರಿತುಕೊಂಡು, ಅದನ್ನು ತನ್ನ ಕಲ್ಪನೆಯಿಂದ ಪರಿಪುಷ್ಟಗೊಳಿಸಿ ಸೃಜನಶೀಲ ಕಥಾನಕವಾಗಿ ಬರೆಯುವ ತಂತ್ರವೇ ಅದು. ಇದರಿಂದಾಗಿ, ಈ ಕಾದಂಬರಿಯಲ್ಲಿ ಕಥೆಯೊಳಗಿನ ಕಥೆ ತಂತ್ರವಿದೆ. ಈ ಒಳಗಿನ ಲೇಖಕ ದೇವರಮನೆ ರಮಾನಂದನು, ತಾನೇ ಒಂದು ಪಾತ್ರವೂ ಆಗಿರುವುದರಿಂದ ಕೆಲವು ಅನುಕೂಲಗಳೂ, ಕೆಲವು ತಾಂತ್ರಿಕ ಸಮಸ್ಯೆಗಳೂ ಸಹಜವಾಗಿ ಲೇಖಕರಿಗೆ ಎದುರಾಗಿದೆ. ಮುಖ್ಯವಾದ ಸಮಸ್ಯೆಯೆಂದರೆ ಈ ಕಾಲದ ರಮಾನಂದನಿಗೆ ಆ ಕಾಲದ ದಟ್ಟ ಸಾಂಸ್ಕೃತಿಕ ವಿವರಗಳು, ಪಾತ್ರಗಳು ತಮ್ಮ ಅಂತರಂಗದಲ್ಲಿ ಯೋಚಿಸುವ ರೀತಿ ಮತ್ತು ಬಹಿರಂಗದಲ್ಲಿ ಆಡುವ ಮಾತು, ನಡೆಯುವ ಘಟನೆಗಳು ಇತ್ಯಾದಿ ದರ್ಶನಕೊಟ್ಟ ರೀತಿಯು – ವಾಲ್ಮೀಕಿಗೆ ಬ್ರಹ್ಮದೇವರ ಅನುಗ್ರಹದಿಂದ ರಾಮಾಯಣದ ಕಥೆಯು ಅಂಗೈಮೇಲಿನ ನೆಲ್ಲಿಯಂತೆ ಸ್ಪಷ್ಟವಾಗಿ ಕಂಡ ರೀತಿಯಲ್ಲಿಯೇ – ಕಲ್ಪನೆಯಲ್ಲಿಯೇ ಕಂಡದ್ದು ಎಂದು ನಾವು ನಂಬಬೇಕಾಗುತ್ತದೆ.

*****

ಇಲ್ಲಿ ನಾವು ಬಹಳ ಮುಖ್ಯವಾದ ಪ್ರಶ್ನೆಯೊಂದನ್ನು ಕೇಳಿಕೊಳ್ಳಬಹುದು. ದೇವರನ್ನು ಮನೆಯಲ್ಲಿ ನಂಬಿ ಪೂಜಿಸಿಕೊಂಡು ಬರುವುದು ಬ್ರಾಹ್ಮಣರ ವಿಶಿಷ್ಟ ಸಮಸ್ಯೆ; ಇಲ್ಲಿನ ಬ್ರಾಹ್ಮಣೇತರರದಲ್ಲ ಎನ್ನುವ ಅಭಿಪ್ರಾಯವಿದೆ. ಆದರೆ ಇದು ಬ್ರಾಹ್ಮಣರ ದೈವ ದೇವರಿಗೂ, ಬ್ರಾಹ್ಮಣೇತರರ ದೈವಗಳಿಗೂ ಸಂಬಂಧಿಸಿದ ಸಮಸ್ಯೆ. ತುಳುನಾಡಿನಲ್ಲಿ ದೇವರು ಮತ್ತು ದೈವಗಳು ಎಂಬ ಎರಡು ವಿಧಗಳ ಪೂಜಾರ್ಹ ದೈವಿಕ ಶಕ್ತಿಗಳಿದ್ದಾವೆ. ಇಲ್ಲಿ 'ನಂಬುವುದು' ಅನ್ನುವುದೇ ಪ್ರಕ್ರಿಯೆ. ದೇವಸ್ಥಾನಗಳಲ್ಲಿ ಇರುವ ಹಾಗೆ ಆಗಮೋಕ್ತ ಪ್ರತಿಷ್ಠೆ (ಬ್ರಹ್ಮಕಲಶ ವಿಧಿಗಳ ಮೂಲಕ) ಅಲ್ಲ. ದೈವ ಮತ್ತು ದೇವರು ಎರಡೂ ವರ್ಗದ ದೈವಿಕ ಸಂಕೇತಗಳನ್ನು ಇಲ್ಲಿನ ಜನ ಆರಾಧಿಸುತ್ತಾರೆ.

ದೇವರು ಅಂದರೆ ಭಾರತದಾದ್ಯಂತ ಆರಾಧನೆಗೊಳ್ಳುವ ಹರಿ, ಹರ, ದುರ್ಗೆ, ಗಣಪತಿ ಮತ್ತು ಸುಬ್ರಹ್ಮಣ್ಯ – ಪಂಚಾಯತನ ಎಂಬ ಪರಿಕಲ್ಪನೆಯಲ್ಲಿ ಒಳಪಡುವ ಪಂಚ ದೇವರುಗಳ ವಿವಿಧ ರೂಪಗಳು. (ಲಕ್ಷ್ಮೀನರಸಿಂಹ, ಗೋಪಾಲಕೃಷ್ಣ, ಮಹಾಲಿಂಗೇಶ್ವರ, ಬ್ರಹ್ಮಲಿಂಗೇಶ್ವರ, ಸದಾಶಿವ, ಮಂಜುನಾಥ, ಮಹಿಷಾಸುರ ಮರ್ದಿನಿ, ಭಗವತಿ, ಮಹಾಕಾಳಿ – ಹೀಗೆ). ದೇವಸ್ಥಾನಗಳಲ್ಲಿ ಇರುವಂತೆ ಬ್ರಾಹ್ಮಣರ ಮನೆತನಗಳಿಗೂ ಈ ದೇವರುಗಳ ಆರಾಧನೆ ಇದೆ. ಉದಾಹರಣೆಗೆ ಈ ಕಾದಂಬರಿಯ ದೇವರಮನೆ ದಾಸ ಭಟ್ಟರ ಮನೆದೇವರು ವೆಂಕಟರಮಣ. ಮೂಲ ಮನೆಗಳಿಂದ ಹೊಸ ತಲೆಮಾರಿನವರು ದೂರ ದೂರ ಹೋದಾಗ ಈ ಮೂಲ ಮನೆಯ ದೇವರನ್ನು ಕೊಂಡುಹೋಗಲು ಇಷ್ಟಪಡುವುದಿಲ್ಲ. ಅವುಗಳ ಆರಾಧನೆಯಲ್ಲಿ ಮಡಿ, ನಿತ್ಯ ಅನುಷ್ಠಾನ, ನೈವೇದ್ಯ ಸಮರ್ಪಣೆ ಇತ್ಯಾದಿ ನಗರಗಳಲ್ಲಿ ಕಷ್ಟ ಎಂಬ ಕಾರಣಕ್ಕೆ.

ದೇವರುಗಳ ಹಾಗೆಯೇ ಸಾವಿರಾರು ದೈವಗಳಿದ್ದಾರೆ. ಇವುಗಳಲ್ಲಿ ಪಂಜುರ್ಲಿ, ರಕ್ತೇಶ್ವರಿ, ಜುಮಾದಿ ಮುಂತಾದ ಕೆಲವು ಪ್ರಧಾನ ದೈವಗಳಿದ್ದು, ಅವರನ್ನು ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಎಂಬ ಬೇಧವಿಲ್ಲದೆ ತಮ್ಮ ಮೂಲ ಮನೆಗಳಲ್ಲಿ ನಂಬಿ ಆರಾಧಿಸಿಕೊಂಡು ಬರುತ್ತಾರೆ.

ದೇವರುಗಳಲ್ಲಿ ಐದು ದೇವರುಗಳನ್ನು ನಂಬಿ, ಯಾವುದಾದರೊಂದನ್ನು ಪ್ರಧಾನವಾಗಿ ಇಟ್ಟುಕೊಳ್ಳಬಹುದಾದ ಪಂಚಾಯತನದ ಹಾಗೆ ತುಳುನಾಡಿನಲ್ಲಿ ಪಂಚ ದೈವಗಳ ಕಲ್ಪನೆಯೂ ಇದೆ. ಬೆರ್ಮೆರ್, ಪಂಜುರ್ಲಿ, ನಂದಿಗೋಣ, ರಕ್ತೇಶ್ವರಿ, ಜುಮಾದಿ, ಕ್ಷೇತ್ರಪಾಲ ಇತ್ಯಾದಿ ಕೆಲವು ಪ್ರಧಾನ ದೈವಗಳಲ್ಲಿ ಸಾಮಾನ್ಯವಾಗಿ ಐದನ್ನು ಸಾಮೂಹಿಕ ಆರಾಧನಾ ಕ್ಷೇತ್ರಗಳಲ್ಲಿ ಸ್ಥಾಪಿಸಿ ಆರಾಧಿಸುತ್ತಾರೆ. (ದೇವರು ಮತ್ತು ದೈವಗಳ ಜತೆಗೆ ಮೂರನೆಯದಾಗಿ ತುಳುವರಿಗೆ 'ನಾಗದೇವರ' ಆರಾಧನೆಯೂ ಇದೆ. ನಾಗದೇವರನ್ನು ತುಳುನಾಡು ಮೂಲದ ಪ್ರತಿ ಹಿಂದೂ ಕುಟುಂಬವೂ ನಂಬುತ್ತದೆ. ನಂಬಿದವರು ಅಥವಾ ಅವರ ತಲೆಮಾರಿನವರು ನಂಬುವುದನ್ನು ನಿಲ್ಲಿಸಿದಾಗ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ).

ದೈವಗಳಿಗೆ ಆರಾಧನಾಕ್ರಮಗಳು ಬ್ರಾಹ್ಮಣರಿಗೂ ಬ್ರಾಹ್ಮಣೇತರರಿಗೂ ಒಂದೇ ರೀತಿ. ಕೋಲ ಎನ್ನುವ ನರ್ತನಸೇವೆಯನ್ನು ಕೊಡುವುದು ಅತ್ಯುನ್ನತ ಮಟ್ಟದ ಸೇವೆ. ಊರಿನ ಅಥವಾ ದೇವಸ್ಥಾನದ ದೈವಗಳಿಗೆ ವಾರ್ಷಿಕ ನರ್ತನ ಸೇವೆ ಕಡ್ಡಾಯ. ಇದನ್ನು ಕೋಲ ಎನ್ನದೆ ನೇಮ ಎಂದು ಕರೆಯುವುದೂ ಇದೆ, ಕೋಲ ಎಂದರೂ ತಪ್ಪಿಲ್ಲ. ಕೋಲಗಳನ್ನು ಮನೆಗಳಲ್ಲಿಯೂ ಮಾಡಿಸುತ್ತಾರೆ. ಇಂತಹ ಸೇವೆಯನ್ನು ಕೆಲವರು ತಮ್ಮ ಜೀವಮಾನದಲ್ಲಿ ಒಮ್ಮೆಯೂ ನೀಡಬೇಕಾಗಿಲ್ಲ. ನೀಡುವವರು ನೀಡಬಹುದು. ಹರಕೆಯ ರೂಪದಲ್ಲಿ ಕೊಡಬಹುದು. ಕೋಲವನ್ನು ಪಾರಂಪರಿಕವಾಗಿ ನಡೆಸುವ ಜಾತಿಯವರು ಇದ್ದಾರೆ. ಈಗ ಅವರನ್ನು ಪರಿಶಿಷ್ಟ ಜಾತಿಗಳಲ್ಲಿ ಗುರುತಿಸಲಾಗಿದೆ.

ಮನೆಯ ದೈವಗಳಿಗೆ ಕಡ್ಡಾಯವಾಗಿ ಸಲ್ಲಿಸಬೇಕಾದ ಪೂಜೆ ಸರಳವಾಗಿದೆ. ಮನೆಯ ಗಂಡು ಸಂತಾನದವರೇ ಭಕ್ತಿಯಿಂದ ದೀಪ, ಹೂ–ನೀರು ಇಟ್ಟು ನಮಿಸುವುದೋ, ತೆಂಗಿನಕಾಯಿ ಒಡೆಯುವುದೋ ಅವರವರ ಮನೆಯ ಕ್ರಮದಂತೆ ಮಾಡಿಕೊಂಡು ಬರುತ್ತಾರೆ. ಕೆಲವು ಕಡೆಗಳಲ್ಲಿ ತಿಂಗಳಿಗೊಮ್ಮೆ – ಸಂಕ್ರಾಂತಿಯಂದು ಮಾತ್ರ ಪೂಜೆ ಸಲ್ಲಿಸುವುದೂ ಇದೆ.

ದಕ್ಷಿಣ ಕನ್ನಡದಲ್ಲಿ ಬ್ರಾಹ್ಮಣರಿಗೂ ಬ್ರಾಹ್ಮಣೇತರರಿಗೂ ಮನೆ ದೈವಗಳಿವೆ. ದೇವರನ್ನು ನಂಬುವುದರಿಂದ ಉಂಟಾಗುವ ಧನಾತ್ಮಕ ಪ್ರತಿಫಲಗಳು ಮತ್ತು ಋಣಾತ್ಮಕ ಸಮಸ್ಯೆಗಳು ದೈವಾರಾಧನೆಯಿಂದಲೂ ಇವೆ.

2022ರಲ್ಲಿ 'ಕಾಂತಾರ' ಎಂಬ ಕನ್ನಡ ಚಲನಚಿತ್ರವು ದೇಶ ವಿದೇಶಗಳಲ್ಲಿ ಜಯಭೇರಿ ಬಾರಿಸಿತು. ಅದರಲ್ಲಿ ತುಳುವರು ನಂಬುವ ಪಂಜುರ್ಲಿ ಮತ್ತು ಗುಳಿಗ ಎನ್ನುವ ಎರಡು ದೈವಗಳ ಕಾರಣಿಕ, ಅವು ಮನುಷ್ಯನಿಗೆ ನೀಡುವ ಭರವಸೆ ಮತ್ತು ನೆಮ್ಮದಿಗಳನ್ನು ಸುಂದರವಾಗಿ ಕಲಾರೂಪದಲ್ಲಿ ಪ್ರಸ್ತುತಪಡಿಸಲಾಗಿದೆ. ಇದರ ನಂತರ ತುಳುವೇತರರಿಗೆ ದೈವಾರಾಧನೆಯನ್ನು ತಾವೂ ಮಾಡಬೇಕೆಂಬ ಕುತೂಹಲ ಉಂಟಾಗಿದೆಯಂತೆ. ಈ ಬಗ್ಗೆ ಈ ಲೇಖಕನಿಗೆ ಯಾವ ಉದಾಹರಣೆಯೂ ಕಂಡಿಲ್ಲ. ಆದರೆ ದೈವಗಳನ್ನು ಹೊಸದಾಗಿ ನಂಬುವ ಮುನ್ನ ಯೋಚನೆ ಮಾಡಿ ಎಂದು ತುಳುನಾಡಿನ ಚಿಂತಕರೊಬ್ಬರು ಬರೆದಿರುವ ಬರಹ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅದು ಹೀಗಿದೆ:

*****

ಹೊರ ಜಿಲ್ಲೆಗಳಲ್ಲಿ ಹೊಸದಾಗಿ ದೈವ ನಂಬುವ ತುಳುವೇತರರಿಗೆ ಒಂದು ಕಿವಿಮಾತು

ಇತ್ತೀಚಿನ ವರ್ಷಗಳಲ್ಲಿ ತುಳುವರ ಕೊರಗಜ್ಜ(ಕೊರಗ ತನಿಯ) ಬಹಳ ಪ್ರಚಾರ ಪಡೆದ ಪರಿಣಾಮ ಹಾಗೂ ಕಾಂತಾರ ಸಿನೆಮಾದ ಭರ್ಜರಿ ಪ್ರದರ್ಶನ ತುಳುನಾಡಿನ ದೈವಗಳನ್ನು ಹೊರನಾಡಿಗೆ ಕೊಂಡೊಯ್ಯುತ್ತಿದೆ. ಇದು ವ್ಯಾಪಾರಕ್ಕಾಗಿಯೊ ಅಥವಾ ಭಕ್ತಿಯೋ ಎಂದು ಅಳತೆ ಮಾಡುವಷ್ಟು ದೊಡ್ಡವನೂ, ತಿಳಿದವನೂ ನಾನಲ್ಲ. ಯಾಕೆಂದರೆ ಯಾರ ಮನಸ್ಸಿನ ಭಾವನೆಯನ್ನು ಅರಿಯುವಷ್ಟು ಸಾಮರ್ಥ್ಯ ನನ್ನಲ್ಲಿ ಇಲ್ಲ. ಆದರೆ ಇತ್ತೀಚಗೆ ದಿನಕ್ಕೊಂದರಂತೆ ಹೊರಜಿಲ್ಲೆಗಳ ಕನ್ನಡ ನೆಲೆದಲ್ಲಿ ತಲೆ ಎತ್ತುತ್ತಿರುವ ಕೊರಗತನಿಯ, ಗುಳಿಗ ಇತ್ಯಾದಿ ಗುಡಿಗಳನ್ನು ನೋಡುವಾಗ ಇದು ಮುಂದಿನ ಗಂಡಾಂತರಕ್ಕೆ ಇಡೆಮಾಡದಿರಲಿ ಎಂಬ ಕಾರಣಕ್ಕೆ ಈ ಕಿವಿಮಾತು. ಇದನ್ನು ಎಚ್ಚರಿಕೆ ಎಂದೂ ತಿಳಿದರೂ ತೊಂದರೆ ಇಲ್ಲ. ತುಳುನಾಡಿನ ದೈವ ಚರಿತ್ರೆಯನ್ನು ತಿಳಿದರೆ ಯಾವ ದೈವವೂ ಒಮ್ಮೆ ನಂಬಿ ನಂತರ ಕೈಬಿಟ್ಟರೆ ದೈವ ಅವರ ಕೈಬಿಟ್ಟ ಉದಾಹರಣೆ ಇಲ್ಲ. ಅದು ಇಡೀ ವಂಶ ಪಾರಂಪರ್ಯವಾಗಿ ಅವರನ್ನು ಬೆಂಬಿಡದೆ ಹಿಂಬಾಲಿಸುತ್ತದೆ. ಅದಕ್ಕೇ ಇತ್ತೀಚಿನ ಯುವಜನಾಂಗ ತುಳುನಾಡಿನಲ್ಲಿ ಹೊಸದಾಗಿ ದೈವ ನಂಬುವುದಕ್ಕೆ ಆಸ್ಪದ ಕೊಡುವುದಿಲ್ಲ. ಪ್ರತಿಯೊಂದು ಕುಟುಂಬಕ್ಕೂ ಕುಟುಂಬ ದೈವ ಇದ್ದು ಅದರ ಆರಾಧನೆಗೆ ಮುಖ್ಯವಾಗಿ ನಡೆದುಕೊಂಡು ಬರುತ್ತಾರೆ. ಅನಿವಾರ್ಯವಾದರೆ ಮಾತ್ರ ಮನೆಯಲ್ಲಿ ದೈವ ನಂಬುತ್ತಾರೆ. ಇಲ್ಲಿ ದೈವ ನಂಬುವುದೆಂದರೆ ಇಂದು ದೇವರ ಒಂದು ಫೋಟೊ ಆಥವಾ ಮೂರ್ತಿ ಇಟ್ಟು ಪೂಜೆ ಮಾಡಿ ಮನೆ ಬದಲಿಸುವಾಗ ಅದನ್ನು ನೀರಿಗೆ ಬಿಟ್ಟಂತಲ್ಲ. ದೇವರು ಕ್ಷಮಿಸಿದರೂ ದೈವದ ವಿಚಾರದಲ್ಲಿ ಇದು ಸುಲಭದ ಮಾತಲ್ಲ. ಒಮ್ಮೆ ದೈವವನ್ನು ನಂಬಿದರೆ ನಂಬಿದವನ ವಂಶಕ್ಕೆ ಅದು ಸ್ಥಿರ. ಅವನ ಇಡೀ ತಲೆಮಾರು ಅದನ್ನು ತಪ್ಪದೇ ಆರಾಧಿಸಿಕೊಂಡು ಬರಬೇಕು.

ತುಳುನಾಡಿನಲ್ಲಿ ಇಂದಿಗೂ ಹಿರಿಯರು ನಂಬಿದ ದೈವವನ್ನು ಕಾಲಾಂತರದಲ್ಲಿ ಅವರ ಪೀಳಿಗೆ ಮರೆತು ಈಗಿನ ಪೀಳಿಗೆ ಸಂಕಷ್ಟ ಪಡುತ್ತಿರುವ ಅದೆಷ್ಟೋ ಉದಾಹರಣೆ ಇದೆ. ಅದನ್ನು ಸರಿಪಡಿಸಿ ಪುನಃ ಯಥಾಸ್ಥಿತಿ ತರಲು ಈಗಿನ ಕಾಲಘಟ್ಟದ ಹಣಕಾಸಿನ

ಸಮಸ್ಯೆ. ಅಷ್ಟಮಂಗಲ, ದರ್ಶನ, ನೇಮ, ಕೋಲ, ಅಗೆಲು ಈಗ ಎಲ್ಲವೂ ದುಬಾರಿ. ದೈವ ಇರುವ ಮನೆಗೆ ಹೆಣ್ಣುಕೊಡಲು ಈಗ ಹಿಂಜರಿಯುವ ಕಾಲ. ಕಾರಣ ದೈವಗಳು ಕುಟುಂಬ ವ್ಯವಸ್ಥೆಯನ್ನು, ಗ್ರಾಮ ವ್ಯವಸ್ಥೆಯನ್ನು ಕಾಯುವ ಶಕ್ತಿಗಳು. ದೈವ ಇದ್ದ ಮನೆಯಲ್ಲಿ ಕಲಹವಾದರೆ, ಅಲ್ಲಿ ದೈವದ ಹೆಸರೆತ್ತಿದರೆ ಮತ್ತೆ ಅದು ವಂಶಕ್ಕೆ ತಟ್ಟುವ ವಾಕ್ ದೋಷ. ದೈವಾರಾಧನೆ ತುಳುವರ ಜೀವಾಳ. ಇಲ್ಲಿ ಮನೆ ದೇವರು ಕುಟುಂಬ ದೇವರೆಂಬ ಕಲ್ಪನೆ ಇಲ್ಲ. ಕುಟುಂಬ ದೈವವೇ ಎಲ್ಲಾ. ಆದ್ದರಿಂದ ದೈವಾರಾಧನೆಯ ಎಲ್ಲಾ ಶಿಸ್ತು ಮತ್ತು ಅಯಾಮಗಳು ಇಲ್ಲಿನವರಿಗೆ ಹೊಂದಿಕೊಂಡಿದೆ. ಎಷ್ಟೋ ಪಾಳುಬಿದ್ದ ದೈವದ ಮನೆ, ಕುಟುಂಬದ ಮನೆ, ಗ್ರಾಮ ದೈವಗಳ ದೈವಸ್ಥಾನ ಈ ಜೀರ್ಣೋದ್ಧಾರಗೊಳ್ಳುತ್ತಿದೆ. ಅದಕ್ಕೆ ಸಂಬಂಧಿಸಿದ ವಂಶಸ್ಥರು ಎಲ್ಲಿದ್ದರೂ ಇಲ್ಲಿ ಬಂದು ಸೇವೆ ಮಾಡಬೇಕಾಗಿದೆ. ಇದು ತುಳುವರಿಗೆ ಸಾಮಾನ್ಯ. ಆದರೆ ಹೊರಜಿಲ್ಲೆಯ ಜನತೆಗೆ ಇದು ಸಾಧ್ಯವೇ? ಉತ್ತರ ನೀವೇ ನೀಡಬೇಕು. ಇಂದು ನೀವು ನಂಬುತ್ತಿರುವ ದೈವಗಳನ್ನು ನಿಮ್ಮ ಪೀಳಿಗೆ ಮುಂದುವರಿಕೊಂಡು ಹೋಗುವ ಬಗ್ಗೆ ನಿಮಗೆ ದೃಢ ವಿಶ್ವಾಸವಿದೇಯೇ? ಇಂದು ನೀವು ನಂಬುವ ದೈವ ಮುಂದೆ ನಿಮ್ಮ ಕಾಲಾನಂತರದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾದರೆ ಅದರ ಕೋಪಕ್ಕೆ ತುತ್ತಾಗುವವರು ಯಾರು? ನಿಮ್ಮ ವಂಶವೇ ತಾನೆ? ದೈವ ನಂಬುವ ತುಳುವರು ನೂರು ಬಾರಿ ಯೋಚಿಸುತ್ತಾರೆ. ಯಾಕೆಂದರೆ ಅದು ತಮಾಷೆಯ ಮಾತಲ್ಲ. ಅಲ್ಲಿ ಅನೇಕ ಅನುಷ್ಠಾನಗಳಿವೆ. ಇದಕ್ಕೆಲ್ಲ ನೀವು ಬದ್ಧರಾಗಿದ್ದರೆ ನೀವು ದೈವ ನಂಬುವುದರಲ್ಲಿ ಯಾವುದೇ ಆಕ್ಷೇಪ ಇಲ್ಲ.

ಕಡೆಯದಾಗಿ ಒಂದು ಮಾತು. ತುಳುನಾಡಿನಿಂದ ನಿಮ್ಮಲ್ಲಿಗೆ ಬರುವ ದೈವ ನರ್ತಕರಾಗಲಿ, ಚಾಕರಿಯವರಾಗಲಿ ಅಥವಾ ಇತರರು ಈ ಎಲ್ಲಾ ವಿಚಾರ ನಿಮಗೆ ಹೇಳುತ್ತಾರೋ ಇಲ್ಲವೋ ಗೊತ್ತಿಲ್ಲ. ಅವರು ಅವರ ಉದ್ಯೋಗ ಮತ್ತು ದೈವ ಸೇವೆಗೆ ಬರುತ್ತಾರೆ. ಉಳಿದದ್ದು ನಿಮ್ಮ ವಿವೇಚನೆಗೆ ಬಿಟ್ಟದ್ದು. ನಿಮಗೆ ದೈವದ ನೇಮ ಮತ್ತು ಸೇವೆ ಮಾಡಬೇಕೆಂದಿದ್ದರೆ ತುಳುನಾಡಿಗೆ ಬಂದು ಇಲ್ಲಿ ಮಾಡಬಹುದು. ನಂಬಲೇ ಬೇಕೆಂದಿದ್ದರೆ ನಂಬಿದವರು ಏನಾಗಿದ್ದಾರೆ ಮತ್ತು ನಂಬಿ ಅರ್ಧಕ್ಕೆ ಬಿಟ್ಟವರು ಏನಾಗಿದ್ದಾರೆ ಎಂದು ಇಲ್ಲಿನ ತಿಳಿದವರಲ್ಲಿ ಕೇಳಿ ಮುಂದುವರಿದರೆ ಒಳ್ಳೆಯದು. ಹೊರ ಜಿಲ್ಲೆಗಳಲ್ಲಿ ದೈವ ನಂಬಿದಕ್ಕೆ ಆಕ್ಷೇಪ ಎತ್ತಿದವರ ಮೇಲೆ ಕೆಲವರಿಗೆ ಅಸಮಾಧಾನ ಕಂಡುಬರುತ್ತಿದೆ. ಕಾರಣ ಮುಂಬೈನಲ್ಲಿ ದೈವಾರಾಧನೆ ನಡೆಯುತ್ತಿದೆಯಲ್ಲವೆ ಎಂದು. ಆದರೆ ತಿಳಿಯಬೇಕಾದ ವಿಚಾರವೆಂದರೆ ಅಲ್ಲಿ ದೈವಾರಾಧನೆ ಮಾಡುತ್ತಿರುವರು ತುಳುವರು. ಇಲ್ಲಿಂದ ದೈವವನ್ನು ತೆಗೆದುಕೊಂಡು ಹೋಗಿ ಅಲ್ಲಿ ನಂಬಿದವರೆ ಜಾಸ್ತಿ. ಮುಂಬೈನ ಮೂಲ ಜನತೆ ಅಲ್ಲಿ ಹೊಸದಾಗಿ ನಂಬಿದ್ದಲ್ಲ.

ತುಳುವರ ಶಿಸ್ತುಬದ್ಧ ಮತ್ತು ವೈವಿಧ್ಯಮಯ ಆಚರಣೆ ಇಂದು ಇಡೀ ದೇಶದ ಗಮನಸೆಳೆಯುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಚಾರ. ಆದರೆ ಇದನ್ನೇ ಅನುಕರಿಸಿ ಸಮಸ್ಯೆಯನ್ನು ಮೈಮೇಲೆ ಎಳೆದುಕೊಳ್ಳಬೇಡಿ.

(ಸಂಕೇತ್ ಪೂಜಾರಿ: ವಾಟ್ಸಾಪ್ ಬರಹ. ನವಂಬರ್ 2022)

*****

ಮೊಗಸಾಲೆಯವರ 'ಇದ್ದೂ ಇಲ್ಲದ್ದು' ಕಾದಂಬರಿಯ ಕೇಂದ್ರ ಸಮಸ್ಯೆ ಅಷ್ಟು ಗಂಭೀರವಾದ ಸಮಸ್ಯೆಯೆ ಎನ್ನುವುದಕ್ಕೆ ಉತ್ತರವಾಗಿ ಮೇಲಿನ ವಿಚಾರಗಳನ್ನು

ವಿವರವಾಗಿ ತಿಳಿಸಬೇಕಾಯಿತು.

ದೇವರ ಮನೆ ರಮಾನಂದ ತನ್ನದೇ ಊರಿನ ಕ್ರೈಸ್ತ ಯುವತಿ ಮೇರಿಯನ್ನು ಮದುವೆಯಾಗಿ ಬೆಂಗಳೂರಿನಲ್ಲಿ ಕೈತುಂಬ ಸಂಬಳ ಬರುವ ದೊಡ್ಡ ಉದ್ಯೋಗದಲ್ಲಿರುತ್ತಾನೆ. ಈ ಅಂತರ್ ಮತೀಯ ವಿವಾಹಕ್ಕಾಗಿ ರಮಾನಂದನ ತಂದೆ ದಾಸ ಭಟ್ಟರು ಮಗನನ್ನು ತ್ಯಜಿಸುತ್ತಾರೆ. ಅನಿವಾರ್ಯವಾಗಿ ರಮಾನಂದನೂ 'ದೇವರಮನೆ'ಯನ್ನು (ದೇವರ ಮನೆ ಎನ್ನುವ ಹೆಸರಿನಲ್ಲಿರುವ ಸಾಂಕೇತಿಕತೆಯನ್ನು ಗಮನಿಸಿ) ತ್ಯಜಿಸಬೇಕಲ್ಲವೆ! ಹೀಗೆ ತ್ಯಜಿಸುವುದು ಎನ್ನುವುದಕ್ಕೂ ಹಲವು ಆಯಾಮಗಳಿವೆ – ಬ್ರಾಹ್ಮಣ್ಯವನ್ನು ತ್ಯಜಿಸುವುದು, ದೇವರನ್ನು ತ್ಯಜಿಸುವುದು ಇತ್ಯಾದಿ! ಕೊನೆಗೆ ದೇವರಮನೆ ರಮಾನಂದ ದೇವರನ್ನು ತ್ಯಜಿಸುವುದರೊಂದಿಗೆ ಕಾದಂಬರಿ ಮುಗಿಯುತ್ತದೆ.

ಕಾದಂಬರಿಯ ಪ್ರಾರಂಭದಲ್ಲಿ ದೇವರ ಪೂಜೆಯ ಸಮಸ್ಯೆಯನ್ನು ಪರಿಹರಿಸಲು ರಮಾನಂದ ಊರಿಗೆ ಬರುತ್ತಾನೆ. ತನ್ನ ಪತ್ನಿ ಮೇರಿಗೆ ಅವನು ಭಾರತಿ ಎಂಬ ಹೆಸರಿಟ್ಟಿರುತ್ತಾನೆ. ಭಾರತಿ ಅಪ್ಪಟ ಭಾರತೀಯ ನಾರಿಯಂತೆ ಗಂಡನ ಸಮಸ್ಯೆಗಳನ್ನು ಪರಿಹರಿಸಲು ಸದಸದ್ವಿವೇಕದ ನುಡಿಗಳನ್ನು ಹೇಳುತ್ತಿರುತ್ತಾಳೆ. ಸ್ವತಃ ರಮಾನಂದನಿಗೆ ದೇವರ ಪೂಜೆಯಲ್ಲಿ ನಂಬಿಕೆಯಿಲ್ಲ. ಒಂದು ವೇಳೆ ಅವನಿಗೆ ಆಸಕ್ತಿಯಿದ್ದರೆ ಭಾರತಿ ಅದನ್ನು ವಿರೋಧಿಸುತ್ತಿರಲಿಲ್ಲ.

ಆದರೆ ರಮಾನಂದ ಹೆಣ್ಣಿನ ವ್ಯಾಮೋಹಕ್ಕೆ ಒಳಗಾಗಿ ಊರನ್ನು ಮತ್ತು ದೇವರ ಮೇಲಿನ ನಂಬಿಕೆಯನ್ನು ತೊರೆಯಲು ನಿರ್ಧರಿಸಿದವನಲ್ಲ, ಅವನ ವೈಚಾರಿಕ ನಿಲುವು ಅದು. ಅವನ ವ್ಯಕ್ತಿತ್ವದ ಈ ಅಂಶವನ್ನು ದೃಢವಾಗಿ ಸಾಧಿಸಲು ಬೇಕಾದ ಭೂಮಿಕೆಯನ್ನು ಲೇಖಕರು ಸಿದ್ಧಮಾಡಿಕೊಂಡೇ ಇದ್ದಾರೆ. ರಮಾನಂದನ ಹೆಂಡತಿ ಭಾರತಿ ಕ್ರೈಸ್ತ ಮತಕ್ಕೆ ಸೇರಿದವಳಾದರೂ ಅವಳಿಗೆ ರಮಾನಂದ ಪೂಜೆ ಮಾಡುವುದಕ್ಕೆ ಮನಮಾಡಿದರೆ ಆಕ್ಷೇಪವಿರುತ್ತಿರಲಿಲ್ಲ. ಆದರೆ ಜಿಜ್ಞಾಸುವಾದ ರಮಾನಂದ ಈ ಬಗೆಯ ಜೀವನಕ್ರಮದಿಂದ ದೂರವಾದವನು.

ಕಾದಂಬರಿಯಲ್ಲಿ ಚರ್ಚಿತವಾಗದಿದ್ದರೂ ಸೂಚಿತವಾಗಿರುವ ಒಂದು ಚಿಂತನೆ ಎಂದರೆ, ಈ ರೀತಿಯ ಒಬ್ಬ ಆಧುನಿಕ ಉತ್ತರಾಧಿಕಾರಿ ದೇವರನ್ನು ಮಾತ್ರ ಎತ್ತಿ ಕೊಂಡೊಯ್ದು ಪೂಜಿಸುವುದು ಅಸಂಗತ ಎನ್ನುವುದು. ಯಾಕೆಂದರೆ ಇಲ್ಲಿರುವುದು ದೇವರ ಪೂಜೆಯ ಜತೆಗೆ ಒಂದು ಕೃಷಿ ಪ್ರಧಾನ ಸಮಾಜ, ಸಹಕಾರ ತತ್ವದ ಮೇಲೆ ಬದುಕುವ ಹಲವು ಜಾತಿಯ ಜನಗಳು ಎಲ್ಲ ಇರುವ ಒಂದು ಸಾವಯವ ಸಮಾಜ. ದೇವರ ಪೂಜೆಗೆಂದು ಹಿಂದೆ ಆಸ್ತಿಗಳನ್ನೇ ಕುಟುಂಬಗಳಿಗೆ ಬರೆದುಕೊಟ್ಟಿದ್ದುಂಟು. ಆಸ್ತಿಯಲ್ಲಿ ಬೇಸಾಯ ಮಾಡಿ ಅದರಲ್ಲಿ ದೇವರಪೂಜೆ ಮಾಡಿಕೊಂಡು ಬದುಕಬೇಕೆನ್ನುವುದು ಹಿಂದಿನ ಕಾಲದ ಆದರ್ಶ. ಇಂತಹ ಪರಿಸರ ಕಳೆದುಹೋಯಿತೆಂದು, ಅಲ್ಲಿಂದ ಒಂದು ವೆಂಕಟರಮಣ ದೇವರ ಮೂರ್ತಿಯನ್ನು ಟಕ್ಕಂತ ಎತ್ತಿಕೊಂಡುಹೋಗಿ ಬೆಂಗಳೂರಿನಲ್ಲಿ ನೈವೇದ್ಯ ಮಾಡಿ ಪೂಜೆ ಮಾಡುವುದು ಅರ್ಥಹೀನ ಅನಿಸಬಹುದು. ಅದೂ ಅಲ್ಲದೆ ರಮಾನಂದನಿಗೆ ಅಂತಹ ನಾಟಕ ಮಾಡುವಷ್ಟೂ ದೇವರಲ್ಲಿ ನಂಬಿಕೆಯಾಗಲಿ ಶ್ರದ್ಧೆಯಾಗಲಿ ಇಲ್ಲ. ಹಾಗಾಗಿ ಅವನು ದೇವರನ್ನು ಜಲಸ್ಥಂಭನಗೊಳಿಸುವ (ಜಲಾಧಿವಾಸ) ನಿರ್ಧಾರಕ್ಕೆ ಬರುತ್ತಾನೆ.

ಈ ಕಾದಂಬರಿಯ ಕೇಂದ್ರದಲ್ಲಿರುವ ಕುಟುಂಬದಲ್ಲಿ ಮೂರು ತಲೆಮಾರುಗಳಿವೆ. ದೊಡ್ಡ ರಮಾನಂದ ಭಟ್ಟರು ಪೌರೋಹಿತ್ಯ ಮತ್ತು ಕೃಷಿಯಲ್ಲಿ ತೊಡಗಿದ್ದ ಸಂಪ್ರದಾಯವಾದಿ. ಆದರೆ ಅಬ್ರಾಹ್ಮಣ ವಿವಾಹಿತೆ ಮಹಿಳೆಯನ್ನು ತನ್ನ ಉಪಪತ್ನಿಯಾಗಿರಿಸಿಕೊಂಡು ಮೆರೆಸುತ್ತ, ಪತ್ನಿ ಸೀತಮ್ಮನನ್ನು ಹೊಡೆದು ಬಡಿಯುತ್ತ, ಕಣ್ಣೀರಲ್ಲಿ ಕೈತೊಳೆಸುತ್ತ ಇದ್ದವರು. ಲಂಪಟತನದಿಂದಾಗಿ ಆಸ್ತಿಯನ್ನೆಲ್ಲ ಪರಭಾರೆ ಮಾಡಿದವರು.

ಅವರ ಅಕ್ಕ ವಿಧವೆ ರಾಧಕ್ಕ ಒಂದು ಸ್ಮರಣೀಯ ಪಾತ್ರ. ಅತ್ಯಂತ ಸರಳವಾಗಿ ಉಡುಪಿ ಕೃಷ್ಣನ ಸೇವೆ ಮಾಡುತ್ತ, ತನ್ನ ದೇವರ ಸೇವೆಯ ನಡುವೆ ಸಂಪಾದಿಸಿದ ಹಣದಿಂದ ತಮ್ಮ ರಮಾನಂದ ವ್ಯಭಿಚಾರದಿಂದ ಕಳೆದುಕೊಂಡ ಆಸ್ತಿಯನ್ನು ಮತ್ತೆ ಖರೀದಿಸಿ ಅವನಿಗೆ ಕೊಟ್ಟು, ಸಭ್ಯನಾಗಿ ಬಾಳುವಂತೆ ನೀತಿಹೇಳಿದವಳು.

ಎರಡನೆಯ ತಲೆಮಾರಿನ ಹರಿದಾಸ (ದಾಸ ಮಾಸ್ತರರು) ಊರಿನ ಶಾಲೆಯಲ್ಲಿ ಶಿಕ್ಷಕರಾಗಿ, ಸಮಾಜದಲ್ಲಿ ಗಣ್ಯರಾಗಿ, ಪರೋಪಕಾರಿಯಾಗಿ, ಸಂಘಟಕರಾಗಿ ಸಮಾಜಕ್ಕೇ ಶಿಕ್ಷಕರಾಗಿ ಇದ್ದ ಆದರ್ಶಪಾತ್ರ. ಅವರು ಅತೀವ ಧರ್ಮಶ್ರದ್ಧೆ ಉಳ್ಳವರು. ಮನೆದೇವರನ್ನು ತುಂಬಾ ಹಚ್ಚಿಕೊಂಡವರು. ಮಗ ರಮಾನಂದ ಮೇರಿಯನ್ನು ಮದುವೆಯಾದಾಗ ಅವನ ಜೀವನಧರ್ಮ ತನ್ನ ಜೀವನಕ್ರಮಕ್ಕೆ ಪರಧರ್ಮವಾಗಿರುವುದನ್ನು ತಿಳಿದು ಅವನನ್ನು ನಿರಾಕರಿಸಿದವರು.

ಅವರಿಗೆ ತನ್ನ ಮಗ ಮನೆತನದ ಆಸ್ತಿಯಲ್ಲಿ ಕೃಷಿ ಮಾಡಿಸಬೇಕೆನ್ನುವ ಕನಸಿತ್ತು. ಈ ವಿದ್ಯಮಾನಕ್ಕೆ ಕಾಂಟ್ರಾಸ್ಟ್ ಎನ್ನುವಂತೆ ದಾಸ ಭಟ್ಟರ ಸೋದರಮಾವನ ಮಗ ಗೋವಿಂದಾಚಾರ್ಯರು ಮತ್ತವರ ಮಗ ನರಸಿಂಹ ಇದ್ದಾರೆ. ದಾಸಭಟ್ಟರ ಮನೆಗೆ ಕಷ್ಟ ಬಂದಾಗ ಧಾವಿಸಿಬರುವವರು ಗೋವಿಂದಾಚಾರ್ಯರು. ಅವರ ಮಗ ನರಸಿಂಹ ಅಷ್ಟೇನೂ ಬುದ್ಧಿವಂತನಲ್ಲದಿದ್ದರೂ ಕೃಷಿಋಷಿಯಾಗಿ ಅವರ ಜಮೀನನ್ನು ನಂದನವನದಂತೆ ಸಮೃದ್ಧ ಕೃಷಿಕ್ಷೇತ್ರವನ್ನಾಗಿ ಪರಿವರ್ತಿಸಿ ಗ್ರಾಮ ಸಮಾಜಕ್ಕೆ ಮಾದರಿಯಾಗಿ ಬಾಳುತ್ತಿದ್ದಾನೆ.

ಹೀಗೆ ಇದೊಂದು ಆಯಾಮ ಕಾದಂಬರಿಗೆ ಪ್ರಾಪ್ತವಾಗಿದೆ. ಇದು ಆರ್ಥಿಕ ಆಯಾಮವಾಗಿದೆ. ಚೌಕಟ್ಟಿನಲ್ಲಿರುವುದು – ಮೇಲ್ನೋಟದಲ್ಲಿರುವುದು ಧರ್ಮದ ಆಯಾಮ ಎನ್ನುವುದನ್ನು ಈಗಾಗಲೇ ಹೇಳಿದೆ. ಧರ್ಮ ಎನ್ನುವುದಕ್ಕಿರುವ ದೊಡ್ಡ ವ್ಯಾಪ್ತಿ ಇಲ್ಲಿಲ್ಲ. ಮತಾಚರಣೆಗಳು ಎನ್ನುವ ಅರ್ಥದಲ್ಲಿ ಮಾತ್ರ ಈ ದೇವರ ಪೂಜೆ ಇತ್ಯಾದಿಗಳಿರುವುದು. ಮತಾಚರಣೆ ಮಾಡದೆ ಇದ್ದರೂ ಸಣ್ಣ ರಮಾನಂದನಂತೆ ಶುದ್ಧ ಧಾರ್ಮಿಕನಾಗಿ ಬದುಕುವುದು ಮುಖ್ಯ ಎನ್ನುವುದನ್ನು ಕಾದಂಬರಿಕಾರರು ಸೂಚಿಸುತ್ತಿದ್ದಾರೆ. ಅವನು ಕೊನೆಯಲ್ಲಿ ಕುಪ್ಪಣ್ಣಾಚಾರ್ಯರು ಅವನ ಜಮೀನಿನಿಂದ ಬಂದ ಉತ್ಪತ್ತಿಯನ್ನು ಅವನ ಖಾತೆಗೆ ಹಾಕಿ ಇಟ್ಟಿದ್ದ ಲಕ್ಷಗಟ್ಟಲೆ ಹಣವನ್ನು ಸ್ವೀಕರಿಸದೆ, ಅವರಿಗೇ ಮರಳಿಸುತ್ತಾನೆ. ತನ್ನ ಪತ್ನಿಗೆ ವ್ಯಕ್ತಿಗೌರವವನ್ನು ಕೊಡುತ್ತಾನೆ.

ಸಣ್ಣ ರಮಾನಂದ – ಭಾರತಿ ಇವರ ಅನುರೂಪ ದಾಂಪತ್ಯವನ್ನು ಒಂದು ಆದರ್ಶ ಮಾದರಿ ಎಂದು ಪರಿಗಣಿಸಬಹುದು. ಇಲ್ಲಿ ನಾವು ಕಾದಂಬರಿಯ 'ಕಾಮ'ದ ಅಂಶಕ್ಕೆ ಗಮನಹರಿಸಬಹುದು. ಮೊದಲನೆಯ ತಲೆಮಾರಿನ ದೊಡ್ಡ ರಮಾನಂದಭಟ್ಟರು ನಿಜವಾಗಿ ಸಣ್ಣ ಮನುಷ್ಯ. ಕಾಮಕ್ಕಾಗಿ ಧರ್ಮವನ್ನೂ ಅರ್ಥವನ್ನೂ ಬಲಿಕೊಟ್ಟವರು.

ಅವರು ಸುಳ್ಳ, ಸ್ತ್ರೀ ಶೋಷಕ ಮತ್ತು ದುಷ್ಟ. ಪತ್ನಿಗೆ ಹೊಡೆಯುವುದು, ಬಾಳೆಹಣ್ಣಿನ ಗೊನೆಗಾಗಿ ಆಕಸ್ಮಿಕವಾಗಿಯಾದರೂ ಕೊಲೆಗೆ ಕಾರಣವಾಗುವುದು ಅವರ ದೌಷ್ಟ್ಯಕ್ಕೆ ಉದಾಹರಣೆಗಳು. ಧರ್ಮ ಅಂದರೆ ಏನು ಎಂದು ಗೊತ್ತಿಲ್ಲದೆ ಇದ್ದದ್ದೇ ಅವರ ಕಾಮ, ಕ್ರೋಧ, ಲೋಭಗಳಿಗೆ ಕಾರಣ. ಎರಡನೆಯ ತಲೆಮಾರಿನ ದಾಸಭಟ್ಟರು ಕಾಮ ಮತ್ತು ಅರ್ಥಗಳನ್ನು ಧರ್ಮದ ವ್ಯಾಪ್ತಿಯೊಳಗೆಯೆ ಇಟ್ಟುಕೊಂಡಿದ್ದರು. ಆದರೆ ಧರ್ಮ ಎನ್ನುವುದು ಮತಾಚರಣೆ ಎನ್ನುವಷ್ಟಕ್ಕೆ ಸೀಮಿತಗೊಳಿಸಿದ್ದರಿಂದ ಅವರಿಗೆ ಆ ಸಂಬಂಧ ಕ್ರೋಧ(ಮಗನ ಮೇಲೆ) ಹುಟ್ಟಿಕೊಂಡದ್ದೊಂದು ಸಣ್ಣ ದೋಷ ಎನ್ನಬಹುದು.

ಮೂರನೆಯ ತಲೆಮಾರಿನ ಸಣ್ಣ ರಮಾನಂದ ಅರ್ಥ ಮತ್ತು ಕಾಮಗಳನ್ನು ತನ್ನ ಹಿಡಿತದೊಳಗೆ, ಧರ್ಮದ ಅಂಕೆಯೊಳಗೆಯೆ ಇಟ್ಟುಕೊಂಡಿದ್ದಾನೆ. ಅದಕ್ಕೆ ಉದಾಹರಣೆಯನ್ನು ಈಗಾಗಲೇ ಹೇಳಿದೆ.

ಕಾದಂಬರಿಕಾರರಿಗೆ ಈ ಮೂರು ತಲೆಮಾರಿನ ಮೂಲಕ ಕರಾವಳಿಯ ಸಮಾಜದಲ್ಲಿ ಆದ ಬದಲಾವಣೆಗಳನ್ನು ಹೇಳುವುದೇ ಉದ್ದೇಶವಾಗಿದೆ. ಪ್ರಾರಂಭದಲ್ಲಿ ಮಠಗಳ ಹತೋಟಿ, ಪುರುಷಪ್ರಧಾನ ಸಮಾಜದ ದೋಷಗಳು, ನಂತರ ಬಂದ ಭೂಮಸೂದೆಯ ಒಳಿತು ಕೆಡುಕುಗಳು, ಕೃಷಿ ಕಾರ್ಮಿಕರ ಕೊರತೆ, ಆದರ್ಶವಿಮುಖತೆ – ಇತ್ಯಾದಿಗಳ ಮೂಲಕ ಈ ಜಿಲ್ಲೆಯ ಒಂದು ಶತಮಾನದ ಬದುಕನ್ನೇ ಮೊಗಸಾಲೆಯವರು ಹೇಳಿದ್ದಾರೆ. ಇದು ಸಮಗ್ರ ಪ್ರಾದೇಶಿಕ ಕಥನವಲ್ಲ. ಆದರೆ ಬಹುಮುಖ್ಯವಾದ ಕೆಲವು ಪಲ್ಲಟಗಳನ್ನು ದಾಖಲಿಸಿದ ಸಾಂಸ್ಕೃತಿಕ ದಾಖಲೆಯಾಗಿದೆ.

ಈ ಕಾದಂಬರಿಯ ಪಾತ್ರಗಳ ಹೆಸರುಗಳೂ ಸಾಂಕೇತಿಕವಾಗಿವೆ. ರಮಾನಂದ ಮತ್ತು ಹರಿದಾಸ ಹೆಸರುಗಳನ್ನು ಗಮನಿಸಿ. ಅಜ್ಜ ರಮಾನಂದ ಭಟ್ಟರು ಪತ್ನಿಯನ್ನು (ಸೀತಮ್ಮ) ಕಡೆಗಣಿಸಿ ಸುಂದರಿ ಎಂಬ ಒಕ್ಕಲಿನ ಹೆಂಗಸಿನ ದಾಸರಾಗಿರುತ್ತಾರೆ. ಸೀತಮ್ಮ ಹೆಸರೇ ಹೇಳುವಂತೆ ಪತಿಪರಾಯಣೆ. ಅವರ ಅಕ್ಕ ರಾಧಕ್ಕ ವಿಧವೆ; ಉಡುಪಿಯ ಕೃಷ್ಣನ ಸೇವೆಯಲ್ಲಿಯೇ ಜೀವನದ ಸಾರ್ಥಕ್ಯವನ್ನು ಕಾಣುವವಳು. ಹರಿದಾಸ ಎನ್ನುವುದು ದೇವರ ಸೇವೆಯನ್ನೇ ಪ್ರಧಾನವಾಗಿರಿಸಿಕೊಂಡಿರುವವನು ಎನ್ನುವ ಅರ್ಥ ಕೊಡುವ ಹೆಸರು. ಮೊಮ್ಮಗ ರಮಾನಂದ ತನ್ನ ಅಪ್ಪನಂತೆ ಹರಿಯ ದಾಸನಲ್ಲ. ಅಜ್ಜ ರಮಾನಂದನಂತೆ ರಮೆಯಲ್ಲಿ ಆನಂದವನ್ನು ಕಾಣುವವನೇ. ಅವನ ಮನೋರಮೆ ಪರಸ್ತ್ರೀಯಲ್ಲ, ಅವನ ಪತ್ನಿಯೇ; ಆದರೆ ಆಕೆ ಮಾತ್ರ ಅನ್ಯಮತದ ಯುವತಿ. ಅವರು ಮದುವೆಯಾದುದು ಅಪ್ಪ ಅಮ್ಮನನ್ನು ಎದುರುಹಾಕಿಕೊಂಡು ಪ್ರೇಮವಿವಾಹದ ಮಾದರಿಯಲ್ಲಿ.

ಕಾದಂಬರಿಯ ಕೊನೆ ಹೀಗೆ: ಸೀತಾಪುರದ 'ದೇವರಮನೆ' ಮನೆಯಲ್ಲಿ ಪೂಜೆ ಮಾಡಿಕೊಂಡಿದ್ದು, ಈಗ ತನಗೆ ಹೋಗಲು ಅನುಮತಿ ಕೊಡಿ ಎಂದು ಕೇಳಿಕೊಂಡ ಪಡುಬಿದ್ರಿ ಕುಪ್ಪಣ್ಣಾಚಾರ್ಯರಿಗೆ ರಮಾನಂದನು ಪತ್ರ ಬರೆದು ದೇವರನ್ನು ಬಾವಿಗೆ ಅಥವಾ ಸಮುದ್ರಕ್ಕೆ ಹಾಕಿ ನೀವು ಹೋಗಿ ಎಂದು ಅನುಮತಿ ಕೊಡುತ್ತಾನೆ.

ಪೂಜಿಸುತ್ತಿದ್ದ ದೇವರನ್ನು ಪೂಜೆ ಮಾಡಲು ಸಾಧ್ಯ ಇಲ್ಲ ಎಂದಾದಾಗ ಮಾಡಬಹುದಾದ ಎರಡು ವಿಧಾನಗಳು ಇವೇ. ಈ ಮಾತಿಗೆ ಭಿನ್ನಾಭಿಪ್ರಾಯವೂ

ಇರಬಹುದು; ಧರ್ಮಗ್ರಂಥಗಳಲ್ಲಿ ಬೇರೆ ವಿಧಿಗಳೂ ಇರಬಹುದು. ಅಷ್ಟಕ್ಕೂ ಕಾದಂಬರಿಯಲ್ಲಿ ಇದು ಮುಖ್ಯ ಸಮಸ್ಯೆಯ ಹಾಗೆ ಕಂಡರೂ ಮುಖ್ಯ ಸಮಸ್ಯೆ ಅಲ್ಲ. ಅನಂತಮೂರ್ತಿಯವರ ಕಾದಂಬರಿಯಲ್ಲಿ ಧರ್ಮಭ್ರಷ್ಟನಾದ ನಾರಣಪ್ಪ ಸತ್ತಾಗ ಅವನ ಹೆಣವನ್ನು ಸಂಸ್ಕಾರ ಮಾಡುವುದು ಯಾರು, ಹೇಗೆ ಎನ್ನುವ ಧರ್ಮ ಜಿಜ್ಞಾಸೆಗೆ ಉತ್ತರ ಹುಡುಕಲಿಕ್ಕೆ ಬ್ರಾಹ್ಮಣರ ನಿಯೋಗ ಶೃಂಗೇರಿ ಸ್ವಾಮಿಗಳ ಬಳಿಗೆ ಹೋಗುತ್ತದೆ. ಇತ್ತ ನಾರಣಪ್ಪನ ಸೂಳೆ ಚಂದ್ರಿ ಮೀನುಮಾರುವ ಮುಸಲ್ಮಾನನನ್ನು ಕರೆದು ಶವವನ್ನು ಸುಡಿಸಿಬಿಟ್ಟಿರುತ್ತಾಳೆ. ಇದರ ಪರಿಣಾಮ ಏನು? ಏನೂ ಇಲ್ಲ! ಕಾದಂಬರಿಯ ಸಮಸ್ಯೆಯಂತೂ ಪರಿಹಾರವಾಯಿತೆಂದೇ ಲೆಕ್ಕ. ಮೊಗಸಾಲೆಯವರ ಕಾದಂಬರಿಯಲ್ಲಿಯೂ ಚೌಕಟ್ಟಾಗಿ ಕಾದಂಬರಿಯನ್ನು ಮುನ್ನಡೆಸಿದ ಸಮಸ್ಯೆ ಇಲ್ಲಿಗೆ ಪರಿಹಾರ ಕಾಣುತ್ತದೆ. ಅಷ್ಟರಲ್ಲಿ ಕಳೆದ ಶತಮಾನದ ಒಂದು ಸಮಾಜವನ್ನು ಚಿತ್ರಿಸುವ ಕಾದಂಬರಿಯ ಕಾರ್ಯವೂ ಸಂಪನ್ನವಾಗುತ್ತದೆ.

❖❖❖

ಎಷ್ಟೊಂದು ಜೀವಿಗಳು
ನೀರ ಸೀಳಿದವೋ
ಅಷ್ಟೊಂದು ದಾರಿಗಳು
ನದಿಯ ಎದೆಯೊಳಗೂ

ಸೆಕ್ಯುಲರ್ವಾದ, ಏಕರೂಪ ನಾಗರೀಕ ಸಂಹಿತೆ ಮತ್ತು ಮುಸ್ಲಿಂ ವೈಯಕ್ತಿಕ ಕಾನೂನು

ಷಣ್ಮುಖ ಎ.
ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು
ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಜ್ಞಾನಸಹ್ಯಾದ್ರಿ, ಶಂಕರಘಟ್ಟ

ಭಾರತೀಯ ಸಂವಿಧಾನದ ಪ್ರಕಾರ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರ ಹಾಗೂ ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡದವರ ಏಳಿಗೆಗಾಗಿ ವಿಶೇಷ ಅವಕಾಶಗಳನ್ನು ನೀಡುವ ಸಂದರ್ಭವನ್ನು ಹೊರತುಪಡಿಸಿ ಯಾವುದೇ ನಾಗರೀಕನನ್ನು ಆತನ ರಿಲಿಜನ್ನು ಮತ್ತು ಜಾತಿಯ ಆದಾರದಲ್ಲಿ ಪ್ರಭುತ್ವ ತಾರತಮ್ಯ ಮಾಡುವಂತಿಲ್ಲ. ಈ ವಿಶೇಷ ಅವಕಾಶಗಳ ಕುರಿತು ಸಾಕಷ್ಟು ವಾದವಿವಾದಗಳಾಗಿದ್ದರೂ ಸಹ ಅವು ರಿಲಿಜನ್ನಿನ ಆಧಾರದಲ್ಲಿ ಸಮಾನತೆಗೆ ವಿರುದ್ಧ ಎನ್ನುವ ರೂಪವೇನು ಪಡೆದಿಲ್ಲ. ಪರಿಶಿಷ್ಟಜಾತಿಯ ಅವಕಾಶಗಳನ್ನು ಪಡೆಯುವ ಸಂದರ್ಭದಲ್ಲಿ ಮಾತ್ರವೇ ವ್ಯಕ್ತಿ ಹಿಂದೂ ಅಥವ ಸಿಖ್ ಆಗಿರಬೇಕೆಂಬ ನಿಬಂಧನೆ ಇದೆ. ಇದರ ಹೊರತಾಗಿ ರಾಜ್ಯ ನಿರ್ದೇಶಕ ತತ್ವದಡಿಯಲ್ಲಿ ಏಕರೂಪ ನಾಗರೀಕ ಸಂಹಿತೆಯ ಜಾರಿಗೆ ಪ್ರಭುತ್ವವು ಬದ್ದವಾಗಿರಬೇಕಿದೆ. ಆದರೆ ಮುಸ್ಲೀಮರು ತಮ್ಮ ವೈಯುಕ್ತಿಕ ಕಾನೂನನ್ನು ಅನುಸರಿಸುವ ರಿಲಿಜನ್ನಿನ ಸ್ವಾತಂತ್ರ್ಯ ಎನ್ನುವ ಸೆಕ್ಯುಲರ್ ತತ್ವದಡಿ ಏಕರೂಪ ನಾಗರೀಕ ಸಂಹಿತೆಗೆ ಮುಸ್ಲೀಂ ಸಂಘಟನೆಗಳು ಮತ್ತು ಎಡಪಂಥೀಯ ಸೆಕ್ಯುಲರ್ ಚಿಂತಕರು ವಿರೋಧಿಸುತ್ತಲೇ ಬಂದಿದ್ದಾರೆ. ಆದರೆ ಅದೇ ಸಂದರ್ಭದಲ್ಲಿ ಕೇವಲ ಹಿಂದೂ ಸಮುದಾಯಗಳಿಗೆ ಸಂಬಂದಿಸಿದ ವೈಯುಕ್ತಿಕ ಕಾನೂನಿನ ವಿಷಯದಲ್ಲಿ ಅವರ ಆಚರಣೆಗಳನ್ನು ಮಾನ್ಯಮಾಡದೆ ಪ್ರಭುತ್ವವು ತನ್ನದೇ ವೈಯುಕ್ತಿಕ ಕಾನೂನುಗಳನ್ನು ಹೇರುತ್ತಿದೆ. ಇದು ಅದೇ ಸೆಕ್ಯುಲರ್ವಾದದ ರಿಲಿಜನ್ನಿನ ಸ್ವಾತಂತ್ರ್ಯದ ಧಕ್ಕೆ ಮತ್ತು ಹಿಂದೂಗಳ ವಿಷಯದಲ್ಲಿ ಮಾತ್ರವೇ ಕಾನೂನುಗಳನ್ನು ಮಾಡುತ್ತಾ, ಮುಸ್ಲಿಮರಿಗೆ ಅವರದ್ದೆ ವೈಯುಕ್ತಿಕ ಷರಿಯಾ ಕಾನೂನುಗಳನ್ನು ಶಾಸನಬದ್ಧವಾಗಿ ಪ್ರಭುತ್ವವು ಮಾನ್ಯ ಮಾಡುತ್ತಾ ಬರುತ್ತಿರುವುದು ಸೆಕ್ಯುಲರ್ವಾದದ ಇತರೆ ತತ್ವಗಳಾದ ರಿಲಿಜನ್ನಿನ ಸಮಾನತೆ, ರಿಲಿಜನ್ನಿನ ಸಹಿಷ್ಣತೆಯ ತತ್ವಕ್ಕೆ ವಿರುದ್ಧವಾಗಿದೆ ಎನ್ನುವ ವಾದಗಳನ್ನು ಹಿಂದೂ ಸಂಘಟನೆಗಳು ಮುಂದಿಡುತ್ತಿವೆ. ಹೀಗೆ ಸೆಕ್ಯುಲರ್ವಾದದ ಎಲ್ಲಾ ತತ್ವಗಳಡಿ ಮುಸ್ಲೀಂರ ರಿಲಿಜನ್ನಿನ ಆಚರಣೆಗಳನ್ನು ಮಾತ್ರವೇ ರಕ್ಷಿಸುತ್ತಾ, ಹಿಂದೂಗಳ ವಿಷಯದಲ್ಲಿ ಈ ಎಲ್ಲಾ ತತ್ವಗಳನ್ನು ಗಾಳಿಗೆ ತೂರುತ್ತಿರುವುದರಿಂದ ಭಾರತೀಯ ಸೆಕ್ಯುಲರ್ ಪ್ರಭುತ್ವ ಮತ್ತು ಸೆಕ್ಯುಲರ್ವಾದಿ ಚಿಂತಕರು ಸೂಡೋ ಸೆಕ್ಯುಲರ್‌ಗಳಾಗಿದ್ದಾರೆ ಎನ್ನುವ ಆರೋಪವನ್ನು ಕೂಡ ಮಾಡಲಾಗುತ್ತಿದೆ.

ರಿಲಿಜನ್ನಿನ ಅರ್ಥವಿವರಣೆ ಏನೇ ಇರಲಿ, ಹಿಂದೂಗಳು ಮತ್ತು ಮುಸ್ಲೀಂರ ಆಚರಣೆಗಳಿಗೆ ಸಂಬಂಧಿಸಿದಂತೆ ಸೆಕ್ಯುಲರ್ ಪ್ರಭುತ್ವವು ತನ್ನ ತತ್ವಗಳನ್ನು

ಸಮಾನವಾಗಿ ಅನ್ವಯಿಸುತ್ತಿಲ್ಲ ಎನ್ನುವುದಂತೂ ಮೇಲ್ನೋಟಕ್ಕೇ ಕಂಡುಬರುವ ವಾಸ್ತಾವಾಂಶ. ಹಿಂದೂ ಮಹಾಸಭಾ ಮೊದಲಿನಿಂದಲೂ ಹಿಂದೂಸುಧಾರಣೆಗಳ ಹೆಸರಿನ ಈ ಬಗೆಯ ಪಕ್ಷಪಾತದ ವಿರುದ್ಧ ಟೀಕಿಸುತ್ತಲೇ ಬಂದಿದೆ. ಅಷ್ಟೇ ಅಲ್ಲ ಜೆ.ಬಿ. ಕೃಪಲಾನಿಯಂತಹ ಸಮಾಜವಾದಿ ನಾಯಕರೂ ಸಹ ಪ್ರಭುತ್ವದ ಈ ಪಕ್ಷಪಾತಿ ನೀತಿಯನ್ನು ಕಟುವಾದ ಶಬ್ದಗಳಲ್ಲಿಯೇ ಟೀಕಿಸಿದ್ದಾರೆ "ನಿಜವಾಗಿಯೂ ನಮ್ಮದು ಪ್ರಜಾಸತ್ತಾತ್ಮಕ ಪ್ರಭುತ್ವೇ ಆಗಿದ್ದರೆ ಕೇವಲ ಒಂದು ಸಮುದಾಯಕ್ಕೆ ಮಾತ್ರವೇ ಸೀಮಿತವಾಗಿ ಕಾನೂನಗಳನ್ನು ಮಾಡಬಾರದು... ಹಾಗೆ ಮಾಡಿದರೆ ಮಹಾಸಭಾ ಮಾತ್ರವೇ ಕೋಮುವಾದಿಯಾಗುವುದಿಲ್ಲ... ಸರ್ಕಾರವೂ ಸಹ ಕೋಮುವಾದಿಯೇ ಆಗುತ್ತದೆ. ಒಂದೊಮ್ಮೆ ಸಂಸತ್ತಿನ ಸದಸ್ಯರು ತಮ್ಮ ಸುಧಾರಣಾವಾದೀ ಗೀಳಿಗೆ ಹಿಂದೂ ಸಮುದಾಯವೊಂದನ್ನು ಮಾತ್ರ ಗುರಿಯಾಗಿಸಿಕೊಂಡರೆ ಅವರು ಹಿಂದೂ ಸಮುದಾಯದ ಒಳಿತಿನ ಬಗ್ಗೆ ಮಾತ್ರವೆ ಆಸಕ್ತಿಹೊಂದಿದ್ದಾರೆ, ಮುಸ್ಲೀಂ ಮತ್ತ ಕ್ರಿಶ್ಚಿಯನ್ ಸಮುದಾಯದ ಒಳಿತಿನ ಬಗ್ಗೆ ಅಸಡ್ಡೆ ಹೊಂದಿರುವ ಕೋಮುವಾದಿಗಳು ಎನ್ನುವ ಆರೋಪವನ್ನು ಎದುರಿಸಬೇಕಾಗುತ್ತದೆ. ವಿವಾಹ ಮಸೂದೆ ಹಿಂದೂ ಸಮುದಾಯಗಳಿಗೆ ಅನುಕೂಲಕರವೋ, ಅನಾನುಕೂಲಕರವೋ ಎರಡೂ ಧೃಷ್ಟಿಯಿಂದಲೂ ಇದು ಕೋಮುವಾದಿ ಮಾಪನವೆಂದೇ ಅನಿಸಿಕೊಳ್ಳುವುದು" (ಪಾರ್ಥಚಟರ್ಜಿ, 1998:361) ಎನ್ನುತ್ತಾರೆ ಕೃಪಲಾನಿ.

ಆರ್ಥಿಕ ಸಾಮಾಜಿಕ ಅಥವಾ ಇನ್ನಾವುದೇ ರೀತಿಯ ಹಕ್ಕುಗಳ ರಕ್ಷಣೆಗಾಗಿಯೇ ಆದರೂ ಒಂದು ರಿಲಿಜನ್ನಿನಲ್ಲಿ ಮಾತ್ರವೇ ಹಸ್ತಕ್ಷೇಪ ಮಾಡಿ ಉಳಿದವುಗಳಲ್ಲಿ ಹಸ್ತಕ್ಷೇಪ ಮಾಡದೇ ಇರುವ ಮಾನದಂಡವೇನು? ಇಲ್ಲಿ ಸ್ಪಷ್ಟವಾಗಿ ಮೊದಲನೇ ತತ್ವವಾದ ರಿಲಿಜನ್ನಿನ ಸ್ವಾತಂತ್ರ್ಯವನ್ನು ಬಹುಸಂಖ್ಯಾತ ಸಮುದಾಯಕ್ಕೆ ಅದನ್ನು ನಿರಾಕರಿಸಿರುವಾಗ ಅದನ್ನು ಅಲ್ಪಸಂಖ್ಯಾತ ಸಮುದಾಯಗಳಿಗೆ ಮಾತ್ರವೇ ನೀಡಲು ಸಾಧ್ಯವಿಲ್ಲ. ವೈಯುಕ್ತಿಕ ಕಾನೂನಿನ ಸುಧಾರಣೆಯನ್ನು ಸ್ವೀಕರಿಸುವ ಮಾನಸಿಕ ಸಿದ್ಧತೆ ಚಾರಿತ್ರಿಕವಾಗಿ ಎಲ್ಲಾ ಸಮುದಾಯಗಳಲ್ಲೂ ಸಮಾನವಾಗಿಲ್ಲ ಎನ್ನುವ ವಾದವನ್ನೂ ಮುಂದಿಡಲಾಗುತ್ತದೆ. ಆದರೆ ಎಲ್ಲಾ ಸಮುದಾಯದವರಿಗೂ ಸಮಾನ ನಾಗರೀಕತ್ವವೇ ಅಪೇಕ್ಷಿತ ಎಂದಮೇಲೆ ವಸಾಹತು ಕಾಲದಿಂದ ಅನುಸರಿಸುತ್ತಿರುವ ರಿಲಿಜನ್ ಆಧಾರಿತ ವೈಯುಕ್ತಿಕ ಕಾನೂನಗಳನ್ನು ಬಿಟ್ಟುಕೊಡಬೇಕಾಗುತ್ತದೆ. ಹಾಗಾಗಿ ಮೊದಲು ರಿಲಿಜನ್ನುಗಳಾದರಿಸಿದ ವೈಯುಕ್ತಿಕ ಕಾನೂನುಗಳ ಬದಲಿಗೆ ಸಮಾನ ನಾಗರೀಕ ಸಂಹಿತೆಯನ್ನಾದರಿಸಿದ ವೈಯುಕ್ತಿಕ ಕಾನೂನನ್ನೇ ತರಬೇಕಾದ ಅಗತ್ಯವನ್ನು ಘೋಷಿಸಬೇಕಾಗುತ್ತದೆ. ನಂತರ ಸಮುದಾಯಗಳ ರಿಲಿಜನ್ನಿನ ಸ್ವಾತಂತ್ರ್ಯದ ಭಾವನೆಯನ್ನು ಗೌರವಿಸುತ್ತಾ, ಸಮುದಾಯಗಳು ಯಾವಾಗ ಒಪ್ಪಿಕೊಳ್ಳಲು ಸಿದ್ದವಾಗುವರೋ ಆಗ ಪ್ರಭುತ್ವ ಸುಧಾರಣೆಯ ಮೂಲಕ ಅದನ್ನು ಜಾರಿಗೊಳಿಸಬಹುದು. ಅದರಂತೆಯೇ ಸಂವಿಧಾನ ರಾಜ್ಯನಿರ್ದೇಶಕ ತತ್ವವು ತನ್ನ ಎಲ್ಲಾ ನಾಗರೀಕರಿಗೂ ಏಕರೂಪ ನಾಗರೀಕ ಸಂಹಿತೆಯ ನೀಡುವುದಾಗಿ ಘೋಷಿಸಿದೆ. ಆಧರೆ ಮತ್ತೊಂದೆಡೆ ಅಲ್ಪಸಂಖ್ಯಾತ ಸಮುದಾಯಗಳ ವಕ್ತಾರರು ರಿಲಿಜನ್ನಿ ಸ್ವಾತಂತ್ರ್ಯಕ್ಕೇ ಅಂಟಿಕೊಂಡು ಪ್ರಭುತ್ವಕ್ಕೆ ರಿಲಿಜನ್ನಿನಲ್ಲಿ ಹಸ್ತಕ್ಷೇಪ ಮಾಡುವ ಯಾವುದೇ ಅಧಿಕಾರವಿಲ್ಲ ಎಂದು ಪ್ರತಿಪಾದಿಸುತ್ತಿದ್ದಾರೆ. ಇದನ್ನೇ ಹಿಂದೂವಾದಿಗಳೂ

ಅಲ್ಪಸಂಖ್ಯಾತರ ಓಲೈಕೆಯ ರಾಜಕೀಯ ಎಂದು ಹೀಯಾಳಿಸುತ್ತಿದ್ದಾರೆ.

ಅಲ್ಪಸಂಖ್ಯಾತ ಸಮುದಾಯಗಳಲ್ಲೂ ಈ ಬಗೆಯ ಸುಧಾರಣೆಗಳು ನಡೆದೇ ಇಲ್ಲವೆಂದಲ್ಲ, ನಡೆದವು. 20ನೇ ಶತಮಾನದ ಆರಂಭದ ಕೆಲವು ದಶಕಗಳಲ್ಲಿ ಭಾರತದ ಹಲವು ಭಾಗಗಳಲ್ಲಿ ಮುಸ್ಲೀಮರ ಸ್ಥಳೀಯ ರೂಢೀಸಂಪ್ರದಾಯಗಳ ಆಚರಣೆಗಳನ್ನು ನಿಲ್ಲಿಸಿ ಅವುಗಳ ಬದಲಿಗೆ ಸಾರ್ವತ್ರಿಕವಾಗಿ ಮುಸ್ಲೀಂ ವೈಯುಕ್ತಿಕ ಕಾನೂನುಗಳನ್ನು ಪಾಲಿಸುವಂತೆ ಮಾಡುವ ಸಂಘಟಿತ ಪ್ರಯತ್ನಗಳು ನಡೆದವು. ಇದನ್ನೊಂದು ಚಳವಳಿಯ ರೂಪದಲ್ಲಿ ಭಾರತದಾದ್ಯಂತ ನಡೆಸಿದ್ದು ರಾಷ್ಟ್ರೀಯ ಕಾಂಗ್ರೆಸಿನ ನಿಕಟವರ್ತಿ ಸಂಘಟನೆಯೇ ಆಗಿದ್ದ ದಿಯೋಬಂದ್‌ನ ಜಮಾತ್ ಅಲ್–ಉಲೇಮ–ಇ–ಹಿಂದ್ ಸಂಘಟನೆಯ ನೇತೃತ್ವದಲ್ಲಿ. ದಕ್ಷಿಣ ಭಾರತದಲ್ಲಿನ ಮಾಪಿಳ್ಳಾ ಮುಸ್ಲೀಮರು, ಪಶ್ಚಿಮ ಭಾರತದ ಮೆಮೋನ್ ಮುಸ್ಲೀಂರು, ರಾಜಸ್ಥಾನ ಮತ್ತು ಪಂಜಾಬಿನಲ್ಲಿದ್ದ ಹಲವು ಮುಸ್ಲೀಂ ಗುಂಪುಗಳಲ್ಲಿ ಚಾಲ್ತಿಯಲ್ಲಿದ್ದ ಸ್ಥಳೀಯ ವಿಶೇಷ ವಿವಾಹ ಮತ್ತು ಉತ್ತರಾಧಿಕರತ್ವ ಆಚರಣೆಗಳನ್ನು ನ್ಯಾಯಲಾಯಗಳು ಮಾನ್ಯಮಾಡುತ್ತಿರುವುದರ ವಿರುದ್ಧ ಈ ಚಳವಳಿಯನ್ನು ಸಂಘಟಿಸಲಾಗಿತ್ತು. ನ್ಯಾಯಾಲಯಗಳು ಹೀಗೆ ಮುಸ್ಲೀಮರ ವ್ಯಾಜ್ಯಗಳಿಗೆ ಸಂಬಂದಿಸಿದಂತೆ ಸ್ಥಳೀಯ ಆಚರಣೆಗಳನ್ನು ಅನುಸರಿಸುವುದು ಕೇವಲ ಇಸ್ಲಾಂ ವಿರೋಧಿ ಮಾತ್ರವೇ ಅಲ್ಲದೆ ಅವು ಅತ್ಯಂತ ಹಿಂದುಳಿದವೂ ಮತ್ತು ಬಹುಮುಖ್ಯವಾಗಿ ಮಹಿಳೆಯರಿಗೆ ಸಂಬಂಧಿಸಿದಂತೆ ಅಸಮಾನವೂ ಆಗಿವೆ ಎಂದು ವಾದಿಸಲಾಯಿತು. ಮಾಪಿಳಾ ಮುಸ್ಲೀಮರ ಉತ್ತರಾಧಿಕಾರತ್ವ ಮಸೂದೆಯ ಪ್ರಸ್ತಾವನೆಯಲ್ಲಿ ವಿಮೊಹಮಡನ್(ಮುಸ್ಲೀಂ) ಸಮುದಾಯವು ರೂಢಿಪದ್ಧತಿಗಳು ಅಸಂಗತವೆಂದು ಭಾವಿಸುತ್ತಿದ್ದು, ಅಸ್ತಿತ್ವದಲ್ಲಿರುವ ಸಂಪ್ರದಾಯಗಳು ತಮ್ಮ ರಿಲಿಜನ್ನು ಮತ್ತು ಸಮುದಾಯಕ್ಕೆ ಅವಮಾನಕರವೆಂದು ನೋಡುತ್ತದೆ (ಪಾರ್ಥಚಟರ್ಜಿ, 1998:363) ಎಂದು ಉಲ್ಲೇಖಿಸಲಾಗಿದೆ.

ಮುಸ್ಲೀಂ ಸಂಘಟಣೆಗಳ ಈ ಆಂದೋಲನವು ಹಲವು ಪ್ರಾಂತ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ಹಲವಾರು ಹೊಸ ಕಾನೂನುಗಳನ್ನು ರೂಪಿಸುವಂತೆ ಮಾಡಿದವು. ಮಾಪಿಳಾ ಉತ್ತರಾಧಿಕಾರತ್ವ ಕಾಯ್ದೆ 1918, ಕುಚ್ಚಿ ಮೆಮೋನ್ಸ್ ಕಾಯ್ದೆ 1920 ಮತ್ತು 1938, NWFP ಮುಸ್ಲೀಂ ವೈಯುಕ್ತಿಕ ಕಾನೂನು (ಷರಿಯತ್) ಅನುಷ್ಠಾನ ಕಾಯ್ದೆ 1935 (ಈ ಕಾಯ್ದೆಯ ಮೂಲಕ ಪ್ರಥಮ ಬಾರಿಗೆ ಮುಸ್ಲೀಂ ವೈಯುಕ್ತಿಕಾನೂನು ಮತ್ತು ಷರಿಯತ್ ಅನ್ನು ಸಮಾನಾರ್ಥಕ ಅಥವ ಸಂವಾದಿಯ ಅರ್ಥದಲ್ಲಿ ಬಳಸಲಾಯಿತು). ಈ ಸುಧಾರಣೆಗಳ ಮೂಲಕ ಎಲ್ಲೆಡೆ ಮುಸ್ಲೀಮರು ಆಯಾ ಪ್ರದೇಶದ ಸ್ಥಳೀಯ ಸಂಪ್ರದಾಯ ರೂಢಿಪದ್ಧತಿಗಳು ತ್ಯಜಿಸಿ ಮುಸ್ಲೀಂ ವೈಯುಕ್ತಿಕ ಕಾನೂನು ಅಥವಾ ಷರಿಯಾವನ್ನೇ ಅನುಸರಿಸುವ ಹಾಗೆ ಮಾಡುವ ಪ್ರಯತ್ನಗಳು ನಡೆದವು. ಈ ಆಂಧೋಲನದ ಪರಿಣಾಮವಾಗಿ ಕೇಂದ್ರ ಶಾಸಕಾಂಗವು ಸಹ 1937ರಲ್ಲಿ ಷರಿಯಾ ಕಾಯ್ದೆಯನ್ನು ಅನುಷ್ಠಾನಗೊಳಿಸುತ್ತದೆ. ಮಹಮದಾಲಿ ಜಿನ್ನಾರ ಒತ್ತಾಯದ ಮೇರೆಗೆ ಕೇವಲ ಕೆಲವು ಷರಿಯಾ ವಿದಿಗಳನ್ನು ಮಾತ್ರ ಎಲ್ಲಾ ಮುಸ್ಲೀಂರಿಗೂ ಕಡ್ಡಾಯಗೊಳಿಸಿ ಹಲವನ್ನು ಷರಿಯಾ ಅಥವಾ ಸ್ಥಳೀಯ ಪದ್ಧತಿಗಳನ್ನು ಅನುಸರಿಸುವ ಆಯ್ಕೆಗೆ ಬಿಡಲಾಯಿತು.

ಸಂವಿಧಾನ ರಚನಾ ಸಭೆಯಲ್ಲಿನ ಚರ್ಚೆಯಲ್ಲಿ...

ಸಂವಿಧಾನ ರಚನಾ ಸಭೆಯ ಚರ್ಚೆಯಲ್ಲಿ ಸಮಾನ ನಾಗರೀಕ ಸಂಹಿತೆ ಮತ್ತು ಮುಸ್ಲೀಂ ವೈಯುಕ್ತಿಕ ಕಾನೂನಿನ ಪ್ರತಿಪಾದನೆಗೋಸ್ಕರ ಸೆಕ್ಯುಲರ್ ಪ್ರಭುತ್ವದಡಿಯಲ್ಲಿ ರಿಲಿಜನ್ನಿನ ಸ್ವಾತಂತ್ರ್ಯಕ್ಕೆ ವಿಶೇಷವಾಗಿ ಒತ್ತುನೀಡಿ ಮಾತನಾಡಿದ ಅಂಶಗಳು ಕಂಡುಬರುತ್ತದೆ. ಮುಸ್ಲೀಂ ಲೀಗಿನ ಹಲವು ಪ್ರತಿನಿಧಿಗಳು ಮಧುವೆ, ವಿಚ್ಛೇಧನ, ಮತ್ತು ಕೌಟಂಭಿಕ ನಿರ್ವಹಣೆಯಂತ ವಿಷಯಗಳು ರಿಲಿಜನ್ನಿನ ಅತ್ಯಗತ್ಯ ಅಂಶಗಳಾಗಿರುವುದರಿಂದ ಅವುಗಳನ್ನು ಪ್ರಭುತ್ವದ ಹಸ್ತಕ್ಷೇಪದಿಂದ ಮುಕ್ತವಾಗಿಡಬೇಕು ಎಂದು ವಾದಿಸುತ್ತಾರೆ. ಮುಸ್ಲೀಂ ವೈಯುಕ್ತಿಕ ಕಾನೂನಿನ ಪರವಾದಿಗಳು ರಿಲಿಜನ್ನಿನ ರಾಜಕೀಕರಣದ ಕೂಡದೆನ್ನುತ್ತಾರೆ. ಇಲ್ಲಿ ರಿಲಿಜನ್ನು ಮತ್ತು ಪ್ರಭುತ್ವದ ಪ್ರತ್ಯೇಕತೆ ಎಂದರೆ ಸೆಕ್ಯುಲರ್ ವ್ಯವಸ್ಥೆಯಲ್ಲಿ ಸ್ಟೇಟ್ ಹಸ್ತಕ್ಷೇಪದಿಂದ ರಿಲಿಜನ್ನು ಮುಕ್ತವಾಗಿರುವುದೇ ಆಗಿದೆ ಎನ್ನುತ್ತಾರೆ. ಹಾಗಾಗಿ ರಿಲಿಜನ್ನಿನ ವೈಯುಕ್ತಿಕ ಕಾನೂನಿನಲ್ಲಿ ಪ್ರಭುತ್ವದ ಹಸ್ತಕ್ಷೇಪ ನ್ಯಾಯಬದ್ಧವಲ್ಲ. ಒಂದು ಸೆಕ್ಯುಲರ್ ವ್ಯವಸ್ಥೆ ಎಂದರೆ ಅಲ್ಲಿ ನಾಗರೀಕನಿಗೆ ತನ್ನ ರಿಲಿಜನ್ನಿನ ಭೋಧನೆಯಲ್ಲಿರುವಂತೆ ವೈಯುಕ್ತಿಕ ಕಾನೂನಿನಂತೆ ಬದುಕುವ ಸ್ವಾತಂತ್ರ್ಯವೂ ಸೇರಿದಂತೆ ಸಂಪೂರ್ಣವಾದ ರಿಲಿಜನ್ನಿನ ಸ್ವಾತಂತ್ರ್ಯವನ್ನು ನೀಡುವುದೇ ಆಗಿದೆ.

ಸಂವಿಧಾನತ್ಮಕ ಚರ್ಚೆಯಲ್ಲಿ ಪಾಲ್ಗೊಂಡು ಮುಸ್ಲಿಂ ವೈಯಕ್ತಿಕ ಕಾನೂನು ಬಗ್ಗೆ ಸಂವಿಧಾನ ರಚನಾ ಸಭೆಯಲ್ಲಿ ಮಾತನಾಡಿದವರು ಅಂದಿನ ಮುಸ್ಲಿಂಲೀಗ್ನ ಪ್ರತಿನಿಧಿಯಾಗಿದ್ದ ಮಹಮದ್ ಇಸ್ಮಾಯಿಲ್. ಇವರ ಪ್ರಕಾರ ವಿಒಂದು ಸೆಕ್ಯುಲರ್ ಪ್ರಭುತ್ವದ ಅಡಿಯಲ್ಲಿ ಅದರ ನಾಗರೀಕರೆಲ್ಲರೂ ಅವರ ದೈನಂದಿನ ಜೀವನ, ಅವರ ಭಾಷೆ, ಅವರ ಸಂಸ್ಕೃತಿ, ಅವರ ವೈಯುಕ್ತಿ ಕಾನೂನುಗಳನ್ನೂ ಒಳಗೊಂಡಂತೆ ಎಲ್ಲರಿಗೂ ಸಾಮಾನ್ಯವಾದ ಕಾನೂನು ಹೊಂದಿರಬೇಕು ಎನ್ನುವಂತೆ ಯೋಚಿಸುತ್ತಿದ್ದಾರೆ. ಆದರೆ ಅದು ಸೆಕ್ಯುಲರ್ ಪ್ರಭುತ್ವವನ್ನು ನೋಡುವ ಸರಿಯಾದ ಕ್ರಮವಲ್ಲ. ಒಂದು ಸೆಕ್ಯುಲರ್ ಪ್ರಭುತ್ವದಲ್ಲಿ ವಿಭಿನ್ನ ಸಮುದಾಯಗಳಿಗೆ ಸೇರಿರುವ ನಾಗರೀಕರಿಗೆ ತಮ್ಮದೇ ಆದ ರಿಲಿಜನನ್ನು ಆಚರಿಸಲು, ತಮ್ಮದೇ ಆದ ಜೀವನವನ್ನು ನಡೆಸಲು ಸ್ವಾತಂತ್ರ್ಯವಿರಬೇಕು ಮತ್ತು ಅವರದ್ದೇ ವೈಯುಕ್ತಿಕ ಕಾನೂನನ್ನು ಅವರಿಗೆ ಅನ್ವಯಿಸಬೇಕು. (ಬಾಜ್ಪೈ, 2002:183) ಸಮಾನ ನಾಗರೀಕ ಕಾನೂನುಗಳು ಅನುಸರಿಸಬೇಕು ಎನ್ನುವ ಮೂಲಕ ತಮ್ಮ ವೈಯಕ್ತಿಕ ಕಾನೂನುಗಳಿಗೆ ಧಕ್ಕೆ ತರಬಾರದು ಎಂಬುವುದು ಮಹಮದ್ ಇಸ್ಮಾಯಿಲ್ ಮತ್ತು ಇನ್ನಿತರ ಮುಸ್ಲೀಂ ಲೀಗಿನ ಪ್ರತಿನಿಧಿಗಳ ವಾದವಾಗಿರುತ್ತದೆ.

ಅವರ ಪ್ರಕಾರ ವೈಯಕ್ತಿಕ ಕಾನೂನುಗಳು ಅವರ ರಿಲಿಜನ್ನಿನ ಮತ್ತು ಸಂಸ್ಕೃತಿಯ ಭಾಗವಾಗಿವೆ. ಹಾಗೂ ಜೀವನದ ಅವಿಭಾಜ್ಯ ಅಂಗ ಮತ್ತು ಅದನ್ನು ಅನುಸರಿಸುವ ಹಕ್ಕು ಸಹ ಅವರಿಗೆ ಇದೆ. ಪ್ರಭುತ್ವ ತಾನಾಗಲಿ, ಇತರೆ ಸಂಸ್ಥೆ ಮತ್ತು ವ್ಯಕ್ತಿಗಳಾಗಲಿ ಒಬ್ಬ ರಿಲಿಜನ್ ವ್ಯಕ್ತಿಯ ವೈಯಕ್ತಿಕ ಕಾನೂನುಗಳಿಗೆ ತೊಂದರೆ ಕೊಡುವ ಮತ್ತು ಜನರ ಜೀವನದ ಮಾರ್ಗಗಳಲ್ಲಿ ಹಸ್ತಕ್ಷೇಪ ಮಾಡದಂತೆ ನೋಡಿಕೊಳ್ಳಬೇಕು. ಏಕೆಂದರೆ ಸಾವಿರಾರು ವರ್ಷಗಳಿಂದ ವೈಯಕ್ತಿಕ ಕಾನೂನುಗಳ ಆಧಾರದ ಮೇಲೆ ಬದುಕು ನಡೆಸುವ ವಿಧಾನದಲ್ಲಿ ಪ್ರಭುತ್ವವು ಮಧ್ಯಪ್ರವೇಶ ಮತ್ತು ಹಸ್ತಕ್ಷೇಪ ಮಾಡಬಾರದು. ಸಕ್ಯುಲರ್ ಪ್ರಭುತ್ವದ ಅಡಿಯಲ್ಲಿ ಸಮಾಜದ ಎಲ್ಲ ವ್ಯಕ್ತಿಗಳು ಸಮಾನ ನಾಗರೀಕ

ಹಕ್ಕು ಮತ್ತು ಕಾನೂನುಗಳನ್ನು ಅನುಸರಿಸಬೇಕು ಎಂಬುದು ಸಕ್ಯುಲರಿಸಂ ಆಗಿದ್ದರೆ ಅದು ತಪ್ಪು. ಏಕೆಂದರೆ ಯಾವಾಗಲು ಸೆಕ್ಯುಲರ್ ಪ್ರಭುತ್ವ ಒಂದು ರಿಲಿಜನ್ಗೆ ಸೇರಿದ ಜನರಿಗೆ ತಮ್ಮದೇ ಆದ ರಿಲಿಜನನ್ನು ಅನುಸರಣೆ ಮಾಡುವ ಹಕ್ಕನ್ನು ಕೊಡಬೇಕು ಮತ್ತು ತಮ್ಮದೇ ಆದ ಜೀವನ ವಿದಾನವನ್ನು ಅನುಸರಿಸಲು ಅವಕಾಶ ಕೊಡಬೇಕು. ಪ್ರತಿಯೊಂದು ರಿಲಿಜನ್ಗಳಿಗೆ ವೈಯಕ್ತಿಕ ಕಾನೂನುಗಳಿವೆ ಅದನ್ನು ಅನುಮೋದಿಸಬೇಕು. ಅದೇ ನಿಜವಾದ ಸೆಕ್ಯುಲರ್ ಸ್ಟೇಟ್‌ನ ಪ್ರಮುಖ ಗುರಿಯಾಗಿದೆ. ಸಮಾನ ನಾಗರೀಕ ಸಂಹಿತೆ ವೈಯಕ್ತಿಕ ಕಾನೂನುಗಳಿಗೆ ಅಡ್ಡ ಬಂದರೆ ಅದು ಸೆಕ್ಯುಲರಿಸಂ ರಾಷ್ಟ್ರವಾಗಲು ಸಾಧ್ಯವಿಲ್ಲ.

ಹಾಗೆಯೇ ಈ ಚರ್ಚೆ ಮುಂದುವರಿದು ಎಲ್ಲ ಜನರಿಗೆ ಸಮಾನ ನಾಗರೀಕ ಕಾನೂನು ಇರಬೇಕು ಎಂಬುವುದು ಒಂದು ಲಿಬರಲ್ ಸ್ಟೇಟ್‌ನ ಪ್ರಮುಖ ಲಕ್ಷಣವಾಗಿರಬಹುದು. ಪಶ್ಚಿಮದಲ್ಲಿ ಎಲ್ಲಾ ಸೆಕ್ಯುಲರ್ ರಾಷ್ಟ್ರಗಳಲ್ಲಿ ಸಮಾನ ನಾಗರೀಕ ಕಾನೂನಿನ ವ್ಯವಸ್ಥೆಯಿರಬಹುದು. ಆದರೆ ಭಾರತದ ಸಂದರ್ಭದಲ್ಲಿ ಪ್ರಭುತ್ವ ಜನರ ಜೀವನ ಹಸ್ತಕ್ಷೇಪ ಮಾಡಬಾರದು ಎಂಬ ತತ್ವವನ್ನು ಒಪ್ಪಿಕೊಂಡರೆ ಸಮಾನ ನಾಗರೀಕ ಕಾನೂನು ಅಸಾಧ್ಯವಾಗುತ್ತದೆ. ಎಲ್ಲಾ ಜನರು ಅಥವಾ ಯಾವುದೇ ಸಮುದಾಯದವರು ರಾಷ್ಟ್ರದ ಕಾನೂನುಗಳನ್ನು ಸಮಾನವಾಗಿ ಒಪ್ಪಿಕೊಳ್ಳಬೇಕು ಎಂಬ ಹೇಳಿಕೆ ಜನರ ಮೇಲೆ ಸರ್ವಾಧಿಕಾರತ್ವವನ್ನು ಹೇರುವಂತೆ ಆಗುತ್ತದೆ. ಈ ಮೂಲಕ ಜನರಿಗೆ ಇಷ್ಟವಿಲ್ಲದ ಕಾನೂನುಗಳನ್ನು ಹೇರುವಂತಿಲ್ಲ ಎಂಬುದು ಮುಸ್ಲಿಂ ಲೀಗ್ನ ವಾದವಾಗಿತ್ತು.

ಈ ವಾದವನ್ನು ತಿರಸ್ಕರಿಸುವ ಕೆ.ಎಮ್ ಮುನ್ಷಿಯವರ ಪ್ರಕಾರ ಪ್ರಸ್ತುತ ಎಲ್ಲಾ ಪ್ರಜಾಪ್ರಭುತ್ವ ಸರ್ಕಾರಗಳು ಸಮಾನ ನಾಗರೀಕ ಕಾನೂನು ಅಳವಡಿಸಿಕೊಂಡಿದೆ. ಅಲ್ಲಿ ಎಲ್ಲಿಯೂ ಸಹ ಸರ್ವಾಧಿಕಾರಿ ಧೋರಣೆಯೂ ಇಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ವೈಯಕ್ತಿಕ ಕಾನೂನು ರಿಲಿಜನ್ನಿನ ಭಾಗವಾಗಿದೆ ಎಂಬುದನ್ನು ಒಪ್ಪುವುದಿಲ್ಲ. ಮುನ್ಷಿಯವರು ಪ್ರಕಾರ ವೈಯಕ್ತಿಕ ಕಾನೂನು ಎಂಬುದಾಗಿ ಉಲ್ಲೇಖಿಸುತ್ತಿರುವ ಮಧುವೆ, ವಿಚ್ಚೇಧನ ಮತ್ತು ಕೌಟಂಭಿಕ ನಿರ್ವಹಣೆಯ ವಿಷಯಗಳು ರಿಲಿಜನ್ನಿನ ಭಾಗವಾಗಿರದೆ ಸಾಮಾಜಿಕವಾಗಿರುವಂತಹದು ಎನ್ನುತ್ತಾರೆ. ಇದಕ್ಕೆ ಪೂರಕವಾಗಿ ವ್ಯಕ್ತಿಯ ಪ್ರತಿನಿತ್ಯದ ರಿಲಿಜಿಯಸ್ ಚಟುವಟಿಕೆಗಳನ್ನು ಬಿಟ್ಟು ಉಳಿದ ವಿಷಯಗಳಿಗೆ ಸಂಬಂಧಪಟ್ಟಂತೆ ಪ್ರಭುತ್ವ ಕಾನೂನು ರೂಪಿಸಬೇಕಾಗುತ್ತದೆ. ಅಂದರೆ ಭೌತಿಕ ವಿಷಯಗಳಿಗೆ ಸಂಬಂಧಪಟ್ಟ ವಿಷಯಗಳಲ್ಲ ಸೆಕ್ಯುಲರ್ ಅದನ್ನು ಪ್ರಭುತ್ವ ಕಾನೂನು ರೂಪಿಸಬೇಕು ಎಂಬ ವಾದ ಮಂಡನೆಯಾಗುತ್ತದೆ.

ಇದಕ್ಕೆ ಉತ್ತರವಾಗಿ ಇಸ್ಮಾಯಲ್‌ರವರು ಪ್ರತಿಯೊಂದು ಸಮುದಾಯಕ್ಕೆ ಯಾವುದು ರಿಲಿಜನ್ ಮತ್ತು ಸೆಕ್ಯುಲರ್ ಆಚರಣೆಗಳು ಎಂಬುದು ಗೊತ್ತಿರುತ್ತದೆ. ಒಂದು ರಿಲಿಜನ್ನಿನಲ್ಲಿ ಒಬ್ಬ ವ್ಯಕ್ತಿಗೆ ಯಾವುದು ರಿಲಿಜನ್ ಆಚರಣೆಗಳು ಮತ್ತು ಯಾವುದು ಸೆಕ್ಯುಲರ್ ಆಚರಣೆಗಳು ಎಂದು ಗುರಿತಿಸಿ ರಿಲಿಜನ್ ಆಚರಣೆಗಳನ್ನು ಆಚರಿಸಲು ಸಾಧ್ಯವಾಗುತ್ತದೆ. ಈ ರೀತಿ ಪ್ರಕ್ರಿಯೆ ಬೇರೆ ಬೇರೆ ರಿಲಿಜನ್ಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಇರುತ್ತದೆ. ಈ ರೀತಿಯಾಗಿ ವಿಭಿನ್ನ ರಿಲಿಜನ್ಗಳ ಅಭಿಪ್ರಾಯಗಳನ್ನು ಸಂಗ್ರಹಿಸಿ ಸೆಕ್ಯುಲರ್ ನೀತಿ ಮಾಡಲು ಸಾಧ್ಯವಿಲ್ಲ. ಉದಾ:– ನಮ್ಮ ರಿಲಿಜನ್ನಲ್ಲಿ ನಿಖಾ

(ಮದುವೆ) ರಿಲಿಜಿಯಸ್ ಆಚರಣೆಯಾಗಿದ್ದರೆ ಬೇರೆ ರಿಲಿಜನ್ನಲ್ಲಿ ಅದು ಸೆಕ್ಯುಲರ್ ವಿಷಯಕ್ಕೆ ಬರುತ್ತದೆ. ಹೀಗಿರುವಾಗ ಸಮಾನ ನಾಗರೀಕ ಕಾನೂನು ಅಳವಡಿಸಿಕೊಳ್ಳಲು ಹೇಗೆ ಸಾಧ್ಯ. ಆದ್ದರಿಂದ ಪ್ರತಿಯೊಂದು ರಿಲಿಜಿನ್ನಿನ ವೈಯಕ್ತಿಕ ಕಾನೂನುಗೆ ಮಾನ್ಯತೆ ಕೊಡಬೇಕು. ಈ ರೀತಿಯ ವಾದವನ್ನು ಮಂಡಿಸುವ ಮಹಮದ ಇಸ್ಮಾಯಿಲ್ರವರು ಸಂವಿಧಾನದ ವಿಧಿ 35ರಲ್ಲಿ ವಿಭಾರತದ ಭೂಪ್ರದೇಶದಾದ್ಯಂತ ಇರುವ ನಾಗರೀಕರಿಗೆ ಏಕರೂಪ ನಾಗರೀಕ ಸಂಹಿತೆಯನ್ನು ಖಾತರಿಪಡಿಸಲು ಪ್ರಭುತ್ವವು ಪ್ರಯತ್ನಿಸುತ್ತದೆ ಮತ್ತು ಅದರಲ್ಲಿ ವೈಯುಕ್ತಿ ಕಾನೂನು ಸಹ ಒಳಗೊಂಡಿರುತ್ತದೆಹಿ ಎನ್ನುವ ತಿದ್ದುಡಿಯನ್ನು ಮಂಡಿಸುತ್ತಾರೆ.

ಈ ಹಂತದಲ್ಲಿ ಚರ್ಚೆಯಲ್ಲಿ ಪ್ರವೇಶಿಸುವ ಅಂಬೇಡ್ಕರ ಮುಸ್ಲೀಂ ಲೀಗ್‌ನ ವೈಯಕ್ತಿಕ ಕಾನೂನಿನ ಪ್ರಸ್ತಾವವನ್ನು ತಿರಸ್ಕರಿಸುತ್ತಾರೆ. ಕೆ.ಎಂ. ಮುನ್ಷಿ ಮತ್ತಿತರರು ಏಕರೂಪ ನಾಗರೀಕ ಸಂಹಿತೆಯ ಪರವಾದ ಚರ್ಚೆಯನ್ನು ಪುರಸ್ಕರಿಸುತ್ತಾ ಈಗಾಲೇ ಈ ದೇಶದಲ್ಲಿ ಮಾನವ ಸಂಬಂಧಗಳ ಎಲ್ಲಾ ಅಂಶಗಳನ್ನೂ ಒಳಗೊಂಡಂತೆ ಏಕರೂಪ ನಾಗರೀಕ ಸಂಹಿತೆ ಚಾಲ್ತಿಯಲ್ಲಿದೆ. ಈಗಾಗಲೇ ಏಕರೂಪ ಮತ್ತು ಪೂರ್ಣ ಅಪರಾಧ ಸಂಹಿತ ಅಸ್ತಿತ್ವದಲ್ಲಿದೆ, ಇಡೀ ರಾಷ್ಟ್ರಕ್ಕೆ ಅನ್ವಯವಾಗುವ ಆಸ್ತಿ ವರ್ಗಾವಣೆಯ ಕಾನೂನಿದೆ. ಮದುವೆ ಮತ್ತು ಉತ್ತರಾಧಿಕಾರ ಮಾತ್ರವೇ ಈ ನಾಗರೀಕ ಕಾನೂನಿಂದ ಇನ್ನೂ ಹೊರಗುಳಿದಿದೆ. ಇದರ ಹೊರತಾಗಿ ಈಗಾಗಲೇ ಏಕರೂಪ ನಾಗರೀಕ ಕಾನೂನುಗಳೇ ಇವೆ. ಹೀಗಿರುವಾಗ ಈಗ ಏಕರೂಪ ನಾಗರೀಕ ಸಂಹಿತೆಗೆ ತಿದ್ದುಪಡಿ ಸೂಚಿಸಿ ವೈಯುಕ್ತಿಕ ಕಾನೂನಿನ ಬೇಡಿಕೆ ಇಡುತ್ತಿರುವುದೇ ಆಶ್ಚರ್ಯದ ವಿಚಾರ. ಹಿಂದಿನಿಂದಲೂ ವೈಯುಕ್ತಿಕ ಕಾನೂನನ್ನು ಅನುಸರಿಸುವ ಬಗ್ಗೆ ಮಾತನಾಡಿದವರು ಮರೆತಿರುವುದೇನೆಂದರೆ ವಾಯವ್ಯ (ಮುಸ್ಲೀಂ ಬಾಹುಳ್ಯದ) ಪ್ರಾಂತ್ಯವೂ ಸಹ 1935ರವರೆಗೆ ಷರಿಯಾ ಕಾನೂನಿಗೆ ಒಳಪಟ್ಟಿರಲಿಲ್ಲ. ಅಲ್ಲಿ ಉತ್ತಾರಧಿಕಾರತ್ವ ಮತ್ತಿತರ ವಿಷಯಗಳಿಗೆ ಸಂಬಂಧಿಸಿದಂತೆ ಹಿಂದೂ ಕಾನೂನನ್ನೇ ಅನುಸರಿಸಲಾಗುತ್ತಿತ್ತು. 1939ರಲ್ಲಿ ಕೇಂದ್ರಶಾಸಕಾಂಗವು ಮಧ್ಯಪ್ರವೇಶಿಸಿ ಷರಿಯಾ ಕಾನೂನನ್ನು ಅನ್ವಯಿಸಲು ಹಿಂದೂ ಕಾನೂನು ಅನ್ವಯವನ್ನು ನಿಲ್ಲಿಸಿತು. ಅಷ್ಟು ಮಾತ್ರವಲ್ಲ, 1937ರವರೆಗೂ ವಾಯವ್ಯ ಪ್ರಾಂತ್ಯ ಮಾತ್ರವೇ ಅಲ್ಲದೆ ಭಾರತದ ಇತರೆಡೆ ಕೂಡ ಸಂಯುಕ್ತ ಪ್ರಾಂತ್ಯ, ಕೇಂದ್ರ ಪ್ರಾಂತ್ಯ, ಬಾಂಬೆ ಪ್ರಾಂತ್ಯ ಬಹಳಷ್ಟು ಮಟ್ಟಿಗೆ ಮುಸ್ಲೀಮರು ಉತ್ತರಾಧಿಕಾರಕ್ಕೆ ಸಂಬಂಧಿಸಿದಂತೆ ಹಿಂದೂ ಕಾನೂನಿನ ಆಳ್ವಿಕೆಗೆ ಒಳಪಟ್ಟಿದ್ದರು. ಅವರನ್ನೂ ಇತರ ಮುಸ್ಲೀಮರೊಟ್ಟಿಗೆ ಷರಿಯಾವನ್ನು ಅನುಸರಿಸುವಂತೆ ಮಾಡಲು 1937ರಲ್ಲಿ ಶಾಸಕಾಂಗವು ಮಧ್ಯಪ್ರವೇಶಿಸಿ ಶಾಸನ ಮಾಡಲಾಯಿತು. ಉತ್ತರ ಮಲಬಾರ್ ಪ್ರದೇಶದಲ್ಲಿ ಹಿಂದೂಗಳಿಗೆ ಮಾತ್ರವಲ್ಲ ಮುಸ್ಲೀಮರಿಗೂ ಮರುಮಕ್ಕತಯಮ್ ಕಾನೂನೇ ಅನ್ವಯವಾಗುತ್ತಿತ್ತು. ಹಾಗಾಗಿ ಪುರಾತನ ಕಾಲದಿಂದಲೂ ಮುಸ್ಲೀಮರು ವೈಯುಕ್ತಿಕ ಕಾನೂನ್ನೇ ಅನುಸರಿತ್ತಿದ್ದು, ಏಕರೂಪ ನಾಗರೀಕ ಸಂಹಿತೆ ಅವರ ಆ ರಿಲಿಜನ್ನಿನ ಸ್ವಾತಂತ್ರ್ಯಕ್ಕೆ ಧಕ್ಕೆ ಎನ್ನುವುದು ಅವಾಸ್ತವ.

ಅಂಬೇಡ್ಕರರ ಮತ್ತೊಂದು ವಾದವೆಂದರೆ ಪ್ರಭುತ್ವವು ತನ್ನ ಎಲ್ಲಾ ನಾಗರೀಕರಿಗೆ ಏಕರೂಪ ನಾಗರೀಕ ಸಂಹಿತೆ ರೂಪಿಸಿದರೆ ನಾಗರೀಕರೆಲ್ಲರ ಮೇಲೂ ಏಕಪಕ್ಷೀಯವಾಗಿ ಹೇರುತ್ತದೆ ಎಂದೇನೂ ಅರ್ಥವಲ್ಲ. ಯಾರು ಅದನ್ನು ಒಪ್ಪಲು ಸಿದ್ಧರಿರುವುದಾಗಿ

ಘೋಷಿಸುತ್ತಾರೋ ಅವರಿಗೆ ಮಾತ್ರವೇ ಅನ್ವಯವಾಗುವಂತೆ ಶಾಸನ ಮಾಡುವ ಅವಕಾಶವಂತೂ ಭವಿಷ್ಯತ್ತಿನಲ್ಲಿ ಸಂಸತ್ತಿಗೆ ಇದ್ದೇ ಇದೆ. ಈ ಸಂಹಿತೆಯ ಅನ್ವಯವು ಆರಂಭದಲ್ಲಿ ಸ್ವಯಂ ಇಚ್ಛೆಯದ್ದಾಗಿರುತ್ತದೆ. 1937ರಲ್ಲಿ ಷರಿಯಾ ಕಾಯ್ದೆಯಲ್ಲೂ ಸಹ ಇದೇ ರೀತಿಯ ಅವಕಾಶವನ್ನು ಕಲ್ಪಿಸಿ ವಾಯವ್ಯ ಪ್ರಾಂತ್ಯವನ್ನು ಹೊರತುಪಡಿಸಿ ಇತರೆಡೆ ಅನ್ವಯ ಮಾಡಲು ಷರಿಯಾವನ್ನು ಅನುಸರಿಸಲು ಇಚ್ಛಿಸುವವರು ಪ್ರಭುತ್ವದ ಅಧಿಕಾರಿಯ ಮುಂದೆ ಹೋಗಿ ಸ್ವಯಂ ಇಚ್ಛೆಯಿಂದ ಲಿಖಿತ ಘೋಷಣೆಯನ್ನು ಮಾಡಿದ ಮೇಲೆ ಷರಿಯವನ್ನು ಆತನಿಗೆ ಮತ್ತು ಆತನ ಉತ್ತರಾಧಿಕಾರಿಗಳಿಗೆ ಅನ್ವಯಿಸುವ ಅವಕಾಶವನ್ನು ಕಲ್ಪಿಸಲಾಗಿತ್ತು. ಏಕರೂಪ ನಾಗರೀಕ ಸಂಹಿತೆಗೂ ಅದೇ ರೀತಿಯ ಅವಕಾಶ ಇದ್ದೇ ಇರುತ್ತದೆ. ಇಚ್ಛೆ ಇದ್ದವರು ಏಕರೂಪ ನಾಗರೀಕ ಸಂಹಿತೆ ಅನುಸರಿಸಲಿ ಇಲ್ಲದವರು ಅವರ ವೈಯುಕ್ತಿಕ ಕಾನೂನನ್ನೇ ಅನುಸರಿಸಲಿ ಎನ್ನುತ್ತಾರೆ.

ಇದರ ಜೊತೆಗೆ ಅವರ ವಾದವೇನೆಂದರೆ ಈ ದೇಶದಲ್ಲಿ ಹುಟ್ಟಿನಿಂದ ಸಾವಿನವರೆಗೂ ಜನರ ಜೀವನದ ಎಲ್ಲಾ ವಿಚಾರವು ಬಹುತೇಕ ರಿಲಿಜನ್ನಿನ ಪರಿಕಲ್ಪನೆಗಳೇ ವ್ಯಾಪಿಸಿಕೊಂಡಿವೆ. ಇಲ್ಲಿ ರಿಲಿಜನ್ನೇತರ ವಾಗಿರುವ ಅಂಶಗಳೇ ಕಾಣುವುದಿಲ್ಲ. ಹಾಗಾಗಿ ವೈಯುಕ್ತಿಕ ಕಾನೂನ್ನು ಉಳಿಸಿಕೊಂಡರೆ ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಭುತ್ವವು ಯಾವುದೇ ಕಾನೂನು ಮಾಡದೆ ನಿಷ್ಕ್ರಿಯವಾಗಿರಬೇಕಾಗುತ್ತದೆ. ಜೀವನದ ಪ್ರತಿಯೊಂದು ಅಂಶವನ್ನೂ ನಿರ್ಣಯಿಸುವಷ್ಟು ವ್ಯಾಪ್ತಿಯನ್ನು ರಿಲಿಜನ್ನಿಗೆ ನೀಡಬೇಕಿಲ್ಲ. ಯೂರೋಪಿನಲ್ಲೂ ಕ್ರಿಶ್ಚಿಯಾನಿಟಿ ಮತ್ತದರ ವೈಯುಕ್ತಿಕ ಕಾನೂನಿಗಳಿವೆ ಅಂದಮಾತ್ರಕ್ಕೆ ಜಗತ್ತಿನೆಲ್ಲಡೆ ಮತ್ತು ಯೋರೋಪಿನ ಯಾವುದೇ ಭಾಗದಲ್ಲೂ ಎಲ್ಲರೂ ಅವರ ವೈಯುಕ್ತಿ ಕಾನೂನನ್ನೇ ಅನುಸರಿಸುತ್ತಿಲ್ಲ. ಅಂತದ್ದು ಅಸ್ತಿತ್ವದಲ್ಲೇ ಇಲ್ಲ. ಹಾಗಾಗಿ ರಿಲಿಜನ್ನಿನ ವೈಯುಕ್ತಿ ಕಾನೂನಿಗೆ ಸಂಬಂಧಿಸಿದ ವಿಷಯಗಳನ್ನು ಪ್ರಭುತ್ವದ ವ್ಯಾಪ್ತಿಯಿಂದ ಹೊರಗಿಡಬೇಕು ಎನ್ನುವುದು ಸಾಧ್ಯವಿಲ್ಲ ಎಂದು ವಾದಿಸುತ್ತಾರೆ. ಈ ಹಿನ್ನೆಲೆಯಲ್ಲಿ ವೈಯುಕ್ತಿಕ ಕಾನೂನಿಗೆ ಮಾನ್ಯತೆ ನೀಡಬೇಕು ಎನ್ನುವ ತಿದ್ದುಪಡಿಯನ್ನು ಸಂವಿಧಾನ ರಚನಾ ಸಭೆಯು ತಿರಸ್ಕರಿಸುತ್ತದೆ.

ಸ್ವತಂತ್ರ ಭಾರತದಲ್ಲಿ...

ಸಂವಿಧಾನ ರಚನಾ ಸಭೆಯಲ್ಲಿ ಮುಸ್ಲೀಂ ವೈಯುಕ್ತಿಕ ಕಾನೂನನ್ನು ಸಂವಿದಾನ ಬದ್ದಗೊಳಿಸುವ ಮುಸ್ಲೀಂಲೀಗಿನ ಪ್ರಯತ್ನ ವಿಫಲವಾಗುತ್ತದೆ ಮತ್ತು ಏಕರೂಪ ನಾಗರೀಕ ಸಂಹಿತೆಗೆ ಮನ್ನಣೆ ದೊರೆಯುತ್ತದೆ. ಆದರೆ ಸ್ವತಂತ್ರ ಭಾರತದಲ್ಲಿ ಸಂವಿಧಾನ ರಚನಾ ಸಭೆಯ ಈ ನಿಲುವಿಗೆ ವ್ಯತಿರಿಕ್ತವಾಗಿ ಭಾರತೀಯ ಮುಸ್ಲೀಮರೆಲ್ಲರನ್ನೂ ಕಡ್ಡಾಯವಾಗಿ ಷರಿಯಾ ಕಾಯ್ದೆಯಡಿ ತರುವ ಪ್ರಯತ್ನ ಮುಂದುವರೆಯಿತು. ಅದರ ಫಲವಾಗಿ 1937ರ ಷರಿಯಾ ಕಾಯ್ದೆಯಲ್ಲಿ ನೀಡಲಾಗಿದ್ದ ಷರಿಯಾ ಅಥವಾ ಸ್ಥಳೀಯ ಪದ್ಧತಿಗಳನ್ನು ಅನುಸರಿಸುವ ಆಯ್ಕೆಯ ಅವಕಾಶಗಳನ್ನೂ ಸಹ ಕೈಬಿಡಲಾಯಿತು. ಹಿಂದಿನ ಈ ಷರಿಯಾ ಕಾಯ್ದೆಗಳು ಯಾವ ಯಾವ ಪ್ರಾಂತ್ಯಗಳಲ್ಲಿ ಮತ್ತು ಪ್ರದೇಶಗಳಲ್ಲಿ ಮುಸ್ಲೀಮರಿಗೆ ಅನ್ವಯವಾಗುತ್ತಿರರಲಿಲ್ಲವೋ ಅಲ್ಲೆಲ್ಲಾ ಷರಿಯಾವನ್ನೇ ಮುಸ್ಲೀಮರು ಅನುಸರಿಸುವುದನ್ನು ಕಡ್ಡಾಯಗೊಳಿಸಿ ಅನ್ವಯಿಸಲಾಯಿತು. ಅದರಲ್ಲೂ ಮುಖ್ಯವಾಗಿ 1947ರ ನಂತರ ಭಾರತದೊಂದಿಗೆ ವಿಲೀನಗೊಂಡ ಎಲ್ಲಾ ಸಂಸ್ಥಾನಗಳಲ್ಲೂ ಅದನ್ನು

ಅನುಸರಿಸುವಂತೆ ಮಾಡಲಾಯಿತು. ಅವುಗಳಲ್ಲಿ ಇತ್ತೀಚೆನದು 1980ರಲ್ಲಿ ಪಶ್ಚಿಮ ಬಂಗಾಳದ ಕಮ್ಯುನಿಸ್ಟ್ ಸರ್ಕಾರವು ತನ್ನ ಕಾಯ್ದೆಯ ಮೂಲಕ ಕೂಚ್ ಬಿಹಾರ್ನ ಮುಸ್ಲೀಮರು ಅನುಸರಿಸುತ್ತಿದ್ದ ಸ್ಥಳೀಯ ಆಚರಣೆಗಳನ್ನು ನಿಲ್ಲಿಸಿ ಅದರಬದಲಿಗೆ ಷರಿಯಾವನ್ನೆ ಪಾಲಿಸುವಂತೆ ಮಾಡಲಾಯಿತು. ಅಲ್ಲಿಗೆ ಭಾರತೀಯ ಮುಸ್ಲೀಮರು ಎಲ್ಲರೂ, ಇಚ್ಛೆ ಇದ್ದರೂ ಇಲ್ಲದಿದ್ದರೂ, ಕಡ್ಡಾಯವಾಗಿ ಷರಿಯಾವನ್ನೇ ಅನುಸರಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಯಿತು ಅದೂ ಪ್ರಭುತ್ವದ ಕಾಯ್ದೆಗಳ ಮೂಲಕ.

ಹೀಗೆ ರಿಲಿಜಿಯಸ್ ಅಲ್ಪಸಂಖ್ಯಾತರ ರಿಲಿಜನ್ನಿನ ಸ್ವಾತಂತ್ರ್ಯದ ಮೇಲಿನ ಮೂಲಭೂತ ದಬ್ಬಾಳಿಕೆ ಮತ್ತು ಅವರ ಸಾಂಸ್ಕೃತಿಕ ಅಸ್ಮಿತತೆಯ ಮೇಲಿನ ದಾಳಿ ಎನ್ನುವ ವಾದದ ಆಧಾರದ ಮೇಲೆ ಏಕರೂಪ ನಾಗರೀಕ ಸಂಹಿತೆಯ ಕಲ್ಪನೆಯನ್ನೇ ಪ್ರತಿರೋಧಿಸಿದರೂ ಸಹ, ಮುಸ್ಲೀಂ ನಾಯಕತ್ವವು ಅವರ ರಿಲಿಜನ್ನಿನ ವಿಷಯದಲ್ಲಿ ಪ್ರಭುತ್ವದ ಮಧ್ಯಪ್ರವೇಶವನ್ನು ಸಂಪೂರ್ಣವಾಗಿ ಹತ್ತಿಕ್ಕಲ್ಲಿಲ್ಲ. ವಾಸ್ತವವಾಗಿ ಪ್ರಭುತ್ವದ ಶಾಸನೀಯ ಅಧಿಕಾರದ ಮಧ್ಯಪ್ರವೇಶವನ್ನು ಮಾಡಿಸಿಯೇ (ಮಾಡುವಂತೆ ಒತ್ತಾಯಿಸಿ) ಮುಸ್ಲೀಮೆರೆಲ್ಲರೂ ಷರಿಯತ್ ಅಥವಾ ವೈಯುಕ್ತಿಕ ಕಾನೂನನ್ನು ಭಾರತದ ಎಲ್ಲಾ ಮುಸ್ಲೀಮರೂ ಅನುಸರಿಸುವಂತೆ ಮುಸ್ಲೀಂ ನಾಯಕತ್ವವು ನೋಡಿಕೊಂಡಿತು. ಹಿಂದೂ ವೈಯುಕ್ತಿಕ ಕಾನೂನಿನ ಸುಧಾರಣೆಯಲ್ಲೂ ಪ್ರಭುತ್ವದ ಹಸ್ತಕ್ಷೇಪ ಮಾಡಿದರೂ ಅಲ್ಲಿ ಅವರ ಸಾಂಪ್ರದಾಯಿ/ಧಾರ್ಮಿಕ ನಂಬಿಕೆಗಳನ್ನು ಬಿಟ್ಟುಕೊಟ್ಟು ವೈಚಾರಿಕ ನೆಲೆಗಟ್ಟಿನ ಸಾರ್ವತ್ರಿಕ ವೈಯುಕ್ತಿಕ ಕಾನೂನುಗಳನ್ನು ರೂಪಿಸಲಾಯಿತು. ಆದರೆ ಮುಸ್ಲೀಮರು ಅವರ ಸ್ಥಳೀಯ ಸಾಂಪ್ರದಾಯಿಕ ಮತ್ತು ರೂಢಿಪದ್ಧತಿಗಳನ್ನು ಬಿಟ್ಟುಕೊಟ್ಟು ಷರಿಯತ್ ಅಥವಾ ಸಾರ್ವತ್ರಿಕವಾಗಿ ಮುಸ್ಲೀಂ ವೈಯುಕ್ತಿಕ ಕಾನೂನನ್ನು ಸ್ವೀಕರಿಸುವಂತೆ ಮಾಡಲಾಯಿತು.

ಇಲ್ಲಿ ಬಹುಮುಖ್ಯವಾಗಿ ಇನ್ನೊಂದು ಅಂಶವನ್ನು ಗುರುತಿಸಬೇಕು. ರಿಲಿಜನ್ನಿನ ಸ್ವಾತಂತ್ರ್ಯ ವ್ಯಕ್ತಿಯ ವೈಯುಕ್ತಿಕ ಆಯ್ಕೆ ಎನ್ನುವುದೇ ಉದಾರವಾದಿ ಸೆಕ್ಯುಲರ್ತತ್ವ ಮತ್ತು ಅದೇ ಸಂವಿಧಾನದ ನೀತಿಯೂ ಸಹ. ಆದರೆ ಭಾರತೀಯ ಮುಸ್ಲೀಮರಿಗೆ ಇದು ವೈಯುಕ್ತಿಕ ಆಯ್ಕೆಯಾಗಿ ಲಭ್ಯವಿಲ್ಲ. ಅವರು ಮುಸ್ಲೀಮರಾಗಿದ್ದಾರೆ, ಹಾಗಾಗಿ ಅವರು ಷರಿಯವನ್ನೇ ಅನುಸರಿಸಬೇಕು, ಅಷ್ಟೆ. ಮುಸ್ಲೀಮನಾಗಿ ತನ್ನ ರಿಲಿಜನ್ನಿನ ಡಾಕ್ಟ್ರಿನ್ನುಗಳನ್ನು ಅನುಸರಿಸುವ, ಅನುಸರಿಸದಿರುವ ಅಥವಾ ಇಚ್ಛೆ ಇದ್ದರೆ ಸ್ಥಳೀಯ ರೂಢಿಪದ್ಧತಿಗಳನ್ನಾಗಲೀ ಅಥವಾ ಸೆಕ್ಯುಲರ್ ನಾಗರೀಕ ಕಾನೂನುಗಳನ್ನು ಅನುಸರಿಸುವ ಆಯ್ಕೆಯನ್ನೇ ಆತ/ಕೆ ಹೊಂದಿಲ್ಲ. ಅಂದಮೇಲೆ ಇಲ್ಲಿ ರಿಲಿಜನ್ನಿನ ಸ್ವಾತಂತ್ರ್ಯವನ್ನು ವ್ಯಕ್ತಿಗೆ ಅಥವಾ ನಾಗರೀಕನಿಗೆ ನೀಡಿಲ್ಲ ಅದನ್ನು ಸಮುದಾಯಕ್ಕೆ/ಸಂಘಟನೆಗಳಿಗೆ ನೀಡಲಾಗಿದೆ. ಆ ಮೂಲಕ ಅವನ ವೈಯುಕ್ತಿಕವಾದ ರಿಲಿಜನ್ನಿನ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಲಾಗಿದೆ.

ಬಹುಸಂಖ್ಯಾತ ಹಿಂದೂಗಳ ಮೇಲೆ ಆಧುನಿಕರಣ ಮತ್ತು ಸುಧಾರಣೆ ಹೆಸರಿನಲ್ಲಿ ಸೆಕ್ಯುಲರ್ ಕಾನೂನುಗಳನ್ನು ಹೇರಿದ ಪ್ರಭುತ್ವವು ಮುಸ್ಲೀಮರ ವಿಷಯದಲ್ಲಿ (ಸ್ಥಳೀಯ ಮುಸ್ಲೀಮರಿಗೆ ಅನಪೇಕ್ಷಿಗತವಾಗಿದ್ದರೂ/ ಇಷ್ಟವಿಲ್ಲದಿದ್ದರೂ ಮುಸ್ಲೀಂ ಸಂಘಟನೆಗಳ ಒತ್ತಾಯದ ಮೇರೆಗೆ) ಇಸ್ಲಾಂ ರಿಲಿಜನ್ನಿನ ಕಾನೂನುಗಳನ್ನು ಅವರ ಮೇಲೆ ಹೇರಿತು. ಇದು ಭಾರತೀಯರ ವೈಯುಕ್ತಿಕ ಕಾನೂನಿಗೆ ಸಂಬಂಧಿಸಿದಂತೆ 1947ರ ನಂತರದ

ಸೆಕ್ಯುಲರ್ ಪ್ರಭುತ್ವದ ವರ್ತನೆಯಲ್ಲಿನ ಮೂಲಭೂತ ವ್ಯತ್ಯಾಸ. ಒಂದೆಡೆ ಅಲ್ಪಸಂಖ್ಯಾತ ಮುಸ್ಲೀಂ ಸಮುದಾಯದ ವೈಯುಕ್ತಿಕ ಕಾನೂನಿನ ವಿಷಯದಲ್ಲಿ ಸಾರ್ವತ್ರಿಕ ವೈಚಾರಿಕ ಸೆಕ್ಯುಲರ್ ಕಾನೂನುಗಳನ್ನು ಮಾಡುವ ಯಾವ ಅವಕಾಶವನ್ನು ಮುಸ್ಲೀಮ್ ಸಂಘಟನೆಗಳು ಮತ್ತು ಸೆಕ್ಯುಲರ್ವಾದಿಗಳು ಪ್ರಭುತ್ವಕ್ಕೆ ನೀಡಲಿಲ್ಲ, ಅಥವಾ ಪ್ರಭುತ್ವವೇ ಮಾಡಲಿಲ್ಲ. ಮತ್ತೊಂದೆಡೆ ಬಹುಸಂಖ್ಯಾತ ಹಿಂದೂಗಳ ನಂಬಿಕೆ ಆಚರಣೆಗಳೂ ಸೇರಿದಂತೆ ಅವರ ವೈಯುಕ್ತಿಕ ಕಾನೂನಗಳಿಗೆ ಸಂಬಂಧಿಸಿದಂತೆ ನಿರಂತರವಾಗಿ ಸುಧಾರಣ ಕಾಯ್ದೆಗಳ ಮೇಲೆ ಕಾಯ್ದೆಗಳನ್ನು ಸೆಕ್ಯುಲರ್ ಪ್ರಭುತ್ವ ಮಾಡುತ್ತಲೇ ಬರುತ್ತಿದೆ. ಅಲ್ಲಿಗೆ ಭಾರತೀಯ ಪ್ರಭುತ್ವವು ರಿಲಿಜನ್ನಿನ ಸ್ವಾತಂತ್ರ್ಯ, ಸಮಾನತೆ, ತಾಟಸ್ಥತೆ ಮತ್ತು ಸಹಿಷ್ಣತೆ ಎನ್ನುವ ಎಲ್ಲಾ ಸೆಕ್ಯುಲರ್ ತತ್ವಗಳಿಗೂ ತಿಲಾಂಜಲಿಯನ್ನು ಇಟ್ಟಿದೆ.

References

1. Chatterjee, Partha. 1998. “Secularism and Tolerance.” In: Secularism and Its Critics, ed. Rajeev Bhargava. New Delhi: Oxford University Press. Pp. 345-379.
02. Constituent Assembly Debates, Constituent Assembly Debates On 23 November, 1948
    CONSTITUENT ASSEMBLY OF INDIA - VOLUME VII https://indiankanoon.org/doc/870715/.
03. Rochana Bajpai, 2002. «The conceptual vocabularies of secularism and minority rights in India»Journal of Political Ideologies (2002), 7(2), 179-197.
04. Roover, Jakob D. 2015. Europe, India, and the Limits of Secularism (Religion and Democracy).London:Oxford University Press.
05. ಬಾಲಗಂಗಾಧರ, ಎಸ್. ಎನ್., 2010. ಸೆಕ್ಯುಲರ್ ಪ್ರಭುತ್ವ ಮತ್ತು ರಿಲಿಜಿಯಸ್ ಸಂಘರ್ಷ ಲಿಬರಲ್ ನಿರ್ಲಿಪ್ತತೆ ಮತ್ತು ಭಾರತೀಯ ಬಹುಸಂಸ್ಕೃತಿಗಳು” (229–231). ಪೂರ್ವಾವಲೋಕನ. (ಸಂ). ಜೆ. ಎಸ್. ಸದಾನಂದ ಮತ್ತು ರಾಜಾರಾಮ ಹೆಗ್ಡೆ. ಬೆಂಗಳೂರು: ಅಭಿನವ ಪ್ರಕಾಶನ.
06. ಬಾಲಗಂಗಾಧರ, ಎಸ್. ಎನ್., 2010. ಸೆಕ್ಯುಲರಿಸಂನ ಕರಿನೆರಳು–ಭಾರತದಲ್ಲಿ ಹಿಂದೂ ಮೂಲಭೂತವಾದ ಮತ್ತು ವಸಾಹತುಶಾಹೀ ಉದಾರವಾದ. ಪೂರ್ವಾವಲೋಕನ. (ಸಂ). ಜೆ. ಎಸ್. ಸದಾನಂದ ಮತ್ತು ರಾಜಾರಾಮ ಹೆಗ್ಡೆ. ಬೆಂಗಳೂರು: ಅಭಿನವ ಪ್ರಕಾಶನ.

❖❖❖

ಸಾಂಗತ್ಯ ಸಾಮ್ರಾಟ : ರತ್ನಾಕರವರ್ಣಿ

ಡಾ. ಪಾಟೀಲ ಶ್ರೀಕಾಂತ ವಿ.
ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಬೀದರ್–585 401

ಕನ್ನಡ ಸಾಹಿತ್ಯವು ವೈವಿಧ್ಯಮಯವಾದ ವಿಷಯ ಮತ್ತು ರೂಪಗಳನ್ನು ಹೊತ್ತು, ಕಾಲಕಾಲಕ್ಕೆ ಬದಲಾವಣೆಗಳನ್ನು ತನ್ನದಾಗಿಸಿಕೊಳ್ಳುತ್ತಾ ಮುನ್ನಡೆದಿದೆ. ಆರಂಭದಲ್ಲಿ ಜೈನಧಾರೆಯಾಗಿ ಹೊರಹೊಮ್ಮಿ ಚಂಪೂ ರೂಪವನ್ನು ಧಾರಣಮಾಡಿರುವುದು ಕಾಣುತ್ತೇವೆ. ನಡುಗನ್ನಡದಲ್ಲಿ ಇದಕ್ಕೆ ಮುಂದುವರಿಕೆಯಾಗಿ ವೀರಶೈವ ಹಾಗೂ ವೈಷ್ಣವ ಧಾರೆಗಳು ಸೇರಿಕೊಂಡು ವಿಪುಲವಾದ ಸಾಹಿತ್ಯ ಸೃಷ್ಟಿಯಾದದ್ದು ಚರಿತ್ರಾರ್ಹ. ಈ ನಡುಗನ್ನಡದ ಸಾಹಿತ್ಯ ಸಂದರ್ಭದಲ್ಲಿ ದೇಸಿಯ ಮಟ್ಟುಗಳಿಂದ ಕನ್ನಡ ಸಾಹಿತ್ಯದ ಸಂಪತ್ತು ವೃದ್ಧಿಸಿತು. ಸಾಂಗತ್ಯದಲ್ಲಿ ಹುಲುಸಾಗಿ ಕೃಷಿಗೈದು ಸಾಂಗತ್ಯ ಸಾಮ್ರಾಟ ಎನಿಸಿದವನು ರತ್ನಾಕರವರ್ಣಿ.

ರತ್ನಾಕರವರ್ಣಿಯ ಇತಿವೃತ್ತ

ಕರ್ನಾಟಕವನ್ನಾಳಿದ ಮಹಾನ ಅರಸು ಮನೆತನಗಳಲ್ಲೊಂದಾದ ವಿಜಯನಗರದ ಅರಸರ ಸಾಮಂತ ರಾಜನಾದ ಕಾರ್ಕಳದ ಭೈರರಾಜನ ಆಸ್ಥಾನದಲ್ಲಿದ್ದವನು ರತ್ನಾಕರವರ್ಣಿ. ಈತನಿಗೆ ರತ್ನಾಕರ ಅಣ್ಣ ಹಾಗೂ ರತ್ನಾಕರಸಿದ್ಧ ಎನ್ನುವ ಹೆಸರುಗಳು ಇದ್ದವು. ಈತನ ಕಾಲ ಸುಮಾರು ಕ್ರಿ.ಶ. 1560 ಎಂದು ಭಾವಿಸಲಾಗಿದೆ. ಈತನ ದೀಕ್ಷಾಗುರು : ಚಾರುಕೀರ್ತ್ಯಾಚಾರ್ಯರು; ಮೋಕ್ಷಗುರು : ಹಂಸನಾಥರು.

18ನೆಯ ಶತಮಾನದ ದೇವಚಂದ್ರ ಎಂಬ ಕವಿಯೂ ತನ್ನ ರಾಜಾವಳೀ ಕಥೆಯಲ್ಲಿ ಈತನ ಕುರಿತು ಮಾಹಿತಿಯನ್ನು ನೀಡುತ್ತಾನೆ. ರತ್ನಾಕರವರ್ಣಿ ಸೂರ್ಯವಂಶಕ್ಕೆ ಸೇರಿದ ಕ್ಷತ್ರೀಯಕುಲದ ತುಳುನಾಡಿನವನು. ಮೂಡುಬಿದಿರೆಯ ದೇವರಾಜನ ಮಗ ರತ್ನಾಧೀಶನೆಂದು ಈತನ ಹೆಸರು. ಇವನು ಜೈನ ಮತಾವಲಂಬಿಯಾಗಿದ್ದು ಹಂಸರಾಜ, ರತ್ನಾಕರಸಿದ್ಧ, ರಸಿಕಚಕ್ರಿ ಮತ್ತು ಶೃಂಗಾರಕವಿ ಎಂಬ ಬಿರುದುಗಳನ್ನು ಹೊಂದಿದ್ದಾನೆ. ಇವನ ಕಲಾಚಾತುರ್ಯಕ್ಕೆ ಮಾರುಹೋಗಿ ಭೈರವರಸನ ಕುವರಿ ಇವನಲ್ಲಿ ಮೋಹಿತಳಾಗುತ್ತಾಳೆ. ಶಾಸ್ತ್ರಾಭ್ಯಾಸ ಬಲದಿಂದ ಅವಳ ಸೌಧಾಗ್ರ ಪ್ರವೇಶಿಸಿ ಪ್ರಣಯಲೀಲೆಯಲ್ಲಿ ತೊಡಗುತ್ತಾನೆ. ಇವನ ರಹಸ್ಯವು ರಟ್ಟಾಗಿ ಅರಸು ಹಿಡಿಯಲು ಪ್ರಯತ್ನಿಸಿದಾಗ ಅಲ್ಲಿಂದ ಓಡಿ ಹೋಗಿ ಜೈನ ಗುರುಗಳಲ್ಲಿ ದೀಕ್ಷೆ ಪಡೆದು ಅಧ್ಯಾತ್ಮದಲ್ಲಿ ತೊಡಗಿ ಸಾಹಿತ್ಯದ ಸಂಸರ್ಗಕ್ಕೊಳಗಾಗಿ ಭರತೇಶವೈಭವ ರಚಿಸಿದನೆಂದು ಸಾರುತ್ತಾನೆ.

ರತ್ನಾಕರವರ್ಣಿಯ ಕೃತಿಗಳು :

ರತ್ನಾಕರವರ್ಣಿಯು ರಚಿಸಿದ ಕೃತಿಗಳು :

1. ತ್ರಿಲೋಕಶತಕ. ಇದು ಜೈನ ಮತಾನುಸಾರ ಪ್ರಪಂಚದ ಸ್ಥಿತಿಗತಿಯ ವಿಷಯವನ್ನು ಆಧರಿಸಿದ 129 ಕಂದಪದ್ಯಗಳಲ್ಲಿ ರಚಿಸಲಾಗಿದ ಕೃತಿ.

2. ಅಧ್ಯಾತ್ಮ ಗೀತೆಗಳು ಅಥವಾ ಅಣ್ಣನ ಪದಗಳು. ಇವು 238 ಹಾಡುಗಳ ಮೂಲಕ ಸಾರಿರುವ ನೀತಿ ತತ್ವಗಳಾಗಿವೆ.
3. ರತ್ನಾಕರಾಧೀಶ್ವರಶತಕ. ಇದು ರತ್ನತ್ರಯ, ಆತ್ಮನ ಸ್ವರೂಪ, ವೈರಾಗ್ಯ ಇತ್ಯಾದಿಯನ್ನು ನಿರೂಪಿಸುವ ವೃತ್ತದಲ್ಲಿ ರಚಿತವಾದ ಕೃತಿ.
4. ಅಪರಾಜಿತೇಶ್ವರಶತಕ. ಇದು ನೀತಿ, ವೈರಾಗ್ಯ, ಆತ್ಮವಿಚಾರಗಳನ್ನು ಬಿಂಬಿಸುವುದಕ್ಕಾಗಿ 127 ವೃತ್ತಗಳಲ್ಲಿ ರಚಿಸಿದ್ದಾನೆ.
5. ಭರತೇಶವೈಭವ. ಇದು ಜೈನ ಮೊದಲ ತೀರ್ಥಂಕರನಾದ ವೃಷಭನಾಥನ ಮಗನಾದ ಭರತೇಶನ ವೈಭವವನ್ನು ಸಾರುವ 80 ಸಂಧಿಗಳಲ್ಲಿ ಅಡಕಗೊಳಿಸಲಾದ 9969 ಸಾಂಗತ್ಯಪದ್ಯಗಳಲ್ಲಿ ರಚಿತವಾದ ಸಾಂಗತ್ಯಕೃತಿ.

ಸಾಂಗತ್ಯದ ಹುಟ್ಟು – ಬೆಳವಣಿಗೆ

ವಿದ್ವಾಂಸರು ಸಾಂಗತ್ಯದ ಮೂಲವನ್ನು ಹುಡುಕುತ್ತಾ ಉಳಿದೆಲ್ಲ ಸಾಹಿತ್ಯಕ್ಕೆ ಜನಪದ ಸಾಹಿತ್ಯವೇ ತಾಯಿ ಬೇರು ಆದಂತೆ ಇದರ ಮೂಲವನ್ನು ಜನಪದ ಸಾಹಿತ್ಯದಲ್ಲಿ ಗುರುತಿಸುತ್ತಾರೆ. ಅದು ಹನ್ನೆರಡನೆಯ ಶತಮಾನಕ್ಕೆ ಶರಣರಿಂದ ದೀಕ್ಷೆ ಪಡೆದು ಕಾಲಜ್ಞಾನ, ಸ್ವರವಚನಗಳಲ್ಲಿ ಬಿಡಿಯಾಗಿ ಬಳಕೆಗೊಂಡು ದೇಪರಾಜನ ಸೊಬಗಿನ ಸೋನೆಯಲ್ಲಿ ಇಡಿಯಾದ ರೂಪದಲ್ಲಿ ಅಭಿವ್ಯಕ್ತಗೊಂಡಿದೆ. ಸಾಂಗತ್ಯ ರೂಪವನ್ನು ಸಶಕ್ತವಾಗಿ ಬಳಸಿ ಶೃಂಗಾರಕ್ಕಲ್ಲದೆ ವೀರಕ್ಕೂ ಸೂಕ್ತವಾಗಿ ಬಳಸಬಹುದೆಂಬುದ್ದನ್ನು ತೋರಿಸಿಕೊಟ್ಟ ಮಹಾಕವಿ ರತ್ನಾಕರವರ್ಣಿ. ಮೈಸೂರಿನ ರಾಜಪೋಷಣೆಯಲ್ಲಿ ಹೊರಹೊಮ್ಮಿದ ಸಾಂಗತ್ಯ ಕೃತಿಗಳು ಮುಂದೆ ಇಪ್ಪತ್ತನೆಯ ಶತಮಾನದಲ್ಲಿಯೂ ಇಡಿಯಾದ ಸಾಂಗತ್ಯ ಕೃತಿಗಳು ರಚನೆಯಾಗಿರುವುದಲ್ಲದೇ ಭಾವಗೀತೆಗಳಲ್ಲಿಯೂ ದೊರೆಯುವ ಬಿಡಿ ಸಾಂಗತ್ಯ ಪದ್ಯಗಳು ರೂಪುಗೊಂಡಿವೆ.

ಭರತೇಶವೈಭವ ಮಹಾಕಾವ್ಯ

ರತ್ನಾಕರವರ್ಣಿಯನ್ನು ಕನ್ನಡ ಸಾರಸ್ವತ ಲೋಕದಲ್ಲಿ ಮಹಾಕವಿಯ ಸ್ಥಾನವನ್ನು ಕಲ್ಪಿಸಿದ ಕೃತಿಯೆಂದರೆ ಭರತೇಶವೈಭವ. ಸಂಸ್ಕೃತ ಸಾಹಿತ್ಯದಲ್ಲಿ ಜಿನಸೇನನ ಪೂರ್ವಪುರಾಣವು ಅಪೂರ್ವವಾದದ್ದು. ಕನ್ನಡದಲ್ಲಿ ಆದಿಕವಿ ಪಟ್ಟವನ್ನು ಪಡೆದ ಪಂಪನ ಆದಿಪುರಾಣ ತದನಂತರ ಚಾವುಂಡರಾಯನ ತ್ರಿಷಷ್ಟಿಲಕ್ಷಣಪುರಾಣ ಮಹತ್ವದ ಕೃತಿಗಳು. ಇವುಗಳು ಆದ ಮೇಲೆ ಮೊದಲನೆಯ ತೀರ್ಥಂಕರನ ಮಕ್ಕಳಾದ ಭರತ ಮತ್ತು ಬಾಹುಬಲಿಯರ ಚರಿತ್ರೆ ಇಲ್ಲಿಯೇ ಬಂದಿದೆ. ಆದರೂ ಭರತನನ್ನೇ ನಾಯಕನನ್ನಾಗಿ ಮಾಡಿಕೊಂಡು ವಿಸ್ತಾರವಾಗಿ ರಚಿತಗೊಂಡ ಕೃತಿಯೆಂದರೆ 'ಭರತೇಶವೈಭವ'ವೇ ಆಗಿದೆ. ಭರತೇಶವೈಭವವು ಐದು ವಿಜಯಗಳಲ್ಲಿ ನಿರೂಪಿಸಲಾದ ಕೃತಿ. ಅವುಗಳೆಂದರೆ 1. ಭೋಗವಿಜಯ 2. ದಿಗ್ವಿಜಯ 3. ಯೋಗವಿಜಯ 4. ಅರ್ಕಕೀರ್ತಿವಿಜಯ ಮತ್ತು 5. ಮೋಕ್ಷವಿಜಯ. ಇವುಗಳನ್ನು ಕವಿ ಪಂಚಕಲ್ಯಾಣಗಳೆಂದು ಕರೆದಿದ್ದಾನೆ.

ಇಲ್ಲಿ ಭರತನನ್ನು ಅಲೌಕಿಕ ವ್ಯಕ್ತಿಯಂತೆ ವರ್ಣಿಸುತ್ತಾನೆ : ಹಲವು ಮಾತೇನೊಂದ ಪೇಳ್ವೆನಾಕ್ಷತ್ರಿಯ–ಕುಲರತ್ನಗಾಹಾರವುಂಟು । ಮಲವಿಲ್ಲ ಮೂತ್ರವಿಲ್ಲೆಂದರೀ ಲೋಕದ

ಬಳಕೆಗಾರರ ಪೇಳ್ವ ತೆರನೆ ॥ ತನ್ನ ಪ್ರತಿನಿತ್ಯದ ಚಟುವಟಿಕೆಗಳಲ್ಲಿ ಭರತೇಶನು ಉನ್ನತ ಸ್ತರದಲ್ಲಿರುತ್ತಾನೆ.

ರತ್ನಾಕರವರ್ಣಿಯೇ ಹೇಳುವಂತೆ ಭರತೇಶನ ರೂಪ 'ಹೆಂಗಳ ರೂಪು ಗಂಡರಿಗೆ ಗಂಡರ ರೂಪು । ಹೆಂಗಳ ಸೋಲಿಪುದೆಂಬ ಪಾಂಗಲ್ಲವವನ ಚೆಲ್ವಿಕೆ ಗಂಡು ಪೆಣ್ಗಳ । ಕಂಗಳ ಸೆರೆವಿಡಿದಿಹುದು 1–50

ನಿಟ್ಟಿಸಿದರೆ ಮುತ್ತಮುದುಕಿಗಾದರು ಜುಮ್ಮು
ದಟ್ಟಿಸುತಿಹುದು ರೂಪವನ
ಬಟ್ಟಜವ್ವನೆಯರಂತಿಂತಾದರೆಂದು ಬಾ
ಯ್ಬಿಟ್ಟಿನ್ನು ನುಡಿಯಲದೇಕೆ 1–51

ಅರಸನಾಗಿ, ಪತಿಯಾಗಿ, ಸುತನಾಗಿ, ಅಣ್ಣನಾಗಿ, ಗೆಳೆಯನಾಗಿ, ಭಕ್ತನಾಗಿ, ಮುಂತಾದ ಸ್ಥಾನಗಳಲ್ಲಿ ಅವನ ನಡತೆ ಹೇಗೆಂಬುದನ್ನು ರತ್ನಾಕರವರ್ಣಿಯು ಸಹಜವಾಗಿ ಚಿತ್ರಿಸುತ್ತಾನೆ. ಭರತೇಶನ ಸೌಂದರ್ಯ ಹಾಗೂ ಕ್ಷಾತ್ರತೇಜವನ್ನು ಸಾಂಗತ್ಯ ಛಂದಸ್ಸಿನಲ್ಲಿ ಸೊಗಸಾಗಿ ವರ್ಣಿಸಿದ್ದಾನೆ. ತ.ಸು. ಶಾಮರಾಯರು ಅಭಿಪ್ರಾಯ ಪಡುವಂತೆ 'ರತ್ನಾಕರನು ಆಯ್ದುಕೊಂಡಿರುವ ವಸ್ತುವಿನಲ್ಲಿ ಹಲವು ಬಗೆಯ ಭಾವಾವೇಗಗಳು ಬರಲು ಆಸ್ಪದವಿಲ್ಲ. ಉಗ್ರಭಾವಗಳಿಗೆ ಇಲ್ಲಿ ಎಡೆಯಿಲ್ಲ. ಆದ್ದರಿಂದ ಅವನ ಶೈಲಿಯಲ್ಲಿ ಒಂದು ಸತ್ವವು ಕಡಿಮೆಯಾದಂತೆ ತೋರಿಬರುತ್ತದೆ... ಮನಸ್ಸನ್ನು ಕೆರಳಿಸಬಲ್ಲ ಕಿಚ್ಚನ್ನು ಹೆಚ್ಚಿಸಬಲ್ಲ ಉಗ್ರಭಾವಗಳು ಅವನಲ್ಲಿ ಕಡಿಮೆ. ಅವನ ದೃಷ್ಟಿಯೆಲ್ಲವೂ ಸುಂದರವಾದ ಕೋಮಲವಾದ ಕಳಕಳಿಸುವ ಲಲಿತಕಲೆಯ ಕಡೆಗೆ'(ಪ್ರಬುದ್ಧ ಕರ್ನಾಟಕ, 22–3, ಪುಟ 34). ಈ ಅಭಿಪ್ರಾಯವನ್ನು ರಂ. ಶ್ರೀ. ಮುಗಳಿಯವರು ಪ್ರತಿಕ್ರಿಯಿಸುತ್ತಾ 'ಈ ವಿಮರ್ಶೆ ಭರತೇಶವೈಭವದ ಪ್ರತ್ಯಕ್ಷರೂಪಕ್ಕೆ ಅನ್ವಯಿಸುತ್ತದೆ. ಆದರೆ ಕೋಮಲ, ಉಗ್ರ ಮುಂತಾದ ಎಲ್ಲ ಭಾವಗಳಿಗೂ ರತ್ನಾಕರನ ಶೈಲಿ ಸಮರ್ಥವಾಗಬಲ್ಲುದು ಎಂಬುದಕ್ಕೆ ಅಪ್ರತ್ಯಕ್ಷ ಪ್ರಮಾಣವು ಅದರಲ್ಲಿ ಬೇಕಾದಷ್ಟು ದೊರೆಯತ್ತದೆ'(ಕ.ಸಾ.ಚ.–ರಂ.ಶ್ರೀ.ಮು., ಪುಟ 321). ಎಂದೆನ್ನುತ್ತಾರೆ.

ರತ್ನಾಕರವರ್ಣಿಯು ಭರತೇಶವೈಭವದಲ್ಲಿ ಅನೇಕ ನಾಟಕೀಯ ಸನ್ನಿವೇಶಗಳನ್ನು ಸೃಷ್ಟಿಸಿದ್ದಾನೆ. ಅದು ಭರತ ಬಾಹುಬಲಿಯರ ಸಂವಾದದಲ್ಲಿ ಸ್ಫುಟವಾಗಿ ಗೋಚರಿಸುತ್ತದೆ.

ಮನಸಿಜ ಕೇಳಣ್ಣ ನಿನಗೆನಗಿಂದು ದು–
ರ್ಮನದಿಂದ ಜಗಳವಪ್ಪುದಕೆ ।
ಘನವೇನು ಹೇಳು ನಿಷ್ಕಾರಣಕದನವ
ಜನಪರೆಸಗುವರೆಯೆಂದಾ ॥ (32–70)

ಈ ಸಿರಿಯನು ನಾನು ಪುಣ್ಯದ ಫಲವೆಂದು–
ದಾಸೀನದೊಳು ನೋಡುತಿಹೆನು ।
ಆಸೆಯಿಲ್ಲೆನಗೆ ನೀನೊಪ್ಪುಗೊಳ್ಮೆಂದಣ
ಭೂಸುದತೀಶ ನೀನಲ್ತೆ ॥ (32–105)

ಇಂತಹ ಯುಕ್ತವಾದ ಮಾತಿಗೆ ಬಾಹುಬಲಿ ಒಲಿಯುತ್ತಾನೆ –

ಗರುಡಮಂತ್ರಕೆ ವಿಷವಿಳಿವಂತೆ ಭರತಭೂ–
ವರನ ವಾಕ್ಯವ ಕೇಳಲಾಗಿ ।
ಜರಿಜರಿದಂಗಜಗೆತ್ತಿದ ಕೋಪ ಪೈ–
ಸರಿಸಿತು ಹೃದಯ ತಂಪಾಯ್ತು ॥ (32–119)

ನರ್ತನದ ವರ್ಣನೆ ರೂಪಿಸುವಾಗ ಕವಿಯು ಓದುಗನ ಕಣ್ಣ ಮುಂದೆ ನರ್ತಕಿಯರು ನರ್ತಿಸುವಂತೆ ವರ್ಣಿಸುತ್ತಾನೆ. ಅವನ ಮಾತುಗಳನ್ನು ಗಮನಿಸೋಣ.

ಸುಳಿದು ಸುತ್ತುವಳು ನಾಟ್ಯದೊಳು ಸಮ್ಮೋಹನ
ಜಳಧಿಯ ಸುಳಿಯೊ ಎಂಬಂತೆ
ಬಲಕೆಡಕೊಲೆದು ಹರಿವಳೆಳವಿಸಿಲಲ್ಲಿ
ಎಳನಾಗ ಹರಿವಂತೆ ಮುರಿದು (12–77)

ಈ ಮೇಲಿನ ಸಂಗತಿಗಳನ್ನು ಗಮನಿಸಿದರೆ ರತ್ನಾಕರನು ಸಾಂಗತ್ಯ ರೂಪದಲ್ಲಿ ಉತ್ಕಟವಾದ ಭಾವಗಳನ್ನು ವ್ಯಕ್ತಗೊಳಿಸಿ, ಕೋಮಲಭಾವದಂತೆ ಉಳಿದ ಭಾವಗಳಿಗೂ ಸ್ಥಾನ ಕಲ್ಪಿಸಿರುವುದು ವೇದ್ಯವಾಗುತ್ತದೆ. ಇನ್ನೊಂದೆಡೆಗೆ ಶ್ರೀಯುತ ರಂ.ಶ್ರೀ. ಮುಗಳಿಯವರು ಕನ್ನಡ ಸಾಹಿತ್ಯದಲ್ಲಿ ರತ್ನಾಕರನ ಸ್ಥಾನ ಗುರುತಿಸುವಲ್ಲಿ ಭರತೇಶವೈಭವವು ಭರತೇಶನ ಆತ್ಮ ವೈಭವವಾಗಿರುವಂತೆ ರತ್ನಾಕರನ ಕಾವ್ಯ ವೈಭವವಾಗಿರುತ್ತದೆ. ಅದು ಒಬ್ಬ ಮಹಾಕವಿಯ ಮಹಾಕೃತಿ ಎಂಬುದು ನಿರ್ವಿವಾದ. ಪಂಪ, ಹರಿಹರ, ಕುಮಾರವ್ಯಾಸ ಇವರಿಗೆ ಸರಿಜೋಡಿಯಾಗಿ ನಿಲ್ಲುವ ಮಹಾಕವಿ ಎಂದರೆ ರತ್ನಾಕರನೇ. ಸಾಗಂತ್ಯವು ಬೆಳೆಯುತ್ತ ಬಂದು ರತ್ನಾಕರನಲ್ಲಿ ಮಹಾಕಾವ್ಯದ ವಾಹಕವಾಯಿತು ಎನ್ನುತ್ತಾರೆ. ಇದನ್ನೇ ಇನ್ನೊಂದು ಬಗೆಯಲ್ಲಿ ತ.ಸು. ಶಾಮರಾಯರು 'ಭಾಮಿನೀಷಟ್ಪದಿಗೆ ಕುಮಾರವ್ಯಸನು ಹೇಗೋ ರಗಳೆಗಳಿಗೆ ಹರಿರನು ಹೇಗೋ ಸಾಂಗತ್ಯಕ್ಕೆ ರತ್ನಾಕರನು ಹಾಗೆ'(ಪ್ರಬುದ್ಧ ಕರ್ನಾಟಕ, 22–3, ಪುಟ 35) ಎಂದು ನಿರ್ಣಯಿಸುತ್ತಾರೆ.

ಸಕಲ ಲಕ್ಷಣವು ವಸ್ತುಕಕೆ ವರ್ಣಕಕಿಷ್ಟು
ವಿಕಳವಾದರು ದೋಷವಿಲ್ಲ ।
ಸಕಲ ಲಕ್ಷಣಕಾಗಿ ಬಿರುಸುಮಾಡಿದರೆ ಪು
ಸ್ತಕದ ಬದನೆಕಾಯಹುದು ॥ (1–9)

ರತ್ನಾಕರನು ಉದ್ದೇಶಿಸಿದಂತೆ ವರ್ಣಕಕಾವ್ಯದ ಸ್ವತಂತ್ರ ದೃಷ್ಟಿ ಇಲ್ಲಿ ಫಲಿಸಿದೆ. ಅವನ ಶೈಲಿ ಹಾಗೂ ಛಂದಸ್ಸುಗಳ ಸಂಯೋಗವು ಚೆನ್ನಾಗಿ ಮೂಡಿಬಂದಿದೆ.

ಡಾ. ವೀರಣ್ಣ ರಾಜೂರವರು 'ಭರತೇಶವೈಭವದಲ್ಲಿ ನವರಸಗಳು ಬಂದಿದ್ದರೂ ಶೃಂಗಾರದ್ದೇ ಸಾರ್ವಭೌಮತ್ವ. ಕಾವ್ಯದ ತುಂಬೆಲ್ಲ ಅದರ ಹೊಳೆ ಹರೆದಿದೆ. ಇಡೀ ಕಾವ್ಯ ವಿಶಾಲವಾದ ಒಂದು ಶೃಂಗಾರ ರಸ ಸಮುದ್ರ. ಈ ಸಮುದ್ರದಲ್ಲಿ ಮುಳುಗಿದವನ ಜೀವನ ಪಾವನ ಸಾರ್ಥಕ. ಇದರಲ್ಲಿ ಯಾನ ಕೈಗೊಂಡ ಓದುಗನಿಗೆ ಬರಿ ಮುತ್ತು ರತ್ನಗಳ ರಾಶಿಯೇ ಎದುರಾಗುತ್ತವೆ. ಅಲ್ಲಲ್ಲಿ ಅಮೃತದ ಕುಂಡಗಳು; ಅದರ ಸವಿಯನ್ನು ಸವಿಯುತ್ತ ಸುಖಿಸುತ್ತ ಒಳ ಪ್ರವೇಶಿಸಿದ ವ್ಯಕ್ತಿ ಬಾಹ್ಯಜಗತ್ತನ್ನೇ ಮರೆತು ಅಲ್ಲಿಯೇ ತಲ್ಲೀನನಾಗುತ್ತಾನೆ. ಹಾಸ್ಯ ರಸವು ಭರತ ಮತ್ತು ಅವನ ಸತಿಯರ ಸಲ್ಲಾಪದಲ್ಲಿ ಲಾಸ್ಯವಾಡಿದರೆ, ಭಕ್ತಿರಸ ನಿರಂಜನ ಸ್ತುತಿಯಲ್ಲಿ ವ್ಯಕ್ತವಾಗಿದೆ. ಶಾಂತರಸ

ತತ್ವನಿರುಪಣೆಯಲ್ಲಿ ಕಾಂತಿ ಬೀರಿದೆ. ಉಳಿದವು ಸಂದರ್ಭವರಿತು ಬಳಕೆಯಾಗಿವೆ' (ಕ.ಸಾಂ.ಸಾ,ಪು.305) ಎಂದಿರುವುದು ಯುಕ್ತವಾಗಿದೆ.

ಪರಾಮರ್ಶನ ಗ್ರಂಥಗಳು

1. ಕನ್ನಡ ಸಾಹಿತ್ಯ ಚರಿತ್ರೆ – ರಂ.ಶ್ರೀ. ಮುಗಳಿ, ಪ್ರ : ಗೀತಾ ಬುಕ್ ಹೌಸ ಮೈಸೂರು 2012
2. ಪ್ರಬುದ್ಧ ಕರ್ನಾಟಕ – ಸಂ : 22 ಸಂ : 01 ಮತ್ತು 03, ಭರತೇಶವೈಭವ – ತ. ಸು. ಶಾಮರಾಯ.
3. ರತ್ನಾಕರನ ಹಾಡುಗಳು – ಸಂ. ಹಂಪನಾಗರಾಜಯ್ಯ 1979
4. ಕನ್ನಡ ಸಾಂಗತ್ಯ ಸಾಹಿತ್ಯ – ಡಾ. ವೀರಣ್ಣ ರಾಜೂರ, ಪ್ರ : ಕನ್ನಡಸಾಹಿತ್ಯ ಪರಿಷತ್ತು ಬೆಂಗಳೂರು 1985
5. ಭರತೇಶ ವೈಭವ – ತ.ಸು. ಶಾಮರಾಯ (ಪ್ರಬುದ್ಧ ಕರ್ನಾಟಕ, ಸಂ.22–ಸಂ.3, ಪುಟ 35)

❖❖❖

ಹಾಲ್ದಿಂಗಳು ಹೂಯೆಸಳು
ತಂಗಾಳಿಯ ಮಾತುಗಳು ಸಾಕು
ನಮ್ಮನಾವರಿಯಬೇಕಾದರೆಯಿಲ್ಲಿ
ಬಿರುಗಾಳಿಯೊಂದು ಬರಬೇಕು

ವಸುಧೇಂದ್ರರ ಎರಡು ಕಥೆಗಳು

ಡಾ. ದೇವಮ್ಮಣ್ಣಿ ಎಂ.
ಸಹ ಪ್ರಾಧ್ಯಾಪಕರು, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು–5

ಆಧುನಿಕ ಕಥಾ ಸಾಹಿತ್ಯವು ತನ್ನ ಸಮಕಾಲೀನ ಸಮಾಜ, ಬದುಕು, ಸಂಸ್ಕೃತಿ, ಪ್ರಭಾವ ಮೊದಲಾದವುಗಳನ್ನು ಕುರಿತು ಕಾಲ ಕಾಲಕ್ಕೆ ತನ್ನದೇ ಚಿಂತನೆಗಳನ್ನು ದಾಖಲಿಸುತ್ತಾ ಬಂದಿದೆ. ಈ ಹಿನ್ನೆಲೆಯಲ್ಲಿ ವಸುಧೇಂದ್ರರ ಕಥಾ ಸಾಹಿತ್ಯವನ್ನು ಗಮನಿಸಲಾಗಿದೆ. ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಇಲ್ಲಿನ ಕಥೆಗಳ ವಸ್ತುಗಳು ಹೆಚ್ಚು ಪ್ರಸ್ತುತವೆನಿಸುತ್ತವೆ. ಆಧುನಿಕತೆಯ ಅಬ್ಬರದಲ್ಲಿ ಖಾಸಗಿತನ, ಮಾನವೀಯತೆ, ಕೃತಜ್ಞತೆಯ ಭಾವ ಮರೆಯಾಗುತ್ತಿರುವುದನ್ನು, ಸಂವೇದನಾ ರಹಿತ ಜಗತ್ತು ನಿರ್ಮಾಣವಾಗುತ್ತಿರುವುದನ್ನು ಇಲ್ಲಿನ ಕಥೆಗಳು ದಾಖಲಿಸಲು ಪ್ರಯತ್ನಿಸುವುದನ್ನು ಕಾಣಬಹುದಾಗಿದೆ.

2004ರಲ್ಲಿ ಪ್ರಕಟಗೊಂಡ ವಸುಧೇಂದ್ರರ 'ಯುಗಾದಿ' ಕೃತಿಯಲ್ಲಿ ಅಪಸ್ವರದಲ್ಲೊಂದು ಆರ್ತನಾದ, ಹೆಡ್ ಹಂಟರ್, ಬದುಕು ಎಲ್ಲರಿಗುಂಟು, ಯುಗಾದಿ, ಪಾರ್ಥೇನಿಯಂ ವಿಕಾಸವಾದ, ಬೆಟ್ಟದ ನೆಲ್ಲಿ ಸಮುದ್ರದ ಉಪ್ಪು, 180^0, ಹುಲಿಗೆ ಕಾಡೇ ರಕ್ಷೆ, ಬ್ರಹ್ಮಸೃಷ್ಟಿ, ಗೋಲ, ಬದನೆಕಾಯಿ ಮೂರ್ಖ, ಬೇರೇನಿಲ್ಲ ಒಂಚೂರು ಪ್ರೀತಿ ಮೊದಲಾದ 25 ಕಥೆಗಳಿವೆ. ಇವುಗಳಲ್ಲಿ ಯುಗಾದಿ ಮತ್ತು ಬ್ರಹ್ಮಸೃಷ್ಟಿ ಎಂಬ ಎರಡು ಕತೆಗಳನ್ನು ಮಾತ್ರ ಚರ್ಚೆಗೆ ಒಳಪಡಿಸಲಾಗಿದೆ.

ಯುಗಾದಿ ಭಾರತೀಯರ ಪಾಲಿಗೆ ಹೊಸವರ್ಷ. ಯುಗಾದಿ ಎಂದರೆ ಹೊಸತರ ಆರಂಭ, ಬೆಳಕು, ಜ್ಞಾನ, ಅರಿವು ತಿಳುವಳಿಕೆ ಎಂಬ ಹಿನ್ನೆಲೆಯಲ್ಲಿ ಕಥೆಯು ಹೊಸ ಅರಿವೊಂದನ್ನು ಮೂಡಿಸಲು ಪ್ರಯತ್ನಿಸುತ್ತದೆ. ಹೀಗಾಗಿ ಯುಗಾದಿ ಶೀರ್ಷಿಕೆ ಅರ್ಥಪೂರ್ಣವಾಗಿದೆ. ಇದು ಎರಡು ತಲೆಮಾರುಗಳ ಭಾವನಾತ್ಮಕ ಸಂಘರ್ಷದ ಚಿತ್ರಣವಾಗಿದ್ದು, ಮರೆಯಾಗುತ್ತಿರುವ ಮಾನವೀಯ ಮೌಲ್ಯಗಳನ್ನು, ಸಂಬಂಧಗಳನ್ನು ನೆನಪಿಸಲು ಹೊರಟಿರುವ ಕತೆಯಂತಿದೆ.

ಮಧ್ಯಮ ವರ್ಗದ ಶಾಲೆಯ ಮೇಷ್ಟ್ರು ಗೋಪಣ್ಣ, ಈತನ ಮಗ ಇಂಜಿನಿಯರ್ ಪದವಿ ಪಡೆದು ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಕೆಲಸ ನಿರ್ವಹಿಸುವಾತ. ಈತನ ಪತ್ನಿಕೂಡ ಅಷ್ಟೇ ಸಂಬಳ ಪಡೆಯುವಂತವಳು. ಇವರೊಂದಿಗೆ ವಾಸಿಸುವ ಗೋಪಣ್ಣ ತನ್ನ ಹೆಂಡತಿಯ ಸಾವಿನ ಅನಂತರ ಮರು ಮದುವೆಯಾಗಲು ಬಯಸದೆ ಏಕಾಂಗಿಯಾಗಿ ಉಳಿಯುತ್ತಾನೆ. ಆಧುನಿಕ ಚಿಂತನೆಗೆ ತೆರೆದುಕೊಂಡ ಪ್ರಹ್ಲಾದ ಜಾತಿ ಮೀರಿಯೂ ವಿವಾಹವಾಗಬಲ್ಲ. ತನ್ನ ಮನೆತನದ ಮೂಲ ಆಚರಣೆಗಳನ್ನು ಬಿಟ್ಟು ಬದುಕಬಲ್ಲ. ಇಂತಹ ಮಗನನ್ನು ಸಹಿಸಿಕೊಳ್ಳುವ ಮೇಷ್ಟ್ರು ಅಸಹಾಯಕತೆಯಲ್ಲಿ ತೊಳಲಾಡುವುದನ್ನು ಕಾಣುತ್ತೇವೆ.

ಹೆಂಡತಿಯ ಸಾವಿನ ಅನಂತರ ತನ್ನ ನಿವೃತ್ತಿ ಜೀವನ ಸಾಗಿಸಲು ಗೋಪಣ್ಣ ಮೇಷ್ಟ್ರು ಬೆಂಗಳೂರಿನಲ್ಲಿ ನೆಲೆಸುತ್ತಾರೆ. ಇವರ ಹಳ್ಳಿಯ ಸ್ನೇಹಿತ ಕಾಸಿಂಸಾಬರು ಒಮ್ಮೆ

ಪ್ರಹ್ಲಾದನಲ್ಲಿಗೆ ಸಹಾಯ ಬಯಸಿ ಬೆಂಗಳೂರಿಗೆ ಬರುತ್ತಾರೆ. ಪ್ರಹ್ಲಾದ, ಕಾಸಿಂಸಾಬರ ಮಗನಿಗೆ ಕಡಿಮೆ ಅಂಕಗಳು ಬಂದಿರುವುದರಿಂದ ಕೆಲಸ ಕೊಡಿಸಲು ನಿರಾಕರಿಸುತ್ತಾನೆ. ಇದೇ ಪ್ರಹ್ಲಾದನ ಪತ್ನಿ ಹೆರಿಗೆ ನೋವಿನಿಂದ ನರಳುವಾಗ ಖಾಸಗಿ ಆಸ್ಪತ್ರೆಗಳ ಮುಷ್ಕರದಿಂದ ಸರ್ಕಾರಿ ಆಸ್ಪತ್ರೆಗೆ ದಾಖಿಲಾಗಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆಸ್ಪತ್ರೆಯಲ್ಲಿ ಎದುರಾಗುವ ದಾದಿ–ರಾಧ, ಗೋಪಣ್ಣ ಮಾಸ್ತರರ ಶಿಷ್ಯೆ. ಹೆರಿಗೆ ನೋವಿನ ಸಂದರ್ಭದಲ್ಲಿ ಗೋಪಣ್ಣ ಮಾಸ್ತರರ ಕುಟುಂಬಕ್ಕೆ ನೀಡಿದ ಸಹಾಯ ಮತ್ತು ಅವರನ್ನು ನೋಡಿಕೊಂಡ ಬಗೆ ಮಾನವೀಯ ನೆಲೆಯದ್ದು. ಈ ಸಂದರ್ಭದಲ್ಲಿ ಬರುವ ರಾಧಳ ಮಾತುಗಳು ಕಥೆಯ ಒಟ್ಟು ಆಶಯವನ್ನು ತೆರೆದಿಡುತ್ತವೆ.

ಸರ್ಕಾರಿ ನೌಕರಿ ಮತ್ತು ಬಹುರಾಷ್ಟ್ರೀಯ ಕಂಪನಿಗಳ ನೌಕರಿಗಳ ನಡುವಿನ ತಾರತಮ್ಯವನ್ನು ನಾವಿಲ್ಲಿ ಗುರುತಿಸಬಹುದು. ಮೇಷ್ಟ್ರು ಮಗ ಸರ್ಕಾರಿ ಕೆಲಸವನ್ನು ನಿರಾಕರಿಸಿ ಬಹುರಾಷ್ಟ್ರೀಯ ಕಂಪನಿಯಲ್ಲಿ ಕೆಲಸಕ್ಕೆ ಸೇರುತ್ತಾನೆ. ಆರ್ಥಿಕ ಹಿಂಜರಿತ ಮತ್ತು ಹೆಚ್ಚುತ್ತಿರುವ ವಿದ್ಯಾವಂತರ ಸಂಖ್ಯೆಯ ಕಾರಣದಿಂದ ಇಂದು ಭದ್ರತೆಗಾಗಿ ಬಹಳಷ್ಟು ಮಂದಿ ಸರ್ಕಾರಿ ಕೆಲಸದೆಡೆಗೆ ಮುಖ ಮಾಡುತ್ತಿದ್ದಾರೆ ಎಂಬುದು ಕೂಡ ಗಮನಾರ್ಹ.

ಕಥೆಯ ಪಾತ್ರಗಳು ಬೆರಳೆಣಿಕೆಯಷ್ಟಿದ್ದು ಗೋಪಣ್ಣ ಮತ್ತು ಪ್ರಹ್ಲಾದ ಪ್ರಧಾನ ಭೂಮಿತೆಯಲ್ಲಿದ್ದಾರೆ. ಬೆಳೆದ ಮಗನೊಂದಿಗೆ ಸ್ನೇಹಿತ ಮಗನಿಗೆ ಅನ್ಯಾಯವಾಗುತ್ತದೆ ಎಂದು ಭಾವಿಸುವ ಅಪರೂಪದ ಮನುಷ್ಯ. ಉನ್ನತ ಶಿಕ್ಷಣ ಪಡೆದ ಆಧುನಿಕೀಕರಣದ ಪ್ರಭಾವಕ್ಕೆ ಒಳಗಾದ ಪ್ರಹ್ಲಾದ ತಂತ್ರಜ್ಞಾನ ಅರಿಯಬಲ್ಲವನು. ಆದರೆ ಬದುಕು ಮತ್ತು ಸಂಬಂಧಗಳನ್ನು ಅರಿಯುವಲ್ಲಿ ಸೋಲುತ್ತಾನೆ. ಇದನ್ನು ಕತೆಯ ಚಿತ್ರಕತ್ವದಂತೆ ಅನಾವರಣ ಮಾಡುತ್ತಲೇ ನೈತಿಕ ಅಧಃಪತನದ ವಿವರಗಳನ್ನು ನಾಟಕೀಯಗೊಳಿಸುತ್ತದೆ.

ನಿವೃತ್ತಿಯ ಅನಂತರ ಗೋಪಣ್ಣ ಮೇಷ್ಟ್ರುತನ್ನ ಇಳಿವಯಸ್ಸಿನ ಕಾಲ ದೂಡಲು ದಾರಿ ಕಾಣದೆ ಅಪಾರ್ಟ್‌ಮೆಂಟಿನ ಮಕ್ಕಳಿಗೆ ಚೈತ್ರ, ವೈಶಾಖ, ಬಣ್ಣದ ತಗಡಿನ ತುತ್ತೂರಿ, ರಾಮಾಯಣ ಮಹಾಭಾರತ. ಹೇಳಲು ಶುರು ಮಾಡುತ್ತಾರೆ. ಇದಕ್ಕೆ ಕಾರಣ ಮಕ್ಕಳಿಗೆ ಕತೆ ಹೇಳುವುದು ಇವರ ಆಸಕ್ತಿ. ಆದರೆ ಇಂದಿನ ನಾಗರೀಕ ತಂದೆ ತಾಯಿಗಳು ಈ ಬಗೆಯ ಪಠ್ಯಪೂರಕ ಚಟುವಟಿಕೆಗಳನ್ನು ಅಪ್ರಯೋಜಕವೆಂದು ಭಾವಿಸುತ್ತಾರೆ. ಇದು ಆಧುನಿಕ ಬದುಕಿನ ವಿಪರ್ಯಾಸವೇ ಸರಿ. ಅಜ್ಜ ಅಜ್ಜಿಯರಿದ್ದ ಕೂಡುಕುಟುಂಬಗಳು ಇಂದು ಕಣ್ಮರೆಯಾಗುತ್ತಾ, ವ್ಯಕ್ತಿತ್ವರೂಪಿಸುವ ಬಾಲ್ಯ ಕಾಲದ ನೀರಿ ಕತೆಗಳು ಇಂದು ನಿರುಪಯುಕ್ತ ಎಂದೆನಿಸಿಕೊಳ್ಳುತ್ತಿವೆ. ಇದಕ್ಕಿರುವ ಕಾರಣಗಳನ್ನು ಅಧ್ಯಯನ ಮಾಡಿ ಕಂಡುಕೊಳ್ಳುವ ತುರ್ತು ಇಂದಿನ ಜರೂರಾಗಿದೆ. ಪ್ರಸ್ತುತ ಆಶಯವನ್ನು ಕತೆಗಾರ ವಸುಧೇಂದ್ರರ ಪ್ರಸ್ತುತ ಕತೆಯಲ್ಲಿ ಕಾಣಬುಹುದಾಗಿದೆ.

ಹೆಚ್ಚು, ಸಂಬಳ ಪಡೆಯುವ ಪ್ರಹ್ಲಾದನ ಪಾಲಿಗೆ "ಮನೆ ಕಟ್ಟಿ ನೋಡು ಮದುವೆ ಮಾಡಿ ನೋಡು" ಎಂಬ ಮಾತು ಅಷ್ಟಾಗಿ ಅನ್ವಯಿಸುವುದಿಲ್ಲ. ಸರ್ಕಾರಿ ಕೆಲಸದ ಮೇಷ್ಟ್ರು ತನ್ನ ನಿವೃತ್ತಿಯ ಸಮೀಪದಲ್ಲೋ ಅಥವಾ ಅನಂತರವೋ ಒಂದು ಮನೆ ಕಟ್ಟುವುದರಲ್ಲಿ ಹೈರಾಣಾಗಿ ಹೋಗುತ್ತಾನೆ. ಆದರೆ ಪ್ರಹ್ಲಾದನಂಥವರ ಪಾಲಿಗೆ ಮನೆಯು ಟಿ.ವಿ., ಫ್ರಿಜ್‌ಗಳಂತೆ ಅದು ಹಣದ ಜಗತ್ತು. ನಗರ ಭಾಗದಲ್ಲಿ ಮನೆಯೊಂದಿಗಿನ ಭಾವನಾತ್ಮಕ ಸಂಬಂಧ ಕಡಿಮೆಯಾಗುತ್ತಿರುವ ಸಂದರ್ಭದಲ್ಲಿ ಮನೆಯು ಒಂದು

ವಸ್ತುವಾಯಿತೇ? ಏಕೆ ಹೀಗೆ ಎಂಬ ಪ್ರಶ್ನೆ ಧುತ್ತನೆ ಮುಂದೆ ಬರುತ್ತದೆ. ಕತೆಗಾರನ ಜಾಣ್ಮೆ ಇರುವುದೇ ಇಂಥಲ್ಲಿ.

ಬೆಂಗಳೂರು ನಗರದಲ್ಲಿಯ ಕನ್ನಡದ ಸ್ಥಿತಿಗತಿಯನ್ನು ಕಥೆ ತೆರದಿಡುತ್ತದೆ. ಗೋಪಣ್ಣ ಬೆಂಗಳೂರಿನಲ್ಲಿ ನಿವೃತ್ತಿಯ ಅನಂತರ ಕನ್ನಡ ಪಾಠ ಮಾಡಲು ಬಯಸಿದಾಗ ಇಲ್ಲಿಯ ಇಂಗ್ಲೀಷ್ ಶಾಲೆಗಳಲ್ಲಿ ಕೇಳಿ ಬರುವ ಮಾತು "ಇಲ್ಲಿ ನಾವು ಬರಿ ಇಂಗ್ಲೀಷಿನಲ್ಲಿ ಕಲಿಸೋದು, ನಿಮ್ಮ ಎಕ್ಸ್‌ಪಿರಿಯನ್ಸ್ ನಮಗೆ ಉಪಯೋಗಕ್ಕೆ ಬರೋದಿಲ್ಲ. ನೀವು ಯಾವುದಾದರೂ ಸ್ಲಂಏರಿಯಾ ಹುಡುಕಿಕೊಂಡು ಹೋದರೆ ಅಲ್ಲಿ ಸಾಮಾನ್ಯವಾಗಿ ಕನ್ನಡ ಶಾಲೆಗಳಿರುತ್ತವೆ." ಎನ್ನುವಲ್ಲಿ ಕನ್ನಡದ ಅಧೋಗತಿ ಕರ್ನಾಟಕದ ಶಕ್ತಿ ಕೇಂದ್ರವಾಗಿರುವ ಬೆಂಗಳೂರಿನಲ್ಲೇ ಎಂಬುದನ್ನು ಗಮನಿಸಬೇಕು.

ಹಿರಿಯ ತಲೆಮಾರು ಬಿಡಲಾರದ ಹಾಗೂ ಹೊಸ ತಲೆಮಾರು ಸ್ವೀಕರಿಸಲಾರದ ನಂಬಿಕೆಗಳು ಇಲ್ಲಿ ಚರ್ಚೆಗೆ ಒಳಗಾಗಿವೆ. ಮಗ ಚಿಕ್ಕವನಿದ್ದಾಗ ಮಾತು ಬರುತ್ತಿಲ್ಲ ಮೂಕನಾದನೆಂಬ ಭಯದಿಂದ ದರ್ಗಾದಲ್ಲಿ ಹರಕೆ ಹೊತ್ತ ಮೇಷ್ಟ್ರು ಬೆಂಗಳೂರಿಗೆ ಕಾಸಿಂಸಾಬರು ಬಂದಾಗ "ಇಲ್ಲಿಗೆ ಬಂದಾಗಿಂದ ದರ್ಗಕ್ಕೆ ಬೆಲ್ಲ ಮತ್ರಿಸೋದೇ ಇಲ್ಲದಂಗೆ ಆಗ್ಯದ ನೋಡು. ನೀನೇ ನನ್ನ ಪರ ಅಲ್ಲಿ ಸೇವಾ ಮಾಡಿಸು ಕಾಸಿಮ್ಮ" ಎಂದು ಕಾಸಿಂಸಾಬರಿಗೆ ನೂರು ರೂಪಾಯಿಗಳನ್ನು ನೀಡುವಲ್ಲಿ ಇಳಿ ವಯಸ್ಸಿನ ತೊಳಲಾಟವಿದೆ.

ಕಥೆಯು ಸಮಾಜದ ಹಲವು ಮಗ್ಗುಲುಗಳ ಬಗೆಗೆ ಬೆಳಕು ಚೆಲ್ಲುತ್ತದೆ. ಇಂದಿನ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳೆರೆಡರ ಚಿತ್ರಣಗಳು ಇಲ್ಲಿದಾಖಲಾಗಿವೆ. ಪರಿಚಿತರು ಬಂದಾಗ ಹೆರಿಗೆಗಳು ಆಪರೇಷನೆ ಇಲ್ಲದೆ ಜರುಗುತ್ತವೆ ಎಂಬ ದಾದಿ ರಾಧಳ ಮಾತು "ವೈದೋ ನಾರಾಯಣ ಹರಿಃ" ಎಂಬ ಮಾತಿನಲ್ಲಿ ಸಂಶಯ ಹುಟ್ಟಿಸುತ್ತದೆ.

ಈ ಸಂಕಲನದ ಮುನ್ನುಡಿ ಎನ್ನಬಹುದಾದ ಬರಹವು ನಾವು ಮರೆಯುತ್ತಿರುವ ಹಳ್ಳಿ ಬದುಕು ಹಾಗೂ ಹಳ್ಳಿ ಬದುಕಿನ ಹೆತ್ತವರನ್ನು ನೆನಪಿಸುವಂತಿದೆ. ಮಕ್ಕಳನ್ನು ಓದು, ಉದ್ಯೋಗಕ್ಕಾಗಿ ಹೊರ ಜಗತ್ತಿಗೆ ಪರಿಚಯಿಸಿದ ಹೆತ್ತವರು ಮಕ್ಕಳ ಬರುವಿಕೆಗಾಗಿ ಪ್ರತಿಬಾರಿ ಜಾತಕ ಪಕ್ಷಿಯಂತೆ ಕಾಯುತ್ತಾರೆ. ಆದರೆ ಬದುಕಿನ ಪಯಣದಲ್ಲಿ ಅನಿವಾರ್ಯ ಎಂಬಂತೆ ತಂದೆ ತಾಯಿಗಳು ಮರೆಯಾಗುತ್ತಾರೆ. ಮನೆಯಲ್ಲಿ ಉಳಿದದ್ದು ಬರಿಯ ನೆನಪುಗಳು ಮಾತ್ರ. ತಂದೆ ತಾಯಿಗಳ ಸಾವಿನ ಅನಂತರ ಮಗ ವಿದೇಶಕ್ಕೆ ಮರಳುವಾಗ "ಬೇಗ ಬಂದು ಬಿಡು" ಎನ್ನುವ ಕಾಳಜಿಯ ಅಮ್ಮನ ಮಾತು, ತನ್ನ ಬರುವಿಕೆಗಾಗಿ ಕಾಯುವ ಜೀವದ ಕೊರತೆ ಎದ್ದು ಕಾಣುತ್ತದೆ. ಖಾಲಿ ಮನೆಯಲ್ಲಿ ವಸ್ತುಗಳ ಮೇಲೆ ಹೊದ್ದಿರುವ ಅಪ್ಪನ ಅಂಗಿ, ಅಮ್ಮನ ಸೀರೆ ಕ್ಷಣ ಕಾಲ ಜೀವತಳೆದಂತೆ ಭಾಸವಾಗುವುದು ನಮ್ಮನ್ನೂ ಚಿಂತನೆಗೆ ಹಚ್ಚುತ್ತವೆ.

ಕನ್ನಡ ಮೇಷ್ಟ್ರುಗಳ ಅರ್ಹತೆ, ಮೌಲ್ಯ, ಸ್ಥಾನ, ಮಹತ್ವ ಕಡಿಮೆ ಎಂದು ಭಾವಿಸುವ ಕಾಲಘಟ್ಟದಲ್ಲಿ ರಾಧ ತನ್ನ ಗುರುಗಳನ್ನು ಕುರಿತು ಹೇಳುವ ಮಾತುಗಳಿವು "ಏನ್ರಿ ಮಾಸ್ತರರ ನಿಮಗ ಸಹಾಯ ಮಾಡಿ ಹಣ ಹೇಗೆ ತೊಗಳ್ಳಕಾಗ್ತದೆ ರೀ! ಮಾಸ್ತರರ, ಬದುಕು ಮಾಡೋದು ಹೆಂಗೆ ಅಂತ ಕಲಿಸಿಕೊಟ್ಟೀರಿ ಅದಕ್ಕಿಂತ ದೊಡ್ಡದು ಬೇರೆ ಏನು ಕೊಡಲಿಕ್ಕೆ ಅಗ್ತೈತೆ ಬಿಡ್ರಿ" ಎಂಬ ಅವಳ ಮಾತುಗಳಲ್ಲಿ ಮೇಷ್ಟ್ರುಗಳ ಕರ್ತವ್ಯ, ಸೇವೆ ಅದರ ಬೆಲೆಕಟ್ಟಲಾಗದ ಮೌಲ್ಯವನ್ನು ಕಥೆ ಪುನರುಚ್ಚರಿಸುತ್ತದೆ.

ಈ ಕಥೆಯಲ್ಲಿ ಪ್ರತಿಮಾತ್ಮಕತೆಯ ಅಂಶಗಳು ಕಡಿಮೆಯೇ ಎಂದು ಹೇಳಬೇಕು. ಆದರೂ ಸರಳ ನಿರೂಪಣ ಸೈಲಿ ಹೊಂದಿರುವ ಈ ಕಥೆಯು ತನ್ನ ಸರಾಗತೆಯ ಒಡಲಿನಲ್ಲಿ ಅರಿವಿನ ಬೆಳಕನ್ನು ತೋರಿಸಲು ಪ್ರಯತ್ನಿಸುತ್ತದೆ. ಕಥೆಯ ಗತಿ ಸಾಗಿದಂತೆ ನಮ್ಮ ಬಾಲ್ಯ, ನಾವು ಓದಿದ ಶಾಲೆ ನಮ್ಮ ಮೇಷ್ಟ್ರು ಮೊದಲಾದ ಅಂಶಗಳು ನಮ್ಮ ನೆನಪಿನ ಅಂಗಳದಲ್ಲಿ ಮರಕಳಿಸದೆ ಇರಲಾರವು.

ಬದುಕು ಕಲಿಸುವ ಕನ್ನಡ ಮಾಸ್ತರ ಮತ್ತು ನಿರ್ಭಾವುಕ ಪ್ರಪಂಚದ ಸಾಫ್ಟ್‌ವೇರ್ ಜಗತ್ತನ್ನು ಪರಿಚಯಿಸುವ ಕಥೆ ಪ್ರಹ್ಲಾದನ ಕಣ್ಣು ತೆರೆಸುವುದರೊಂದಿಗೆ ಬದಲಾವಣೆಯ ಆಶಯದೊಂದಿಗೆ ಮುಕ್ತಾಯವಾಗುತ್ತದೆ. ಬದಲಾವಣೆಗೆ ಒಳಪಟ್ಟ ಪ್ರಹ್ಲಾದನ ಬದಲಾವಣೆಯ ಮಾತುಗಳಿವು... "ಅಪ್ಪ ರಾಧಳಂತಹ ವ್ಯಕ್ತಿ ನನ್ನ ಜೀವನದಲ್ಲಿ ಖಂಡಿತಾ ಸಿಗಂಗಿಲ್ಲ ಅನಿಸ್ತದೆ. ಹಗಲು ರಾತ್ರಿ ಎಂಬ ಖಬರಿಲ್ಲದಂಗೆ ದುಡಿದು ಯಾರೋ ಅಮೇರಿಕಾದೋರು ಉಪಯೋಗಿಸುವ ಸಾಫ್ಟ್‌ವೇರ್ ಬರೀತೀವಿ. ಅವರಿಗೆ ನಾವ್ಯಾರೋ ಗೊತ್ತಿಲ್ಲ ನಮಗೆ ಅವರ್ಯಾರೋ ಗೊತ್ತಿಲ್ಲ ಇಬ್ಬರಿಗೂ ಗೊತ್ತಿರುವುದು ಕೆಲಸಕ್ಕಾಗಿ ನಿಗಧಿಯಾಗಿರೋ ಬಡ್ಮಟ್ ಮಾತ್ರ." ನಮ್ಮ ನೆಲಬೇರು ಸಂಬಂಧಗಳ ಮರೆತು, ಹಣಕ್ಕಾಗಿ ಖಬರಿಲ್ಲದೆ ಹಗಲು ರಾತ್ರಿ ದುಡಿಯುವ ಸಂವೇದನಾ ರಹಿತ ಪ್ರಪಂಚಕ್ಕೆ ಪ್ರಹ್ಲಾದ ಒಂದು ಎಚ್ಚರದ ಧ್ವನಿಯಾಗಿದ್ದಾನೆ.

ಸಂಪ್ರದಾಯ ಜೀವನ ಶೈಲಿ ಮತ್ತು ಆಧುನಿಕ ಜೀವನ ಶೈಲಿಯಎರಡು ಜಗತ್ತುಗಳನ್ನು ಮುಖಾಮುಖಿಯಾಗಿಸುವ ಕಥೆಯು ಜೀವನ ಮೌಲ್ಯ, ಮಾನವೀಯ ಸಂಬಂಧಗಳನ್ನು ಜೀವಂತವಾಗಿಸಲು ಪ್ರಯತ್ನಿಸುತ್ತದೆ.

ವಸುಧೇಂದ್ರರ ಮತ್ತೊಂದು ಕಥೆ 'ಬ್ರಹ್ಮಸೃಷ್ಟಿ'. ಇದು ಒಂದೇ ಪುಟದಷ್ಟಿರುವ ಅತ್ಯಂತ ಚಿಕ್ಕ ಕತೆ. ಇದಕ್ಕೆ ಒಂದೇ ಪುಟದ ವ್ಯಾಪ್ತಿ ಇದ್ದರೂ ಕತೆ ಮುಗಿದ ಮೇಲಿನ ಚಿಂತನೆಯ ವ್ಯಾಪ್ತಿ ವಿಸ್ತಾರವಾದುದಾಗಿದೆ. ನಾವು ನಮ್ಮ ಬಗ್ಗೆ ಮಾತನಾಡುವಾಗ, ಪರರ ಬಗ್ಗೆ ಎಲ್ಲಾ ಗೊತ್ತು ಎಂದು ಮಾತನಾಡುವಾಗ ಕೈಗೊಳ್ಳಬೇಕಾದ ಎಚ್ಚರವನ್ನು ಕತೆ ಹೇಳುತ್ತದೆ.

ಹುಟ್ಟಿನಿಂದಲೇ ಕಣ್ಣಿನ ದೋಷವಿದ್ದವನೊಬ್ಬ ಈ ಕತೆಯ ನಾಯಕ. ಒಬ್ಬ ವಿಚಿತ್ರ, ವಿಶೇಷ ಎನಿಸಬಹುದಾದ ವ್ಯಕ್ತಿ, ಈತನೇ ಕಥೆಯ ಏಕ ಮಾತ್ರ ಪಾತ್ರ ಕೂಡ. ಹಸಿರು ಕೆಂಪಾಗಿ ಕಾಣುವುದು, ಕೆಂಪು ಹಸಿರಾಗಿ ಕಾಣುವುದು ಇವನ ದೃಷ್ಟಿದೋಷ. ಹಾಗಾಗಿಯೇ ರಸ್ತೆಯ ಮೇಲೆ ಅಪಘಾತವಾಗಿ ಮಲಗಿದ್ದ ವ್ಯಕ್ತಿಯ ಹಸಿರು ರಕ್ತ ಅವನಲ್ಲಿ ಭಯ ಹುಟ್ಟಿಸಿದರೆ, ಆಕಾಶದಲ್ಲಿ ಹಾರಾಡುವ ಕೆಂಪುಗಿಳಿ ಅವನಿಗೆ ಸಂತಸ ನೀಡುತ್ತದೆ. ರೈಲ್ವೆ ಗಾರ್ಡ್ ಆಗಿ ಉದ್ಯೋಗಕ್ಕೆ ಸೇರಿದ ಈತ ಎಂದಿಗೂ ತನ್ನ ದೃಷ್ಟಿ ದೋಷವನ್ನು ಹೊರ ಜಗತ್ತಿಗೆ ತೋರ್ಪಡಿಸದೆ ಚೆನ್ನಾಗಿ ಕರ್ತವ್ಯ ನಿರ್ವಹಿಸುವಲ್ಲಿ ಅವನ ಜಾಣ್ಮೆ ಎದ್ದು ಕಾಣುತ್ತದೆ. ಎಲ್ಲರ ಹಾಗೆ ಹೆಂಡತಿ ಮಕ್ಕಳ ಸಂಸಾರ ಹೊಂದಿ ಸುಖಿಯಾಗಿ ಬಾಳಿದವನಿವನು. "ಮಸೀದಿಯ ಮೇಲಿನ ಹಸಿರು ಧ್ವಜ ಕೆಂಪಾಗಿ ಕಾಣುತ್ತದೆ. ಮಂದಿರದ ಮೇಲಿನ ಕೆಂಪು ಧ್ವಜ ಹಸಿರಾಗಿ ಕಾಣುತ್ತದೆ" ಎಂಬಲ್ಲಿ ಕೂಡ ಹೀಗೆ ಆಗುವುದುಂಟು. ಆಗ ನಮ್ಮ ಚಿಂತನೆ, ಆಲೋಚನೆಗಳು ಅತ್ಯಂತ ಮಾನವೀಯವಾಗಿದ್ದಲ್ಲಿ ಕಾಮಾಲೆ ಕಣ್ಣಿಗೆ ಲೋಕ ಹಳದಿಯಾಗುವ ಅಪಾಯದಿಂದ ಪಾರಾಗಬಹುದು.

ಕಥೆಯ ಸಂವಿಧಾನ ಏಕ ಪಾತ್ರದಿಂದ ಕೂಡಿರುವುದು ವಿಶೇಷ. ಹುಟ್ಟಿನಿಂದ ಕಣ್ಣಿನಲ್ಲಿ ದೋಷವುಳ್ಳ ವ್ಯಕ್ತಿಗೆ ಹಸಿರು ಬಣ್ಣ ಕೆಂಪಾಗಿ, ಕೆಂಪು ಬಣ್ಣ ಹಸಿರಾಗಿ ಕಾಣುತ್ತದೆ. ಕತೆಗಾರ ಈತನ ತಂದೆ ತಾಯಿಗಳಿಗೂ ಇವನ ದೋಷ ತಿಳಿಯದಂತೆ ಜಾಣ್ಮೆ ಕಾಯ್ದುಕೊಂಡಿದ್ದಾನೆ. ಅವರು ಹಸಿರು ಬಣ್ಣವನ್ನು ಪರಿಚಯಿಸುವಾಗ ಅದು ಕೆಂಪಾಗಿ ಕಾಣುತ್ತಿದ್ದರೂ ಹಸಿರು ಎಂದೇ, ಕೆಂಪು ಬಣ್ಣವನ್ನು ತಿಳಿಸುವಾಗ ಅದು ಹಸಿರಾಗಿ ಕಾಣುತ್ತಿದ್ದರೂ ಕೆಂಪು ಬಣ್ಣವೆಂದೇ ಭಾವಿಸುತ್ತಾನೆ. ಶಾಲಾ ದಿನಗಳಲ್ಲಿ ದಿನಗಳಲ್ಲಿ ರಸ್ತೆ ದಾಟುವಾಗ ಹಸಿರು ದೀಪ ಹೊತ್ತಿಕೊಂಡರೆ ತನಗೆ ಕೆಂಪಾಗಿ ಕಂಡರು ಹಸಿರು ದೀಪ ಮೂಡಿತು ಎಂದು ರಸ್ತೆ ದಾಟಬಲ್ಲ ಚತುರನಿವ. ಆದರೆ ಆಕಾಶದಲ್ಲಿ ಕೆಂಪು ಗಿಳಿ ನೋಡಿ ತುಂಬಾ ಖುಷಿಪಡುತ್ತಿದ್ದ. 'ಕೆಂಪು ಗಿಳಿ' ವಸುಧೇಂದ್ರ ಅವರ ಚೇಳು ಕಥಾ ಸಂಕಲನದಲ್ಲಿ ಬರುವ ಒಂದು ಅದ್ಭುತ ಕಥೆ. ಅದರಲ್ಲಿ ಇಂದಿನ ರಾಜಕೀಯ ಸ್ಥಿತಿಗತಿಗಳು, ಬಳ್ಳಾರಿ ಗಣಿದಣಿಗಳ ಭ್ರಷ್ಟಾಚಾರವನ್ನು, ಇದರ ಪರಿಣಾಮವಾಗಿ ನಮ್ಮ ಭೂಮಿ, ಭೂಮಿಯ ಸಕಲ ಜೀವಚರಗಳು ಅನುಭವಿಸುತ್ತರುವ ನೋವನ್ನು ಮನೋಗ್ನವಾಗಿ ಚಿತ್ರಿಸಿದ್ದಾರೆ. ಇಡೀ ವ್ಯವಸ್ಥೆಯನ್ನು ಪ್ರತಿನಿಧಿಸುವ ಹಸಿರು ಗಿಳಿ ಮನುಷ್ಯನ ದುರಾಸೆ, ಕ್ರೌರ್ಯಗಳಿಂದ ಕೆಂಪು ಗಿಳಿಯಾಗಿ ಕಾಣುವುದು ಪ್ರಕೃತಿಯ ವಿನಾಶ ಮನುಕುಲದ ವಿನಾಶದ ಮುನ್ಸೂಚನೆಯು ಹೌದು.

ನಮ್ಮ ಬಗ್ಗೆ ನಮಗೆ ಇರುವ ಮಾಹಿತಿ, ತಿಳುವಳಿಕೆ, ಜ್ಞಾನ, ಅರಿವು ಯಾವಾಗಲೂ ಅಲ್ಪವೆಂದೇ ಹೇಳಬೇಕು. ಹಾಗಾಗಿ ಮತ್ತೊಬ್ಬರ ಬಗ್ಗೆ, ಅವರ ವರ್ತನೆ, ನಡವಳಿಕೆ, ಒಟ್ಟು ವ್ಯಕ್ತಿತ್ವದ ಬಗ್ಗೆ ಮಾತನಾಡಲು ನಾವು ಅರ್ಹರಲ್ಲ ಹಾಗೂ ನಮಗೆ ಪರರ ವ್ಯಕ್ತಿತ್ವದ ಬಗ್ಗೆ ಮಾತನಾಡಲು, ಅವರನ್ನು ಅಳೆದು ಸುರಿದು ತೂಗಿ ಲೆಕ್ಕ ಹಾಕಿ ಹೀಗೆಯೇ ಎಂದು ಹೇಳಲು ನಮಗೆ ಯಾವುದೇ ಹಕ್ಕಿಲ್ಲ ಎಂಬುದು ಕತೆಯ ಆಶಯವಾಗಿದೆ.

ಲಹರಿ, ಪ್ರಬಂಧ ಎನ್ನಬಹುದಾದ ಬರಹ ಇಲ್ಲಿ ಚಿಕ್ಕದೊಂದು ಕಥೆಯಾಗಿ ಓದುಗನಿಗೆ ಒಂದು ಪ್ರಶ್ನೆಯಾಗಿ ರೂಪುಗೊಂಡಿದದೆ. ಅಂತೆಯೇ ಅಂತರಂಗದ ಬೆಳಕು ಹೊರಗಿನ ಎಲ್ಲ ಕೊರತೆ, ನ್ಯೂನ್ಯತೆಗಳನ್ನು ಮುಚ್ಚಬಲ್ಲುದು, ಅದಕ್ಕೆ ಜಾಣ್ಮೆಯು ಬೇಕು ಎಂಬುದನ್ನು ಕತೆ ಮನದಟ್ಟು ಮಾಡುತ್ತದೆ. ಅಂತೆಯೇ ದೃಷ್ಟಿದೋಷ ಉಳ್ಳವನಿಗೆ ಮಾತ್ರ ಈ ಜಗತ್ತು ಸುಂದರವಾಗಿ ಕಾಣುವುದು ಬೆತ್ತಲೆ ರಾಜ್ಯದಲ್ಲಿ ಬಟ್ಟೆ ತೊಟ್ಟವನು ಮುರ್ಖನಾಗಿ, ಹುಚ್ಚನಾಗಿ ಕಾಣುವಂತೆ, ಬಾಯಿಯಿದ್ದು ಮೂಕನಾಗುವ, ವಿಚಾರವಿದ್ದು ಅಸಹಾಯಕನಾಗುವ ಮನುಷ್ಯರನ್ನು ಕಥೆ ಧ್ವನಿಸುತ್ತದೆ.

ಒಟ್ಟಾರೆ ಬಳ್ಳಾರಿ–ಬೆಂಗಳೂರು ಮಿಶ್ರಿತ ಕನ್ನಡ ಭಾಷೆಯಲ್ಲಿ ಮೈ ತಳೆದ ಇಲ್ಲಿನ ಕಥೆಗಳು ಸಮಾಜದ ಸ್ವಾಸ್ಥ್ಯಕ್ಕಾಗಿ ಪರಿವರ್ತನೆಯ ಆಶಯ ಹೊತ್ತು ರೂಪುಗೊಂಡಿವೆ. ಕನ್ನಡದ ಮಹತ್ವದ ಕಥೆಗಾರರಾದ ವಸುಧೇಂದ್ರರ ಕಥೆಗಳು ಆಧುನಿಕ ಸಮಾಜದ ಹೊಸ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದರೆ ಅತಿಶಯೋಕ್ತಿಯಲ್ಲ.

❖❖❖

RNI Reg No. : KARKAN /2012/49251

CHINTHANA BAYALU **A Peer Reviewed Journal** **ISSN 2278-2192**
Kannada Quarterly, Volume 12, Issue 2, October - December 2023
Included in UGC - CARE List
Edited, Published, Printed & Owned by
Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219
chinthanabayalu@gmail.com
Printed at
Aakrithi Prints
Light House Hill Road, Mangaluru - 575 001

Pages : 64

ವಾರ್ಷಿಕ ಚಂದಾ : ರೂಪಾಯಿ ಇನ್ನೂರು
(ಅಂಚೆ ವೆಚ್ಚ ಸೇರಿ)
ಮೂರು ವರ್ಷಗಳಿಗೆ : ರೂಪಾಯಿ ಆರುನೂರು
ಐದು ವರ್ಷಗಳಿಗೆ : ರೂಪಾಯಿ ಒಂದು ಸಾವಿರ
ಆಜೀವ (ಪೋಷಕ) ಚಂದಾ : ರೂಪಾಯಿ ಐದು ಸಾವಿರ
ಮಹಾಪೋಷಕ ಚಂದಾ : ರೂಪಾಯಿ ಹತ್ತು ಸಾವಿರ
ಬಿಡಿ ಪ್ರತಿ : ರೂಪಾಯಿ ಐವತ್ತು

ದಯವಿಟ್ಟು ಡಿ.ಡಿ./ ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

ಕರ್ನಾಟಕ ಬ್ಯಾಂಕ್
ಬಂಟ್ವಾಳ ಮೂಡ ಶಾಖೆಯಲ್ಲಿ
ಚಿಂತನ ಬಯಲು ಹೆಸರಿನಲ್ಲಿರುವ
ಕರೆಂಟ್ ಅಕೌಂಟ್ ಸಂಖ್ಯೆ : 0712000100041401
IFSC : KARB0000071

ಸುಲಭ ಬ್ಯಾಂಕಿಂಗ್ ಸೇವೆಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಅಥವಾ 1800 425 1444 ಗೆ ಕರೆ ಮಾಡಿರಿ.

ಕರ್ನಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.
ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002
ಇಮೇಲ್: info@ktkbank.com ವೆಬ್‌ಸೈಟ್: www.karnatakabank.com